ಮಂಗಳವಾರ, ಸೆಪ್ಟೆಂಬರ್ 12, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 254 | ಪುಟ 12

www.prajavani.net

prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ನಿರ್ಜಲೀಕರಣದಿಂದ ಉಂಟಾಗುವ ಸಮಸ್ಯೆಗಳಿಂದ ಪಾರಾಗಲು ದೇಹಕ್ಕೆ ಅಗತ್ಯವಿರುವಷ್ಟು ನೀರು ಸೇವನೆ ಮಾಡಿ

ಆಳ-ಅಗಲ 'ಬಡತನ ತೋರಿಸಿಕೊಳ್ಳಲು ಅವಮಾನವೇ?'

20 ಸಾವಿರ ದಾಟಿದ ನಿಫ್ಟಿ 8

ಡಚ್ ಕಂಪನಿಗಳಿಂದ ಹೂಡಿಕೆ: ಶೀಘ್ರ ಸಭೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
67,127 ▲	19,996 ▲	₹60,900 (ಬೆಂಗಳೂರು)	₹73,100 (ಬೆಂಗಳೂರು)	83.03 ▼

ಪ್ರಜ್ವಲ್ ರೇವಣ್ಣ ಮಧ್ಯಂತರ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾವು ಲೋಕಸಭೆಗೆ ಆಯ್ಕೆಯಾಗಿರುವುದನ್ನು ಅಸಿಂಧು ಗೊಳಿಸಿ ಹೊರಡಿಸಿರುವ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸು-ವತನಕ ಆದೇಶಕ್ಕೆ ತಡೆಯಾಜ್ಞೆ ನೀಡುವಂತೆ ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಪ್ರಜ್ವಲ್ ಅವರ ಅರ್ಜಿ ಕುರಿತು ಇದೇ 8ರಂದು ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರ ಪೀಠ ಸೋಮವಾರ ಪ್ರಕಟಿಸಿದೆ. ವಿಸ್ತೃತ ಆದೇಶ ಬಿಡುಗಡೆಯಾಗಬೇಕಿದೆ.

ಹೈಕೋರ್ಟ್ ಆದೇಶದಿಂದಾಗಿ ಪ್ರಜ್ವಲ್ ಅವರಿಗೆ ಸುಪ್ರಿಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ದಾರಿಯೊಂದೇ ಉಳಿದಿದೆ.

9ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಹರಿಪ್ರಸಾದ್ ವಾಗ್ದಾಳಿ • ಸಿದ್ದರಾಮಯ್ಯ ಬೆನ್ನಿಗೆ ಸಚಿವರು • ಮಧ್ಯಪ್ರವೇಶಿಸಿದ ಹೈಕಮಾಂಡ್?

'ಕೈ' ಮಾತಿನ ಸಮರ ಬಿರುಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿ ಪ್ರಸಾದ್ ನಡೆಸುತ್ತಿರುವ ಪರೋಕ್ಷ ವಾಗ್ದಾಳಿ 'ಕೈ' ಪಾಳಯದಲ್ಲಿ ಚರ್ಚೆಗೆ ಕಾರಣವಾಗಿದ್ದು, ಕೆಲವು ಸಚಿವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ತಮ್ಮನ್ನು ಕೀಳಾಗಿ ಟೀಕಿಸುತ್ತಿರುವ ಹರಿಪ್ರಸಾದ್ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹೈಕಮಾಂಡ್‌ಗೆ ದೂರು ಸಲ್ಲಿಸಿದ್ದಾರೆ. ಟೀಕೆಗಳನ್ನು ಮುಂದುವರಿಸದಂತೆ ಪಕ್ಷದ ನಾಯಕರು ಹರಿಪ್ರಸಾದ್‌ಗೆ ಸೂಚಿಸಿದ್ದಾರೆ' ಎಂದು ಪಕ್ಷದ ಮೂಲಗಳು ಹೇಳಿವೆ.

ಹೈಕಮಾಂಡ್ ಮಧ್ಯ ಪ್ರವೇಶಿಸಿರುವ ಬೆನ್ನಲ್ಲೇ, ಐವರು ಸಚಿವರು ಹರಿಪ್ರಸಾದ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ್ದಾರೆ. ಆದರೆ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದೇ ಇರುವುದು ಪಕ್ಷದೊಳಗೆ ಚರ್ಚೆಯನ್ನು ಹುಟ್ಟುಹಾಕಿದೆ.

ಪಕ್ಷದಲ್ಲಿ ಹಿರಿಯನಾಗಿದ್ದರೂ ಸರ್ಕಾರದಲ್ಲಿ ಸೂಕ್ತ ಸ್ಥಾನಮಾನ ಸಿಕ್ಕಿಲ್ಲವೆಂಬ ಕೋಪ ಹರಿಪ್ರಸಾದ್ ಅವರದ್ದಾಗಿದೆ. ಹಿಂದುಳಿದ ಸಮುದಾಯದಿಂದ ಬಂದ ತಮ್ಮನ್ನು ಸಚಿವ ಸ್ಥಾನಕ್ಕೆ ಪರಿ-ಗಣಿಸದಿರಲು ಸಿದ್ದರಾಮಯ್ಯ ಕಾರಣ ಎಂದು ಮುನಿಸಿಕೊಂಡಿರುವ ಅವರು, ಸಂದರ್ಭ ಸಿಕ್ಕಾಗಲೆಲ್ಲ ಬಹಿರಂಗವಾಗಿ ಅಸಮಾಧಾನ ಹೊರಹಾಕುತ್ತಿದ್ದಾರೆ.

9ನೇ ಪುಟ ನೋಡಿ

'ದೂರು ನೀಡುವವರು ಮೊದಲು ಹಗರಣಗಳಿಂದ ಪಾರಾಗಲಿ'

ಕುಕನೂರು (ಕೊಪ್ಪಳ): 'ನನ್ನ ವಿರುದ್ಧ ಹೈಕಮಾಂಡ್‌ಗೆ ದೂರು ನೀಡುವವರು ಅದಕ್ಕೂ ಮೊದಲು ತಮ್ಮ ಮೇಲಿರುವ ಹಗರಣಗಳಿಂದ ಪಾರಾಗಲಿ. ಹಗರಣಗಳಿಂದ ಪಾರಾಗುವ ಸಲುವಾಗಿಯೇ ನನ್ನ ವಿರುದ್ಧ ಕೆಲವರು ಹೇಳಿಕೆ ನೀಡುತ್ತಿದ್ದಾರೆ' ಎಂದು ಬಿ.ಕೆ. ಹರಿಪ್ರಸಾದ್ ಆರೋಪಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಕ್ಷದ ರಾಜ್ಯ ಉಸ್ತುವಾರಿಗೆ ದೂರು ನೀಡುವುದಾಗಿ ಕೆಲವರು ಹೇಳುತ್ತಿದ್ದಾರೆ. ಉಸ್ತುವಾರಿಗೆ ಮಾತ್ರ ಯಾಕೆ, ಎಲ್ಲರಿಗೂ ದೂರು ನೀಡಲಿ' ಎಂದರು.

'ನನ್ನ ವಿರುದ್ಧ ದೂರು ನೀಡುವವರು ಮೊದಲು ತಾವು ಏನೆಂದು ತಿಳಿದುಕೊಳ್ಳಬೇಕು. ತಮ್ಮ ಮೇಲಿರುವ ಹಗರಣಗಳಿಂದ ಪಾರಾಗಲು ದೂರು ನೀಡುತ್ತಿದ್ದಾರೆ' ಎಂದು ಮಾಲೂರು ಶಾಸಕ ಕೆ.ವೈ. ನಂಜೇಗೌಡ ಮೇಲೆ ಅಸಮಾಧಾನ ಹೊರಹಾಕಿದರು. ಅವರಿಗೆ ಹಗರಣಗಳಿಂದ ಪಾರಾಗುವ ಧೈರ್ಯವಿದ್ದರೆ ದೂರು ನೀಡುವ ಹೇಳಿಕೆಗಳನ್ನು ನಿರಂತರವಾಗಿ ನೀಡುತ್ತಲೇ ಇರಲಿ' ಎಂದರು.

ಹೈಕಮಾಂಡ್ ಅಂಗಳಕ್ಕೆ ಭಿನ್ನಾಭಿಪ್ರಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ನಡುವಿನ ಭಿನ್ನಾಭಿಪ್ರಾಯವು ಇದೀಗ ಕಾಂಗ್ರೆಸ್ ಹೈಕಮಾಂಡ್ ಅನ್ನು ತಲುಪಿದೆ. ಹರಿಪ್ರಸಾದ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಿದ್ದರಾಮಯ್ಯ ಅವರು ವರಿಷ್ಠರಿಗೆ ಮನವಿ ಮಾಡಿದ್ದಾರೆ.

ಹರಿಪ್ರಸಾದ್ ಶನಿವಾರ ನೀಡಿರುವ ಹೇಳಿಕೆ ಕುರಿತು ಮುಖ್ಯಮಂತ್ರಿಯವರು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ದೂರವಾಣಿ ಕರೆಮಾಡಿ ಮಾತನಾಡಿದ್ದಾರೆ. ಹರಿಪ್ರಸಾದ್ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಭವಿಷ್ಯದಲ್ಲಿ ಅವರು ಇಂತಹ ಹೇಳಿಕೆ ನೀಡದಿರುವಂತೆ ಎಚ್ಚರಿಕೆ ನೀಡಬೇಕು ಎಂದು ಕೋರಿದ್ದಾರೆ. ಇಂತಹ ಹೇಳಿಕೆಗಳಿಂದ ಲೋಕಸಭಾ ಚುನಾವಣೆ ಮೇಲೆ ಪರಿಣಾಮ ಬೀರಲಿದೆ ಎಂಬುದಾಗಿಯೂ ಅವರು ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

9ನೇ ಪುಟ ನೋಡಿ

ಪಕ್ಷ ವಿರೋಧಿ ಚಟುವಟಿಕೆ ಹೇಗಾಗುತ್ತದೆ: ಪ್ರಿಯಾಂಕ್

'ಹರಿಪ್ರಸಾದ್ ಪಕ್ಷದ ಒಬ್ಬ ಹಿರಿಯ, ಅನುಭವಿ ನಾಯಕ. ಅವರಿಗೆ ತಮ್ಮ ಜವಾಬ್ದಾರಿ ಗೊತ್ತಿದೆ. ರಾಜ್ಯಮಟ್ಟದಲ್ಲಿ ಮಾತ್ರವಲ್ಲ ರಾಷ್ಟ್ರ ಮಟ್ಟದಲ್ಲೂ ಹಿರಿಯ ನಾಯಕರೆಲ್ಲ ಅವರಿಗೆ ಗೊತ್ತು. ಅವರು ತಮ್ಮ ಸಮಾಜದ ಬಗ್ಗೆ ಮಾತನಾಡಿದರೆ ಅದು ಪಕ್ಷ ವಿರೋಧಿ ಚಟುವಟಿಕೆ ಹೇಗಾಗುತ್ತದೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

'ತಮ್ಮ ಮಾತುಗಳಲ್ಲಿ ಅವರು ಎಲ್ಲೂ ಮುಖ್ಯಮಂತ್ರಿಯವರ ಹೆಸರನ್ನು ಪ್ರಸ್ತಾಪಿಸಿಲ್ಲ. ಸಿದ್ದರಾಮಯ್ಯನವರೂ ಅದನ್ನೇ ಹೇಳಿದ್ದಾರೆ. ಇನ್ನು ನಾನು ಏನು ಹೇಳಲು ಸಾಧ್ಯ' ಎಂದು ಪ್ರತಿಕ್ರಿಯಿಸಿದ್ದಾರೆ.

ಕಾವೇರಿ: ಸಭೆ ಇಂದು

ನವದೆಹಲಿ: ಕಾವೇರಿ ನದಿ ನೀರು ನಿಯಂತ್ರಣ ಸಮಿತಿಯ ಸಭೆ (ಸಿಡಬ್ಲ್ಯುಆರ್‌ಸಿ) ಮಂಗಳವಾರ ನಡೆಯಲಿದೆ. 4B

ಒಳ ಪುಟ

ಮುಷ್ಕರ: ಸಾರ್ವಜನಿಕರ ಪರದಾಟ 3

ಮೋದಿಗೆ ಬೈಡನ್ ಕಿವಿಮಾತು

ಪ್ರಜಾವಾಣಿ ವಾರ್ತೆ

ಮಾನವ ಹಕ್ಕು ರಕ್ಷಣೆ

ನವದೆಹಲಿ: 'ಮಾನವ ಹಕ್ಕುಗಳು ಮತ್ತು ಮಾಧ್ಯಮ ಸ್ವಾತಂತ್ರ್ಯಕ್ಕೆ ಹೆಚ್ಚಿನ ಗೌರವ ನೀಡಬೇಕು ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರ ಜತೆಗಿನ ದ್ವಿಪಕ್ಷೀಯ ಮಾತುಕತೆ ವೇಳೆ ಒತ್ತುಕೊಟ್ಟು ಹೇಳಿದ್ದೇನೆ' ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ವಿಯೆಟ್ನಾಂನ ಹನೋಯಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಯಾವಾಗಲೂ ಮಾಡುವಂತೆ (ಮೋದಿ ಅವರ ಜೊತೆಗಿನ) ಈ ಮಾತುಕತೆಯ ವೇಳೆಯೂ ಮಾನವ ಹಕ್ಕುಗಳಿಗೆ ಗೌರವ ಕೊಡಬೇಕೆಂಬ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ಸದೃಢ ರಾಷ್ಟ್ರ ನಿರ್ಮಾಣದಲ್ಲಿ ಮಾಧ್ಯಮದ ಸ್ವಾತಂತ್ರ್ಯದ ಮಹತ್ವದ ಕುರಿತೂ ಒತ್ತಿ ಹೇಳಿದ್ದೇನೆ. ನಾನು ಕೂಡ ಈ ಎರಡೂ ವಿಷಯಗಳನ್ನು ಗೌರವಿಸುತ್ತೇನೆ' ಎಂದಿದ್ದಾರೆ.

ನವದೆಹಲಿಯಲ್ಲಿ ನಡೆದ ಜಿ20 ಶೃಂಗಸಭೆಯಲ್ಲಿ ಬೈಡನ್ ಪಾಲ್ಗೊಳ್ಳಲು ಬಂದಿದ್ದರು.

9ನೇ ಪುಟ ನೋಡಿ

ಭೂ ಒತ್ತುವರಿ: ಬೃಹತ್ ಕಟ್ಟಡಗಳ ತೆರವಿಗೆ ಸೂಚನೆ

ಬೆಂಗಳೂರು: ಸರ್ಕಾರಿ ಭೂಮಿ ಒತ್ತುವರಿ ಮಾಡಿ ಬೃಹತ್ ಕಟ್ಟಡ ನಿರ್ಮಿಸಿರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ತೆರವು ಮಾಡಬೇಕು. ಈ ವಿಚಾರದಲ್ಲಿ ಹೊಣೆಗಾರಿಕೆ ನಿಭಾಯಿಸದ ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ. 4A

ಕೊಹ್ಲಿ, ರಾಹುಲ್ ಶತಕ ವೈಭವ

ಕೊಲಂಬೊ: ವಿರಾಟ್ ಕೊಹ್ಲಿ ಮತ್ತು ಕೆ.ಎಲ್.ರಾಹುಲ್ ಅವರ ಅಜೇಯ ಶತಕಗಳ ನೆರವಿನಿಂದ ಭಾರತ ತಂಡ, ಸೋಮವಾರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಮಣಿಸಿತು.

ಭಾರತಕ್ಕೆ ಪಾಕ್ ವಿರುದ್ಧ 228 ರನ್ ಜಯ

ಭಾರತ: 356/2 (50 ಓವರ್)
ಪಾಕಿಸ್ತಾನ: 128 (32 ಓವರ್)

ರಾಹುಲ್: 111 (ಅಜೇಯ), 106 ಎಸೆತ, 12 ಬೌಂಡರಿ, 2 ಸಿಕ್ಸರ್

ಕೊಹ್ಲಿ: 122 (ಅಜೇಯ), 94 ಎಸೆತ, 9 ಬೌಂಡರಿ, 3 ಸಿಕ್ಸರ್

- ಏಕದಿನ ಕ್ರಿಕೆಟ್‌ನಲ್ಲಿ ಅತಿವೇಗದಲ್ಲಿ 13 ಸಾವಿರ ರನ್ (278 ಪಂದ್ಯ) ಪೂರೈಸಿದ ಕೊಹ್ಲಿ 10
- ಏಕದಿನ ಕ್ರಿಕೆಟ್‌ನಲ್ಲಿ ಕೊಹ್ಲಿ 47ನೇ ಮತ್ತು ರಾಹುಲ್ 6ನೇ ಶತಕ

ತೈಲ ಸಂಸ್ಕರಣೆ ಯೋಜನೆ ಶೀಘ್ರ ಅನುಷ್ಠಾನಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ಭಾರತದ ಪಶ್ಚಿಮ ಕರಾವಳಿ ಪ್ರದೇಶದಲ್ಲಿ 50 ಬಿಲಿಯನ್ ಅಮೆರಿಕನ್ ಡಾಲರ್ (4.15 ಲಕ್ಷ ಕೋಟಿ) ಮೊತ್ತದ ತೈಲ ಸಂಸ್ಕರಣಾ ಯೋಜನೆಯ ಅನುಷ್ಠಾನ-ವನ್ನು ತ್ವರಿತಗೊಳಿಸಲು ಭಾರತ ಹಾಗೂ ಸೌದಿ ಅರೇಬಿಯಾ ಸೋಮವಾರ ನಿರ್ಧರಿಸಿವೆ.

ಭಾರತ–ಸೌದಿ ಅರೇಬಿಯಾ ಕಾರ್ಯತಂತ್ರ ಪಾಲುದಾರಿಕೆ ಮಂಡಳಿಯ ಪ್ರಥಮ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಸೌದಿ ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್ ಬಿನ್ ಅಬ್ದುಲ್ ಅಜೀಜ್ ಅಲ್ ಸೌದ್ ಈ ಕುರಿತು ಚರ್ಚಿಸಿದರು.

ಉಭಯ ದೇಶಗಳ ನಡುವೆ ಜಾರಿಯಲ್ಲಿರುವ ಒಪ್ಪಂದಗಳಿಗೆ ಅನುಗುಣವಾಗಿ ಸಮಗ್ರ ಇಂಧನ ಪಾಲುದಾರಿಕೆಗೆ ಉತ್ತೇಜಕ ಕ್ರಮಗಳನ್ನು ಕೈಗೊಳ್ಳಲು ಇಬ್ಬರೂ ನಾಯಕರು ಸಹಮತ ವ್ಯಕ್ತಪಡಿಸಿದರು.

ನವೀಕರಿಸಬಹುದಾದ ಇಂಧನ, ವಿದ್ಯುತ್ ಸಂಪರ್ಕ ಜಾಲ ಸ್ಥಾಪನೆ, ಸಮುದ್ರದ ನೀರು ಶುದ್ಧೀಕರಿಸುವ ಘಟಕ ಸ್ಥಾಪನೆ ಸೇರಿದಂತೆ ಎಂಟು ಒಪ್ಪಂದಗಳಿಗೆ ಅಂಕಿತ ಹಾಕಿದರು.

9ನೇ ಪುಟ ನೋಡಿ

ಭಾರತದ ಪ್ರಜೆಗಳಾದ ನಾವು
ಇತಿಹಾಸ ನಿರ್ಮಿಸೋಣ

ಇದುವರೆಗೆ
1.5
ಕೋಟಿ ನೋಂದಣಿ

ಭಾರತದ ಸಂವಿಧಾನ

ಪ್ರಸ್ತಾವನೆ

ಭಾರತದ ಜನಗಳಾದ ನಾವು
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ:
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು
ಉಪಾಸನಾ ಸ್ವಾತಂತ್ರ್ಯ:
ಸ್ಥಾನಮಾನ ಹಾಗೂ ಅವಕಾಶ ಸಮಾನತೆ
ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ
ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,
ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

ಜನರ ಅಭೂತಪೂರ್ವ ಪ್ರತಿಕ್ರಿಯೆಯಿಂದ ಅವಧಿ ವಿಸ್ತರಣೆ

ಈಗಲೇ ನೋಂದಾಯಿಸಿ | ದಿನಾಂಕ 14-09-2023 ರಂದು ಸಂಜೆ 6.00 ಗಂಟೆಗೆ ಕೊನೆಗೊಳ್ಳಲಿದೆ.

24x7 Helpline : 94823 00400

www.thepreamble-swdkar.in

ವಿವರಗಳಿಗಾಗಿ ಹಾಗೂ ನೋಂದಣಿಗೆ QR CODE SCAN ಮಾಡಿ.

ಸಮಾಜ ಕಲ್ಯಾಣ ಇಲಾಖೆ

ಬನ್ನಿ ಓದೋಣ...

ದಿನಾಂಕ : 15ನೇ ಸೆಪ್ಟೆಂಬರ್ 2023, ಬೆಳಿಗ್ಗೆ 10.00 ಗಂಟೆಗೆ
ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಂದ
ಸಹಸ್ರಾರು ಮಕ್ಕಳೊಂದಿಗೆ ಸಂವಿಧಾನ ಪೀಠಿಕೆ ವಾಚನದೊಂದಿಗೆ
ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಸಂಭ್ರಮಾಚರಣೆ



ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು, ಭಾರತದ ಸಂವಿಧಾನದಲ್ಲಿ ಪ್ರತಿಪಾದಿತವಾಗಿರುವ ಪ್ರಜಾಪ್ರಭುತ್ವ ತತ್ವಗಳ ಕುರಿತು ಮಾತನಾಡುತ್ತಿರುವುದು.

AMBEDKAR DEVELOPMENT CORPORATION | KARNATAKA MAHARSHI VALMIKI SCHEDULED TRIBES DEVELOPMENT CORPORATION LTD | KARNATAKA ADIJAMBAVA DEVELOPMENT CORPORATION | LIDKAR | KARNATAKA THANDA

ಭಾರತದ ಸಾರ್ವಭೌಮತ್ವ, ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು; ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ThePreambleGoK

ಚರ್ಚ್ ಸ್ಟ್ರೀಟ್‌ನಲ್ಲಿ ಚಹಾ ಸವಿದ ನೆದರ್ಲೆಂಡ್ಸ್ ಪ್ರಧಾನಿ ಮಾರ್ಕ್ ರುಟ್ಟೆ

‘ಉಕ್ರೇನ್ ವಿಚಾರದಲ್ಲಿ ರಾಜಿಯಾಗಿದ್ದೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿ–20 ಶೃಂಗಸಭೆಯ ದೆಹಲಿ ಘೋಷಣೆಯಲ್ಲಿ ಉಕ್ರೇನ್ ವಿಚಾರದಲ್ಲಿ ನಾವು ಸ್ಪಷ್ಟವಾಗಿ ರಾಜಿಯಾಗಿದ್ದೇವೆ’ ಎಂದು ನೆದರ್ಲೆಂಡ್ಸ್ ಪ್ರಧಾನ ಮಂತ್ರಿ ಮಾರ್ಕ್ ರುಟ್ಟೆ ಅವರು ಸೋಮವಾರ ಬೆಂಗಳೂರಿನಲ್ಲಿ ಹೇಳಿದರು.

ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಪತ್ರಕರ್ತರ ಜತೆ ಸೋಮವಾರ ಮಾತನಾಡಿದ ಅವರು, ‘ಜಿ–20ಯಂತಹ ಬಹುರಾಷ್ಟ್ರೀಯ ವೇದಿಕೆಗಳಲ್ಲಿ ಯಾವಾಗಲೂ ಈ ರೀತಿಯೇ ಆಗುತ್ತದೆ. ಆದರೆ, ಉಕ್ರೇನ್ ವಿಷಯಕ್ಕೆ ಸಂಬಂಧಿಸಿದಂತೆ ಕೆಲವೊಂದು ಪ್ರಮುಖ ಅಂಶಗಳು ದೆಹಲಿ ಘೋಷಣೆಯಲ್ಲಿ ಸೇರಿವೆ ಎಂಬುದು ಸಂತಸದ ಸಂಗತಿ. ಇದನ್ನು ಸಾಧ್ಯವಾಗಿಸಿರುವುದು ಭಾರತದ ಪ್ರಯತ್ನ’ ಎಂದರು.

‘ನಾನೊಬ್ಬನೇ ಈ ನಿರ್ಣಯವನ್ನು ಬರೆದಿದ್ದರೆ ಅದು ಖಂಡಿತವಾಗಿಯೂ ಬೇರೆಯದ್ದೇ ರೀತಿಯಲ್ಲೇ ಇರುತ್ತಿತ್ತು. ಆದರೆ, ಇಲ್ಲಿ ನಾವೆಲ್ಲರೂ ಒಂದು ಗುಂಪಾಗಿ ಇದ್ದೆವು. ಭಾರತವು ತನ್ನ ಪ್ರಯತ್ನದ ಮೂಲಕ ನಿರ್ಣಯದಲ್ಲಿ ಕೆಲವು ಅಂಶಗಳನ್ನು ಸೇರಿಸಲು ಪ್ರಯತ್ನಿಸಿದ್ದು ಒಳ್ಳೆಯ ಬೆಳವಣಿಗೆ’ ಎಂದು ಪ್ರಶ್ನೆಯೊಂದಕ್ಕೆ ಮಾರ್ಕ್ ರುಟ್ಟೆ ಉತ್ತರಿಸಿದರು.

ವ್ಯೂಹಾತ್ಮಕ ಸಂಬಂಧ ಅಗತ್ಯ: ‘ಭಾರತ ಮತ್ತು ನೆದರ್ಲೆಂಡ್ಸ್ ಎರಡೂ ದೇಶಗಳು ಆರ್ಥಿಕ ವಿಷಯಕ್ಕೆ ಸೀಮಿತವಾಗಿ ಸಂಬಂಧ ಹೊಂದಿದ್ದರೆ ಸಾಲದು. ವ್ಯೂಹಾತ್ಮಕ ವಿಚಾರಗಳಲ್ಲೂ ಸಂಬಂಧ ವೃದ್ಧಿಯಾಗಬೇಕು. ಈ ಕುರಿತು ನಾನು ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಜಿ20 ಶೃಂಗ ಸಭೆಯಲ್ಲಿ ಭಾನುವಾರ ಚರ್ಚಿಸಿದ್ದೇವೆ’ ಎಂದು ರುಟ್ಟೆ ಹೇಳಿದರು.

ಬೆಂಗಳೂರಿಗೆ ಆಗಮಿಸಿದ್ದ ನೆದರ್ಲ್ಯಾಂಡ್ಸ್ ಪ್ರಧಾನಿ ಚರ್ಚ್ ಸ್ಟ್ರೀಟ್‌ನಲ್ಲಿ ಸುತ್ತಾಡಿದರು

ನೆದರ್ಲೆಂಡ್ಸ್ ಮತ್ತು ಭಾರತದ ಸಂಬಂಧದಲ್ಲಿ ಭದ್ರತೆಗೆ ಸಂಬಂಧಿಸಿದ ವಿಷಯಗಳಿಗೆ ಹೆಚ್ಚು ಆದ್ಯತೆ ನೀಡಬೇಕಿದೆ. ಸ್ಪಷ್ಟವಾಗಿ ಎರಡೂ ರಾಷ್ಟ್ರಗಳು ವಿಶಾಲ ತಳಹದಿಯ ಸಂಬಂಧ ಹೊಂದುವ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕೈಗಾರಿಕೆಗಳ ವಿಸ್ತರಣೆಗೆ ಅವಕಾಶ: ರಾಜ್ಯ ಸರ್ಕಾರದ ಜತೆಗಿನ ಮಾತುಕತೆ ಕುರಿತು ಪ್ರತಿಕ್ರಿಯಿಸಿದ ರುಟ್ಟೆ, ‘ಕರ್ನಾಟಕದಲ್ಲಿ ಒಳ್ಳೆಯ ಆಡಳಿತವಿದೆ. ಇಲ್ಲಿ ತ್ವರಿತ ನಿರ್ಧಾರ ಕೈಗೊಳ್ಳುವ ಸಚಿವರಿದ್ದಾರೆ. ಈ ರಾಜ್ಯದ ಮೇಲೆ ಡಚ್ ಉದ್ಯಮಿಗಳಲ್ಲಿ ವಿಶ್ವಾಸ ಮೂಡಿದೆ’ ಎಂದರು.

ಸಮಗ್ರವಾದ ಸೆಮಿ ಕಂಡಕ್ಟರ್ ಉದ್ಯಮಗಳನ್ನು ಆರಂಭಿಸಲು ಬೆಂಗಳೂರಿನಲ್ಲಿ ಅವಕಾಶಗಳಿವೆ. ಭಾರತದಲ್ಲಿ ಮುಂದಿನ ಹಂತದಲ್ಲಿ ಸೆಮಿ ಕಂಡಕ್ಟರ್ ಮತ್ತು ಚಿಪ್‌ಗಳ ತಯಾರಿಕಾ ಕ್ಷೇತ್ರದಲ್ಲಿ ಹೆಚ್ಚು ಅವಕಾಶಗಳಿವೆ. ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ಈ ಬೆಳವಣಿಗೆಯ ಭಾಗವಾಗಲು ನೆದರ್ಲೆಂಡ್ಸ್ ಉತ್ಸುಕವಾಗಿದೆ ಎಂದು ರುಟ್ಟೆ ಅವರು ಇದೇ ವೇಳೆ ತಿಳಿಸಿದರು.

ಭಾರತದ ಯುಪಿಐ ಪಾವತಿ ವ್ಯವಸ್ಥೆಗೆ ಮೆಚ್ಚುಗೆ ವ್ಯಕ್ತಪಡಿಸಿದ ರುಟ್ಟೆ

ಬೆಂಗಳೂರು: ಭಾರತ ಮತ್ತು ನೆದರ್ಲೆಂಡ್ಸ್ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದು 75 ವರ್ಷಗಳಾಗಿರುವ ನೆನಪಿಗಾಗಿ ನೆದರ್ಲೆಂಡ್ಸ್ ಪ್ರಧಾನಿ ಮಾರ್ಕ್ ರುಟ್ಟೆ ಅವರು ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಸೋಮವಾರ ಸಂಚರಿಸಿ, ಚಹಾ ಸವಿದರು.

ವಿಧಾನಸೌಧದಿಂದ ಎಂ.ಜಿ. ರಸ್ತೆ ಮಾರ್ಗವಾಗಿ ಚರ್ಚ್ ಸ್ಟ್ರೀಟ್‌ಗೆ ಬಂದಿಳಿದ ರುಟ್ಟೆ, ನಡಿಗೆಯಲ್ಲೇ ಸಾಗಿದರು. ಎಂ.ಜಿ. ರಸ್ತೆ ಮೆಟ್ರೊ ರೈಲು ನಿಲ್ದಾಣದ ಪ್ರವೇಶ ದ್ವಾರದ ಬಳಿ ಇರುವ ‘ಚಾಯ್ ಪಾಯಿಂಟ್’ನಲ್ಲಿ ಚಹಾ ಖರೀದಿಸಿದರು. ಯುಪಿಐ ಮೂಲಕ ಹಣ ಪಾವತಿಸಿ, ಚಹಾ ಕಪ್‌ನೊಂದಿಗೆ ಹೆಜ್ಜೆ ಹಾಕಿದರು.

ನೆದರ್ಲೆಂಡ್ಸ್‌ನ ‘ಫಾಸ್ಟ್ ಪೇಮೆಂಟ್’ ಪಾವತಿ ವ್ಯವಸ್ಥೆ ಮತ್ತು ಭಾರತದ ಯುಪಿಐ ಪಾವತಿ ವ್ಯವಸ್ಥೆಯನ್ನು ಜೋಡಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆಯೆ ಎಂಬ ಪ್ರಶ್ನೆಗೆ, ‘ನಿಜವಾಗಿಯೂ ಈ ಬಗ್ಗೆ ಕೆಲವು ವಿಷಯ ಚರ್ಚಿಸಿದ್ದೇವೆ. ಆದರೆ, ಪೂರ್ಣವಾಗಿ ಎರಡನ್ನೂ ಜೋಡಿಸುವ ಬಗ್ಗೆ ಚರ್ಚಿಸಿಲ್ಲ. ಇಲ್ಲಿ ನೀವು ಏನು ಮಾಡುತ್ತಿದ್ದೀರಿ ಎಂಬುದನ್ನು ನಾವು ಸರಿಯಾಗಿ ತಿಳಿಯಬೇಕಿದೆ’ ಎಂದು ಉತ್ತರಿಸಿದರು.

ಖಾಸಗಿತನ, ಬ್ಯಾಂಕಿಂಗ್ ವ್ಯವಸ್ಥೆ, ಕರೆನ್ಸಿ ಸ್ಥಿರತೆ ಸೇರಿದಂತೆ ಹಲವು ವಿಷಯಗಳಿವೆ. ಈ ಎಲ್ಲ ವಿಷಯಗಳ ಮೇಲೂ ಕೆಲಸ ಮಾಡಬೇಕಿದೆ ಎಂದರು.

ಇಕ್ಕೆಲಗಳಲ್ಲಿ ನೆರೆದಿದ್ದ ಜನರತ್ತ ಕೈ ಬೀಸುತ್ತಾ ಬೇರಿ ವೃತ್ತಕ್ಕೆ ಬಂದರು. ನೆದರ್ಲೆಂಡ್ಸ್ ಪ್ರಧಾನಿ ಸಚಿವಾಲಯದ ಅಧಿಕಾರಿಗಳು, ಬೆಂಗಳೂರಿನಲ್ಲಿರುವ ನೆದರ್ಲೆಂಡ್ಸ್ ಕಾನ್ಸುಲ್ ಜನರಲ್ ಮತ್ತು ಅವರ ಕಚೇರಿ ಅಧಿಕಾರಿಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅಧಿಕಾರಿಗಳು ರುಟ್ಟೆ ಅವರೊಂದಿಗೆ ಸಾಗಿ ಬಂದರು.

ಭಾರತ ಮತ್ತು ನೆದರ್ಲೆಂಡ್ಸ್ ಸೌಹಾರ್ದ ಸಂಬಂಧದ ದ್ಯೋತಕವಾಗಿ ಬೇರಿ ವೃತ್ತದಲ್ಲಿರುವ ತಕ್ಷಶಿಲಾ ಇನ್‌ಸ್ಟಿಟ್ಯೂಟ್ ಪ್ರವೇಶ ದ್ವಾರದ ಗೋಡೆಯ ಮೇಲೆ ಬರೆದಿರುವ ಸಿಂಹದ ಚಿತ್ರವನ್ನು ರುಟ್ಟೆ ವೀಕ್ಷಿಸಿದರು. ಶಾಸಕ ಎನ್.ಎ. ಹ್ಯಾರಿಸ್ ಸೇರಿದಂತೆ ಹಲವರು ಜತೆಗಿದ್ದರು.

ಸ್ಥಳದಲ್ಲಿ ಸೇರಿದ್ದ ಜನರ ಬಳಿ ತೆರಳಿದ ರುಟ್ಟೆ ಹಲವರ ಕೈ ಕುಲುಕಿದರು. ಚಿಕ್ಕ ಮಗುವೊಂದನ್ನು ಪ್ರೀತಿಯಿಂದ ಮಾತನಾಡಿಸಿದರು. ಸೆಲ್ಫಿ ಚಿತ್ರ ಸೆರೆಹಿಡಿಯಲು ಬಂದ ಸಾರ್ವಜನಿಕರೊಂದಿಗೆ ಬೆರೆತು ತಾವೇ ಚಿತ್ರ ಸೆರೆಹಿಡಿದು ಕೊಟ್ಟರು.

ಬೆಂಗಳೂರಿನ ಕುರಿತು ತಮ್ಮ ಅಭಿಪ್ರಾಯವುಳ್ಳ ವಿಡಿಯೊ ತುಣುಕೊಂದನ್ನು ಸ್ಥಳದಲ್ಲೇ ಚಿತ್ರೀಕರಿಸಿದರು. ‘ಬೆಂಗಳೂರು ಅತ್ಯಂತ ಸುಂದರ ನಗರ. ಭಾರತದ ಪ್ರಮುಖ ಕೇಂದ್ರ’ ಎಂದು ರಾಜಧಾನಿಯನ್ನು ಬಣ್ಣಿಸಿದರು.

ಸುದ್ದಿ 2 ನಿಮಿಷ

ಗಣೇಶ ಚತುರ್ಥಿ: ಯಶವಂತಪುರ ಬೆಳಗಾವಿ ನಡುವೆ ವಿಶೇಷ ರೈಲು

ಬೆಂಗಳೂರು: ಗಣೇಶ ಚತುರ್ಥಿ ಹಬ್ಬದ ಪ್ರಯುಕ್ತ ಯಶವಂತಪುರ ಮತ್ತು ಬೆಳಗಾವಿ ನಿಲ್ದಾಣಗಳ ನಡುವೆ ವಿಶೇಷ ರೈಲುಗಳನ್ನು ಓಡಿಸಲು ನೈರುತ್ಯ ರೈಲ್ವೆ ವಲಯ ನಿರ್ಧರಿಸಿದೆ..

ಸಾರ್ವಜನಿಕರ ಬೇಡಿಕೆ ಮೇರೆಗೆ ಮತ್ತು ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಯಶವಂತಪುರ–ಬೆಳಗಾವಿ ಎಕ್ಸ್‌ಪ್ರೆಸ್ ರೈಲು ಸೆ. 15ರಂದು ಸಂಜೆ 6.15ಕ್ಕೆ ಯಶವಂತಪುರ ನಿಲ್ದಾಣದಿಂದ ಹೊರಡಲಿದೆ. ತುಮಕೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ ಮೂಲಕ ಸೆ.16ರಂದು ಬೆಳಿಗ್ಗೆ 6ಕ್ಕೆ ಬೆಳಗಾವಿ ನಿಲ್ದಾಣವನ್ನು ತಲುಪಲಿದೆ.

ಸೆ. 16ರಂದು ಸಂಜೆ 6.30ಕ್ಕೆ ಬೆಳಗಾವಿಯಿಂದ ಈ ರೈಲು ವಾಪಸ್ ಹೊರಡಲಿದ್ದು, ಸೆ.17ರಂದು ಬೆಳಿಗ್ಗೆ 4.30ಕ್ಕೆ ಯಶವಂತಪುರ ನಿಲ್ದಾಣ ತಲುಪಲಿದೆ.

ಸೆ.17ರಂದು ಸಂಜೆ 6.15ಕ್ಕೆ ಯಶವಂತಪುರದಿಂದ ಮತ್ತೆ ಹೊರಡಲಿದ್ದು, ಸೆ.18ರಂದು ಬೆಳಿಗ್ಗೆ 6ಕ್ಕೆ ಬೆಳಗಾವಿ ನಿಲ್ದಾಣಕ್ಕೆ ತಲುಪಲಿದೆ. ಅಂದು ಸಂಜೆ 6.30ಕ್ಕೆ ಬೆಳಗಾವಿಯಿಂದ ಹೊರಟು ಮರುದಿನ ಬೆಳಿಗ್ಗೆ 5.25ಕ್ಕೆ ಯಶವಂತಪುರಕ್ಕೆ ಬರಲಿದೆ.

ಈ ವಿಶೇಷ ರೈಲುಗಳಲ್ಲಿ ಎಸಿ ಟು ಟೈರ್ 1 ಬೋಗಿ, ಎಸಿ ತ್ರಿ ಟೈರ್ 7 ಬೋಗಿಗಳು, ಸ್ಲೀಪರ್ ಕ್ಲಾಸ್ 8 ಮತ್ತು ಸೆಕೆಂಡ್ ಕ್ಲಾಸ್/ ಲಗೇಜ್ ಮತ್ತು ಬ್ರೇಕ್ ವ್ಯಾನ್ ಹಾಗೂ ಅಂಗವಿಕಲ ಸ್ನೇಹಿ ಕಂಪಾರ್ಟ್‌ಮೆಂಟ್ 2 ಬೋಗಿಗಳು ಸೇರಿ ಒಟ್ಟು 18 ಬೋಗಿಗಳು ಇರಲಿವೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ನೀಡಿದೆ.

ಪರಮಹಂಸ ಆಚಾರ್ಯ ಸ್ವಾಮೀಜಿ ವಿರುದ್ಧ ಕ್ರಮಕ್ಕೆ ಸಂಘಟನೆ ಆಗ್ರಹ

ಬೆಂಗಳೂರು: ‘ಉದಯನಿಧಿ ತಲೆ ಕಡಿದು ತಂದವರಿಗೆ ₹ 10 ಕೋಟಿ ನೀಡುವುದಾಗಿ ಜೀವ ಬೆದರಿಕೆ ಹಾಕಿದ ಉತ್ತರ ಪ್ರದೇಶದ ಅಯೋಧ್ಯ ತಪಸ್ವಿ ಛವನಿ ದೇವಸ್ಥಾನದ ಮುಖ್ಯ ಅರ್ಚಕ ಪರಮಹಂಸ ಆಚಾರ್ಯ ಸ್ವಾಮೀಜಿ ವಿರುದ್ಧ ಪ್ರಕರಣ ದಾಖಲಿಸಬೇಕು’ ಎಂದು ಮೂಲನಿವಾಸಿ ಮಹಾ ಒಕ್ಕೂಟ ಒತ್ತಾಯಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಮುನಿಅಂಜನಪ್ಪ, ‘ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು 20ರಿಂದ 40 ಗುಂಡುಗಳನ್ನು ಹಾರಿಸಿ ಕೊಲ್ಲಬೇಕು ಎಂಬ ಹೇಳಿಕೆ ನೀಡಿರುವ ಈ ಸ್ವಾಮೀಜಿ ಅವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ಸನಾತನ ಧರ್ಮ ಶಾಶ್ವತ ಧರ್ಮ ಎಂದು ಹೇಳಿಕೊಳ್ಳುವ ಧರ್ಮಪಾಲಕ ಸನ್ಯಾಸಿಯೊಬ್ಬರು ಪದೇ ಪದೇ ಸಂವಿಧಾನ ವಿರೋಧಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ₹10 ಕೋಟಿ ಹಣ ನೀಡುವುದಾಗಿ ಹೇಳಿಕೆ ನೀಡಿರುವ ಸ್ವಾಮೀಜಿ ಈ ಹಣ ಹೇಗೆ ಸಂಪಾದಿಸಿದರು ಎಂಬ ತನಿಖೆಯಾಗಬೇಕು’ ಎಂದು ಒತ್ತಾಯಿಸಿದರು.

ರೈಲ್ವೆ ವಿದ್ಯುದೀಕರಣ, ಬೆಂಗಳೂರು

ಟೆಂಡರ್ ಪ್ರಕಟಣೆ ಸಂ. ಆರ್‌ಇ–ಎಸ್‌ಬಿಸಿ–ಇಎಲ್–ಎಸ್‌ಇಎಂಸಿ–07–2023 ದಿನಾಂಕ: 05.09.2023

ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಇಲ್ಲಿ ಕೆಳಗೆ ಸಹಿ ಹಾಕಿರುವವರು ಕೆಳಕಂಡ ಕಾಮಗಾರಿಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿ ಐಟಂ	ಅಂದಾಜು ಮೌಲ್ಯ
1	ನೈರುತ್ಯ ರೈಲ್ವೆಯ ಆರ್‌ಸಿಸಿ ಇಂದ ಎಸ್‌ಇಎಂಸಿ ವರೆಗೆ ಎನರ್ಜಿ ಡೇಟಾ ಇಂಟಿಗ್ರೇಶನ್ ಕಾಮಗಾರಿ	Rs. 18,52,500.00

ಟೆಂಡರ್‌ಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ 28.09.2023 ರಂದು 15.00 ಗಂಟೆ.

ಟೆಂಡರ್ ಪ್ರಕಟಣೆ ಮತ್ತು ಟೆಂಡರ್ ದಸ್ತಾವೇಜುಗಳ ಸಂಪೂರ್ಣ ವಿವರಗಳಿಗಾಗಿ, ಟೆಂಡರ್‌ದಾರರು www.ireps.gov.in ವೆಬ್‌ಸೈಟ್ ಲಾಗಾನ್ ಮಾಡಬಹುದು. ಕ್ಲೋಸಿಂಗ್ ದಿನಾಂಕದವರೆಗೆ ಸದರಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತ ತಿದ್ದುಪಡಿಗಳನ್ನು ಗಮನಿಸುತ್ತಿರಬೇಕು. ಡೆ. ಸಿಇಇ/ಪಿ&ಪಿ/ಆರ್‌ಇ/ಎಸ್‌ಬಿಸಿ

ಪೀಆರ್-150-2023 “ನಸು ನಗೆಯೊಂದಿಗೆ ಗ್ರಾಹಕರ ಸೇವೆಯಲ್ಲಿ” DOT

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
ರಾಮನಗರ ಜಿಲ್ಲಾ ಪಂಚಾಯತ್, ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 03/ಕಾ.ಅ./ಪಂ.ರಾ.ಇಂ.ವಿ./ರಾ/ಟೆಂಡರ್/ಸಂ.ಇ.–1/555–559/2023–24 ದಿನಾಂಕ : 07–09–2023

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಾಮನಗರ ವಿಭಾಗ, ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮಾಗಡಿ ಉಪ ವಿಭಾಗಕ್ಕೆ (ಹವಾ ನಿಯಂತ್ರಣ ರಹಿತ Non - AC) ಅಧಿಕೃತ ಸರ್ಕಾರಿ ಕೆಲಸಕ್ಕಾಗಿ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕ ಸಹಿತ ವಾಹನವನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸ್ವಂತ ವಾಹನವನ್ನು ಹೊಂದಿರುವ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಸರಬರಾಜುದಾರರು / ಟ್ರಾವೆಲ್ಸ್ ಏಜೆನ್ಸಿಗಳು ಇಲಾಖಾ ವೆಬ್‌ಸೈಟ್ ; https://kppp.karnataka.gov.in ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

1) ಗುತ್ತಿಗೆ ಅಂದಾಜು ಮೊತ್ತ ರೂ. 4.20 ಲಕ್ಷ ಆಗಿರುತ್ತದೆ, 2) ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ : 22–09–2023 ರ ಸಂಜೆ 4.00 ಗಂಟೆಯವರೆಗೆ, 3) ಟೆಂಡರ್ ಬಿಡ್‌ನ್ನು ತೆರೆಯುವ ದಿನಾಂಕ : 25–09–2023 ರ ಸಂಜೆ 4.30 ಗಂಟೆ ನಂತರ. (ಸಾಧ್ಯವಾದಲ್ಲಿ), 4) ಹೆಚ್ಚಿನ ವಿವರಳನ್ನು ಕಛೇರಿ ವೇಳೆಯಲ್ಲಿ ಈ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/160/ಮಣಿಪಾಲ್/2023–24

ದೇವನಹಳ್ಳಿ ತಹಶೀಲ್ದಾರ್ ಶಿವರಾಜ್ ಅಮಾನತು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಭ್ರಷ್ಟಾಚಾರ ಆರೋಪ ಎದುರಿಸುತ್ತಿದ್ದ ದೇವನಹಳ್ಳಿ ತಹಶೀಲ್ದಾರ್ ಶಿವರಾಜ್ ಅವರನ್ನು ಅಮಾನತು ಮಾಡಲಾಗಿದೆ. ಲೋಕಾಯುಕ್ತರ ಶಿಫಾರಸ್ಸಿನಂತೆ ಶಿವರಾಜ್ ಅವರನ್ನು ಅಮಾನತು ಮಾಡಿ ಕಂದಾಯ ಇಲಾಖೆಯ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ಶಿವರಾಜ್

ತಹಶೀಲ್ದಾರ್ ಶಿವರಾಜ್, ಆದಾಯಕ್ಕಿಂತಲೂ ಶೇ 225ರಷ್ಟು ಅಧಿಕ ಪ್ರಮಾಣದ ಆಸ್ತಿ ಹೊಂದಿದ್ದಾರೆ ಎಂದು ಲೋಕಾಯುಕ್ತ ಪ್ರಾಥಮಿಕ ತನಿಖೆಯಲ್ಲಿ ಧೃಡಪಟ್ಟಿದೆ ಎಂದು ಮೂಲಗಳು ತಿಳಿಸಿವೆ.

ಲೋಕಾಯುಕ್ತ ಪೊಲೀಸರು ಆಗಸ್ಟ್ 17ರಂದು ಶಿವರಾಜ್, ಅವರ ಸ್ನೇಹಿತರು, ಸಂಬಂಧಿಗಳ ಮನೆ ಸೇರಿದಂತೆ ಏಕಕಾಲಕ್ಕೆ 12ಕ್ಕೂ ಹೆಚ್ಚು ಸ್ಥಳಗಳಲ್ಲಿ ತಪಾಸಣೆ ನಡೆಸಿದ್ದರು. ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ ಅಡಿಯಲ್ಲಿ ಆಗಸ್ಟ್ 30ರಂದು ಲೋಕಾಯುಕ್ತದಲ್ಲಿ ದೂರು ದಾಖಲು ಮಾಡಿಕೊಂಡಿದ್ದರು.

ತಹಶೀಲ್ದಾರ್ ಹುದ್ದೆಯಲ್ಲಿ ಶಿವರಾಜ್ ಮುಂದುವರೆದರೆ ಪ್ರಕರಣದ ತನಿಖೆಗೆ ಅಡ್ಡಿಯಾಗುವ ಮತ್ತು ಸಾಕ್ಷ್ಯಗಳ ನಾಶ ಸಾಧ್ಯತೆ ಕಾರಣ ಅವರನ್ನು ಅಮಾನತು ಮಾಡುವಂತೆ ಲೋಕಾಯುಕ್ತರು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

ಇದಕ್ಕೂ ಮೊದಲು ದೇವನಹಳ್ಳಿಯ ತಹಶೀಲ್ದಾರ್ ಹುದ್ದೆಯಿಂದ ಶಿವರಾಜ್ ಅವರನ್ನು ಸರ್ಕಾರ ಜುಲೈ 28ರಂದು ವರ್ಗಾವಣೆ ಮಾಡಿ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಅವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಿಂದ (ಕೆಎಟಿ) ತಡೆಯಾಜ್ಞೆ ತಂದಿದ್ದರು. ನಿವೃತ್ತಿಯ ಹೊಸ್ತಿನಲ್ಲಿ ಅಮಾನತುಗೊಂಡಿರುವ ಅವರು ಲೋಕಾಯುಕ್ತ ತನಿಖೆ ಎದುರಿಸಬೇಕಾಗಿದೆ.

ಕುರ್ಚಿಗಾಗಿ ಹಗ್ಗ ಜಗ್ಗಾಟ

ತಹಶೀಲ್ದಾರ್ ಶಿವರಾಜ್ ಅವರನ್ನು ವರ್ಗಾವಣೆ ಮಾಡಿ ಆ ಜಾಗಕ್ಕೆ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕಚೇರಿ ಸಹಾಯಕರಾಗಿದ್ದ ಎಚ್.ಬಾಲಕೃಷ್ಣರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು. ಜುಲೈ 28ರ ಮಧ್ಯಾಹ್ನ ತಹಶೀಲ್ದಾರ್ ಆಗಿ ಬಾಲಕೃಷ್ಣ ಅವರು ಅಧಿಕಾರ ಸ್ವೀಕಾರ ಮಾಡಿದ್ದರು. ಅದಕ್ಕೆ ತಡೆ ತಂದಿದ್ದ ಶಿವರಾಜ್ ಹುದ್ದೆಯಲ್ಲಿ ಮುಂದುವರೆದಿದ್ದರು.

ಇದೀಗ ಅಮಾನತ್ತಾಗಿ ಆದೇಶ ಹೊರಬರುತ್ತಿದ್ದಂತೆಯೇ ಸೋಮವಾರ ಮಧ್ಯಾಹ್ನ ಪಟ್ಟಣದ ತಹಶೀಲ್ದಾರ್ ಕಚೇರಿಗೆ ಬಂದ ಎಚ್.ಬಾಲಕೃಷ್ಣರವರು ಮತ್ತೊಮ್ಮೆ ಅಧಿಕಾರ ಸ್ವೀಕಾರ ಮಾಡಿದ್ದಾರೆ. ಈ ಮೊದಲು ದೇವನಹಳ್ಳಿಯ 51ನೇ ತಹಶೀಲ್ದಾರ್ ಆಗಿ ಬಾಲಕೃಷ್ಣ ಅವರು ಎರಡು ತಿಂಗಳು ಕರ್ತವ್ಯ ನಿರ್ವಹಿಸಿದ್ದು, ಇದೀಗ 61ನೇ ತಹಶೀಲ್ದಾರ್ ಆಗಿ ನೇಮಕಗೊಂಡಿದ್ದಾರೆ.

ಟೆಲಿಕಾಂ ಬಡಾವಣೆ: ನ್ಯಾಯಾಲಯದಿಂದ ಸ್ವಪ್ರೇರಣೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರ ಟೆಲಿಕಾಂ ಬಡಾವಣೆಯಲ್ಲಿ ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಸಿ.ಎ ನಿವೇಶನ ಮಾರಾಟ ಮಾಡಿರುವ ಸಂಬಂಧ ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಸ್ವಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡಿದೆ.

‘ಪ್ರಜಾವಾಣಿ’ಯಲ್ಲಿ ಆಗಸ್ಟ್ 12ರಂದು ‘ಟೆಲಿಕಾಂ ಬಡಾವಣೆ: ಸಿ.ಎ ನಿವೇಶನ ಮಾರಾಟ’ ಶೀರ್ಷಿಕೆಯಲ್ಲಿ ಪ್ರಕಟವಾದ ವರದಿ ಆಧಾರದಲ್ಲಿ ನ್ಯಾಯಾಲಯ ಪ್ರಕರಣ ದಾಖಲಿಸಿಕೊಂಡು, ಬೆಂಗಳೂರು ಉತ್ತರ ತಹಶೀಲ್ದಾರ್, ಬಿಡಿಎ ಆಯುಕ್ತರು ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನೋಟಿಸ್ ಜಾರಿ ಮಾಡಿದೆ.

ಹೊಸಹಳ್ಳಿ ವಾರ್ಡ್‌ನಲ್ಲಿರುವ ವಿಜಯನಗರ ಟೆಲಿಕಾಂ ಬಡಾವಣೆಯಲ್ಲಿ ಸುಮಾರು ಏಳು ಸಾವಿರ ಚದರ ಅಡಿ ವಿಸ್ತೀರ್ಣದ 5 ಹಾಗೂ 6ನೇ ನಿವೇಶನಗಳನ್ನು ಕಾನೂನುಬಾಹಿರವಾಗಿ ಅನಿಲ ತಿಲಕ್ ಅವರಿಗೆ ₹2.32 ಕೋಟಿಗೆ ಮಾರಾಟ ಮಾಡಲಾಗಿದೆ. ಈ ಸಿ.ಎ. ನಿವೇಶನ 20 ವರ್ಷಗಳಿಂದ ಟೆಲಿಕಾಂ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬಳಕೆಯಲ್ಲಿತ್ತು. ಈ ವಿಷಯವು ಭೂ ಕಬಳಿಕೆಗೆ ಸಂಬಂಧಿಸಿದ್ದಾಗಿದೆ. ಹೀಗಾಗಿ ವಿಶೇಷ ನ್ಯಾಯಾಲಯವು ಸ್ವಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡಿದೆ.

ಜಮೀನಿನ ಅತಿಕ್ರಮಣಕ್ಕೆ ಸಂಬಂಧಿಸಿದಂತೆ, ವಿಸ್ತೀರ್ಣ, ಅತಿಕ್ರಮಿಸಿದ ವ್ಯಕ್ತಿಗಳ ಹೆಸರು, ವಿವರವಾದ ಸ್ಕೆಚ್, ಅನುಮೋದಿತ ನಕ್ಷೆ ಸೇರಿದಂತೆ ಎಲ್ಲ ಮಾಹಿತಿಯ ವಿವರವಾದ ವರದಿಯನ್ನು ಅ.12ರೊಳಗೆ ಸಲ್ಲಿಸಲು ಮೂವರು ಅಧಿಕಾರಿಗಳಿಗೆ ವಿಶೇಷ ನ್ಯಾಯಾಲಯ ಸೂಚಿಸಿದೆ.

ಚಾಮರಾಜಪೇಟೆ ಬಳಿಯ ಹಳೆಕೋಟೆ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಸೋಮವಾರ ಅರಣ್ಯ ಸಚಿವ ಈಶ್ವರ ಖಂಡ್ರೆ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ‘ಸಸ್ಯ ಶ್ಯಾಮಲಾ’ ಯೋಜನೆಗೆ ಚಾಲನೆ ನೀಡಿದರು.

ಪ್ರತಿ ತರಗತಿಯಲ್ಲೂ ಪರಿಸರ ಪಾಠ: ಖಂಡ್ರೆ

ಬೆಂಗಳೂರು: ಪ್ರತಿ ವಿದ್ಯಾರ್ಥಿಯೂ ಸಸಿ ನೆಟ್ಟು ಬೆಳೆಸಲು, ಎಲ್ಲ ವಿದ್ಯಾರ್ಥಿಗಳಲ್ಲೂ ಪ್ರಕೃತಿ, ಪರಿಸರದ ಪ್ರೀತಿ ಮೂಡಿಸಲು 6ರಿಂದ 12ನೇ ತರಗತಿಯವರೆಗಿನ ಪಾಠಗಳಲ್ಲಿ ಪರಿಸರದ ವಿಷಯ ಅಳವಡಿಸಬೇಕು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಸಲಹೆ ನೀಡಿದರು.

ಚಾಮರಾಜಪೇಟೆ ಬಳಿಯ ಹಳೆಕೋಟೆ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಸೋಮವಾರ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಜತೆ ಗಿಡ ನೆಡುವ ಮೂಲಕ ಬಜೆಟ್‌ನಲ್ಲಿ ಘೋಷಿಸಿದ್ದ ‘ಸಸ್ಯ ಶ್ಯಾಮಲಾ’ ಯೋಜನೆಗೆ ಚಾಲನೆ ನೀಡಿದರು.

ಕಲ್ಯಾಣ ಕರ್ನಾಟಕದ ಶಾಲೆಗಳಿಗೆ ತಲಾ 100, ಇತರೆ ಸರ್ಕಾರಿ ಶಾಲೆಗಳಿಗೆ ತಲಾ 50 ಸಸಿಗಳನ್ನು ನೀಡಲು ತೀರ್ಮಾನಿಸಲಾಗಿದೆ. ಮಕ್ಕಳೇ ಸಸಿ ನೆಡಲಿದ್ದಾರೆ. ಸಸಿಗಳಿಗೆ ಅವರ ಹೆಸರನ್ನೇ ಇಡಲಾಗುವುದು. ಪ್ರಸಕ್ತ ವರ್ಷ ಐದು ಕೋಟಿ ಸಸಿ ನೆಡಲು ತೀರ್ಮಾನಿಸಿದ್ದು, ಜುಲೈ 1ರಿಂದ ಇಲ್ಲಿಯವರೆಗೆ ನಾಲ್ಕು ಕೋಟಿ ಸಸಿ ನೆಡಲಾಗಿದೆ ಎಂದರು.

ಮಧು ಬಂಗಾರಪ್ಪ ಮಾತನಾಡಿ, ಅರಣ್ಯ ಇಲಾಖೆ 50 ಲಕ್ಷ ಸಸಿ ನೀಡಿದೆ, ಇನ್ನೂ 10 ಲಕ್ಷ ಸಸಿ ಪೂರೈಸಬೇಕು ಎಂದರು.

ಪಿಯುಗೆ ಎನ್‌ಸಿಇಆರ್‌ಟಿ ಪಠ್ಯ

ಬೆಂಗಳೂರು: 2024–25ನೇ ಸಾಲಿನಿಂದ ಪ್ರಥಮ ವರ್ಷದ ಪಿಯುಗೆ ಕಂಪ್ಯೂಟರ್ ಸೈನ್ಸ್, ಗೃಹ ವಿಜ್ಞಾನ, ಮತ್ತು ಮನೋವಿಜ್ಞಾನ ವಿಷಯಗಳಿಗೆ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು ಅಳವಡಿಸಿಕೊಳ್ಳಲು ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಇದೇ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು 2025-26ರಿಂದ ದ್ವಿತೀಯ ಪಿಯುಗೂ ಮುಂದುವರಿಸಲಾಗುವುದು. ಈ ಕುರಿತು ಶಿಕ್ಷಕರಿಗೆ ಸೂಕ್ತ ತರಬೇತಿ ಆಯೋಜಿಸಲಾಗುವುದು ಎಂದು ಇಲಾಖೆ ತಿಳಿಸಿದೆ.

ಪ್ರಸ್ತುತ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು ಭೌತವಿಜ್ಞಾನ, ರಸಾಯನವಿಜ್ಞಾನ, ಗಣಿತ, ಜೀವ ವಿಜ್ಞಾನ, ವ್ಯವಹಾರ ಅಧ್ಯಯನ ಮತ್ತು ಅರ್ಥಶಾಸ್ತ್ರ ಸೇರಿ ಏಳು ವಿಷಯಗಳಿಗೆ ಬಳಸಲಾಗುತ್ತಿದೆ.

ನಿಧನ ವಾರ್ತೆ

ಕೋದಂಡರಾಮಯ್ಯ

ಬೆಂಗಳೂರು: ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ನಿರ್ದೇಶಕ ಕೆ. ವಿ. ಕೋದಂಡರಾಮಯ್ಯ (73) ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ. ಮಂಗಳವಾರ ಮಧ್ಯಾಹ್ನ 2ಗಂಟೆಯವರೆಗೂ ನಗರದ ಕಾವಲು ಬೈರಸಂದ್ರದ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಸಂಜೆ 4.30ಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕಿನ ಮಧುರೆ ಹೋಬಳಿಯ ಕಾಡನೂರು ಪಾಳ್ಯ ಗ್ರಾಮದಲ್ಲಿ ಅಂತಿಮ ಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ಬೆಂಗಳೂರು ಗ್ರಾಮಾಂತರ ಶಾಖಾ ಕಛೇರಿ, ನಂ.197, 2ನೇ ಮಹಡಿ, 2ನೇ ಹಂತ, ವೆಸ್ಟ್ ಆಫ್ ಕಾರ್ಡ್ ರಸ್ತೆ, (ರಾಜಾಜಿನಗರ Iನೇ ಬ್ಲಾಕ್ ಬಸ್ ನಿಲ್ದಾಣದ ಹತ್ತಿರ), ಬೆಂಗಳೂರು–560086, ದೂರವಾಣಿ ಸಂಖ್ಯೆ: 080–23494628 /23495821

ಬಹಿರಂಗ ಹರಾಜು ಪ್ರಕಟಣೆ

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ರಾಜ್ಯದ ಹಣಕಾಸು ಸಂಸ್ಥೆಗಳ ವಸೂಲಾತಿ ಕಾಯಿದೆ 1951ರ ಕಲಂ 29ರ ಅನ್ವಯ. ಈ ಕೆಳಕಂಡ ಯಂತ್ರೋಪಕರಣಗಳನ್ನು ಸ್ವಾಧೀನ ಪಡಿಸಿ ಕೊಂಡಿದ್ದು, ಅವುಗಳನ್ನು ಇ ಹರಾಜಿನ ಮೂಲಕ **“ಎಲ್ಲಿ ಹೇಗಿವೆಯೋ ಹಾಗೆ ಇದ್ದ ಸ್ಥಿತಿಯಲ್ಲಿ”** ಮಾರಟಕ್ಕೆ ಲಭ್ಯವಿರುತ್ತದೆ.

1) ಮೆ॥ ಎಸ್‌ಎಲ್‌ಎನ್ ಬೆವರಿಜಸ್: ಬೆವರಿಜ್ ಇಂಡಸ್ಟ್ರಿ/ಪ್ಯಾಕೆಜಿಂಗ್ ಡ್ರಿಕಿಂಗ್ ವಾಟರ್ ಪ್ಲಾಂಟ್, ಜಾಗದ ನಂ. 11/3, ಖಾತಾ ನಂ.16, ಪಷ್ಮೀನ ವಾಟರ್ ಫ್ರಂಟ್ ಅಪಾರ್ಟ್‌ಮೆಂಟ್ ಎದುರು, ಬಿಬಿಎಂಪಿ ವಾರ್ಡ್, ಭಟ್ಟರಹಳ್ಳಿ, ಬೀದರಹಳ್ಳಿ ಹೋಬಳಿ, ಹಳೆಯ ಮದ್ರಾಸ್ ರಸ್ತೆ, ಬೆಂಗಳೂರು–560049.

ಯಂತ್ರೋಪಕರಣಗಳ ಮಾಹಿತಿ : 1) 4000 ಲೀಟರ್ಸ್ ಸಾಮರ್ಥ್ಯದ ಆರ್.ಓ. ಪ್ಲಾಂಟ್‌ನ ಜೊತೆಗೆ ಮೋಟರ್ಸ್ ಮತ್ತು ಬಿಡಿಭಾಗಗಳು–1ಸೆಟ್, (2) ಪೋಸ್ಟ್ ಆರ್.ಓ ನೀರಿನ ಚಿಕಿತ್ಸಾ ಪ್ಲಾಂಟ್, (ಎ) ಒಝೋನೈಸರ್ ಮತ್ತು (ಬಿ) ಯುವಿ ಸಿಸ್ಟಮ್, (3) ಸಂಗ್ರಹ ಟ್ಯಾಂಕ್ ಎಸ್‌ಎಸ್ 4000 ಲೀಟರ್ಸ್ ಸಾಮರ್ಥ್ಯ – 4 ಸಂಖ್ಯೆಗಳು ಮತ್ತು 3000 ಲೀಟರ್‌ನ ಸಾಮರ್ಥ್ಯ–1 ಸಂಖ್ಯೆ, (4) ಸ್ವಯಂಚಾಲಿತ ನಿಯಂತ್ರಣ ಮಾಡುವ ಮಲ್ಟಿಫಂಕ್ಷನ್ ಬಾಟಲಿಂಗ್ ಮಿಷನ್ (ರಿನ್ಸಿಂಗ್, ಫಿಲ್ಲಿಂಗ್ ಮತ್ತು ಕ್ಯಾಪಿಂಗ್), (5) ಮೆಟ್ರೋ ಹಳೆಯ ಕಂಪ್ರೆಸರ್ –1 ಸಂಖ್ಯೆ. (6) ಜಾರ್ ಫಿಲ್ಲಿಂಗ್ ಮೆಷಿನ್, ರಿನ್ಸಿಂಗ್ ಮೆಷಿನ್– ತುಂಬುವ ಸಾಮರ್ಥ್ಯವಿರುವ 20 ಲೀಟರ್ಸ್ ಜಾರ್ (7) ಸ್ಕ್ರಾಪ್‌ಸ್ಥಿತಿಯಲ್ಲಿ ಇರುವ, ನಿರ್ದಿಷ್ಟತೆಯಲ್ಲಿರುವ ಡಿಜಿ ಸೆಟ್ (8) ಕ್ಯಾಪ್ ಎಲಿವೆಟರ್– 1 ಸಂಖ್ಯೆ (9) ಸ್ಕ್ರಾಪ್ ಸ್ಥಿತಿಯಲ್ಲಿರುವ ಪೆಟ್ ಬಾಟಲ್ ರಿನ್ಸರ್–1 ಸಂಖ್ಯೆ (10) ಟೆಕ್ಸ್ಮೋ ಮೋಟರ್‌ನೊಂದಿಗೆ ಸಬ್‌ಮಿರ್ಸಬಲ್ ಬೋರ್‌ವೆಲ್ ಪಂಪ್–10.5 ಹೆಚ್‌ಪಿ–1 ಸಂಖ್ಯೆ (11) ಜೆನಿತ್ ಏರ್ ಡ್ರೈಯರ್, ಚಿಲ್ಲರ್ ಇನ್ ಸ್ಕ್ರಾಪ್ ಕಂಡೀಷನ್ (12) ಎಸ್‌ಎಸ್ ಇಂಟರ್‌ಕನೆಕ್ಟಿಂಗ್ ಪೈಪ್‌ಲೈನ್.

ಮೀಸಲು ಬೆಲೆ–29.39 ಲಕ್ಷಗಳು, ಇ.ಎಂ.ಡಿ. ಮೊತ್ತ : 2,93,900/–, ಬಿಡ್ ಮಲ್ಟಿಪ್ಲೇಯರ್‌ನ ಮೊತ್ತ : 10,000/– ರೂಪಾಯಿಗಳು,

ಆಸ್ತಿಯ ಪರಿವೀಕ್ಷಣೆ ದಿನಾಂಕ ಮತ್ತು ಸಮಯ : 25–09–2023 ಬೆಳಗ್ಗೆ 11.00 ರಿಂದ ಸಂಜೆ 4.00 ಗಂಟೆವರೆಗೆ, ಇ–ಹರಾಜು ಪ್ರಾರಂಭ ದಿನಾಂಕ: 16–10–2023 ಬೆಳಿಗ್ಗೆ 11.00 ಗಂಟೆಗೆ, ಮತ್ತು ಮುಕ್ತಾಯವಾಗುವ ದಿನಾಂಕ: 26–10–2023, ಬೆಳಗ್ಗೆ 11.00 ಗಂಟೆಗೆ.

(2) ಮೆ॥ ಇಂಡೋಯ್ ಮ್ಯಾನಿಫ್ಯಾಕ್ಚರಿಂಗ್– ಇದು ಅಬ್ರೆಸೀವ್ ಉತ್ಪನ್ನಗಳ ತಯಾರಿಕೆಯ ಘಟಕ ನಂ.547ಎ, 4ನೇ ಹಂತ, ಪೀಣ್ಯ ಇಂಡಸ್ಟ್ರೀಯಲ್ ಏರಿಯಾ, ಬೆಂಗಳೂರು–560058.

ಯಂತ್ರೋಪಕರಣಗಳ ಮಾಹಿತಿ : 1) ಅಟೋಮೆಟಿಕ್ ಫ್ಲಾಪ್ ಡಿಸ್ಕ್ ಮೆಕಿಂಗ್ ಮೆಷಿನ್ A4F ಸೈಜ್ ರೇಂಜ್ 75–180mm, (2) ಲೆಬಲಿಂಗ್ ಮೆಷಿನ್ (3) ಓವನ್ (4) ಟೆಸ್ಟರ್ (5) ಜಂಬೂ ರೋಲ್ ಸ್ಲಿಟಿಂಗ್ ಮೆಷಿನ್, (6) ಸ್ಮಾಲ್ ರೋಲ್ ಸ್ಲಿಟಿಂಗ್ ಮೆಷಿನ್ (7) ಸ್ಟ್ರೈಟ್ ಜ್ಯಾಂಟ್ ಕಟ್ ಟು ಲೆನ್ತ್ ಕಟ್ಟಿಂಗ್ ಮೆಷಿನ್ (8) ಕನ್ಟಿನ್ಯೂಯಸ್ ಪೀಲಿಂಗ್ ಮೆಷಿನ್ (9) ಅಬ್ರೆಸೀವ್ ಬೆಲ್ಟ್ ಪ್ರೆಸ್ ಮೆಷಿನ್ (10) ಅಬ್ರೆಸೀವ್ ಬೆಲ್ಟ್ ಸ್ಲೀಟಿಂಗ್ ಮೆಷಿನ್ 650 (11) ಅಬ್ರೆಸೀವ್ ಬೆಲ್ಟ್ ಸ್ಲೀಟಿಂಗ್ ಮೆಷಿನ್ 300 (12) ಅಬ್ರೆಸೀವ್ ಬೆಲ್ಟ್ ಟೆಸ್ಟರ್ (13) ಫ್ಲಾಪ್ ಡಿಸ್ಕ್ ಶ್ರಿಂಕಿಂಗ್ ಮೆಷಿನ್ (14) ಎಲ್‌ಜಿ ಮೆಕ್ ಕಂಪ್ರೆಸ್ಸರ್, ಜೆಮಿನಿ ಸರ್ವೋ ಸ್ಟಾಬ್ಲೆಜರ್ 100 ಕೆ.ವಿ.ಎ (15) ಅಬ್ರೆಸೀವ್ ವೀಲ್ ಸ್ಮಾಲ್ ಗ್ರೈಡಿಂಗ್ ಮೆಷಿನ್, ವರ್ಕಿಂಗ್ ಟೇಬಲ್ ಬಿಗ್ – 2 ಸಂಖ್ಯೆಗಳು ಮತ್ತು ಚಿಕ್ಕದು 2 ಸಂಖ್ಯೆಗಳ್ಸು, ಆಫೀಸ್ ಟೇಬಲ್ 1 ಸಂಖ್ಯೆ, ಪ್ರಿಂಟರ್–1 ಸಂಖ್ಯೆ ಮತ್ತು ಮಾನಿಟರ್–1 ಸಂಖ್ಯೆ, ಕ್ಲೀನಿಂಗ್ ಮೆಷಿನ್, ಸೆಮಿ ಅಟೋಮೆಟಿಕ್ ಸ್ಟ್ರಾಪಿಂಗ್ ಮೆಷಿನ್ ಸ್ಟೂಲ್–ಚಿಕ್ಕದು–1 ಸಂಖ್ಯೆ ಮತ್ತು ದೊಡ್ಡ ಸ್ಟೂಲ್–1 ಸಂಖ್ಯೆ, ವುಡೆನ್ ರ್ಯಾಕ್.

ಮೀಸಲು ಬೆಲೆ–63.98 ಲಕ್ಷಗಳು, ಇ.ಎಂ.ಡಿ. ಮೊತ್ತ : 6,39,800/–, ಬಿಡ್ ಮಲ್ಟಿಪ್ಲೇಯರ್‌ನ ಮೊತ್ತ : 10,000/– ರೂಪಾಯಿಗಳು,

ಆಸ್ತಿಯ ಪರಿವೀಕ್ಷಣೆ ದಿನಾಂಕ ಮತ್ತು ಸಮಯ : 26–09–2023 ಬೆಳಗ್ಗೆ 11.00 ರಿಂದ ಸಂಜೆ 4.00 ಗಂಟೆವರೆಗೆ, ಇ–ಹರಾಜು ಪ್ರಾರಂಭ ದಿನಾಂಕ: 16–10–2023 ಬೆಳಿಗ್ಗೆ 11.00 ಗಂಟೆಗೆ, ಮತ್ತು ಮುಕ್ತಾಯವಾಗುವ ದಿನಾಂಕ: 26–10–2023, ಬೆಳಗ್ಗೆ 11.00 ಗಂಟೆಗೆ.

1) ಷರತ್ತು ಮತ್ತು ನಿಬಂಧನೆಗಳು : ಈ ಮೇಲ್ಕಂಡ ಯಂತ್ರೋಪಕರಣಗಳು "ಎಲ್ಲಿ ಹೇಗಿದೆಯೋ ಹಾಗೆ" ಆಧಾರದಲ್ಲಿ ಇ–ಹರಾಜು **ಮೂಲಕ ಮಾರಾಟ ಮಾಡಲಾಗುವುದು.** ಪ್ರವರ್ತಕರು/ವೈಯಕ್ತಿಕ ಖಾತರಿದಾರರು, ಭಾವಿ ಖರೀದಿದಾರರನ್ನು ಗುರುತಿಸಿ, ಈ ಹರಾಜಿನಲ್ಲಿ ಭಾಗವಹಿಸಲು ಕೋರಲಾಗಿದೆ, ಈ ಹರಾಜಿನ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು https://eproc.karnataka.gov.inಗೆ ಲಾಗಿನ್ ಮಾಡಿ.

ದಿನಾಂಕ: 12.09.2023
ಸ್ಥಳ: ಬೆಂಗಳೂರು

ಸಹಿ/–
ಅಧಿಕೃತ ಅಧಿಕಾರಿ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Multiple Vacancy

HIRING
Leading REAL ESTATE DEVELOPER Requires
Receptionist/ Accountant 2+ yrs Exp.
Civil Engineer 2+ yrs Exp. in construction
Maintenance Manager 2+ yrs Exp. in managing Multi storied Apartments
info@comfortbuilders.in
99000 73745
76761 62216

Engg/ Production Technical

REQUIRED EXPERIENCED Project Engineers and Site Engineers BE Civil for Bridge /Flyover work at Koramangala. Contact: 9663366607, 9880361002

PERSONAL

Change of Name

CHANGE OF NAME
I, SRIVIDYA IYER D/o Chittur Ramachandran Murali, R/at.# Flat No.111, The Blue Lotus Park, 12/4, Belltown Layout, Green Woods Layout, Varanasi, K.R.Puram, Benglauru-36, have changed my name to **SRIVIDYA HARISH** vide affidavit dt.25/08/2023 before Notary Y. V. Shankar, Bangalore. Henceforth I shall be called **SRIVIDYA HARISH** only

I, MANJUNATH G.M. residing at Chikballapur-562101 have changed my name as MANJUNATHA G.M vide affidavit dated 11/08/2023 before Notary P.C.Ramaiah,Bengaluru

I SOUMYA M shet After marriage I Have changed my Name Soumya M shet To Sowmya Nayak W/o Shankar Nayak Shorapur Dist Yadgir For all purposes

BUSINESS

Business Offers

Finance

NRI'S INVESTMENT
And Finance Available On Low Interest Against Properties, Land& Building,Sites,Flats,Converted& Agriculture Lands
Call:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE

ಸಾರ್ವಜನಿಕ ಪ್ರಕಟಣೆ
PRL ಹಿರಿಯ ಸಿವಿಲ್ ನ್ಯಾಯಾಲಯದ ಗೌರವಾನ್ವಿತ ನ್ಯಾಯಾಲಯದ ಅಡಿಯಲ್ಲಿ ಪ್ರಕರಣದ ಸಂಖ್ಯೆ.OS No. 707/2020 ಅಡಿಯಲ್ಲಿ ಈ ಕೆಳಗಿನ ಆಸ್ತಿಗಳು ವಿಭಜನಾ ಮೊಕದ್ದಮೆಗೆ ಒಳಪಟ್ಟಿವೆ ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಗೌರಮ್ಮ ಮತ್ತು ಇತರರ ನಡುವಿನ ಪ್ರಕರಣ ವಿ/ಎಸ್ ಶಂಕರ್.ಜಿ.ವಿ. ಮತ್ತು ಇತರರು ಪ್ರಕರಣ ಸಕ್ರಿಯವಾಗಿದ್ದು ನ್ಯಾಯಾಲಯದಲ್ಲಿ ನಡೆಯುತ್ತಿದೆ. ತೀರ್ಪು ಇನ್ನೂ ಗೌರವಾನ್ವಿತ ನ್ಯಾಯಾಲಯದ ಮುಂದೆ ಬಾಕಿ ಇದೆ. ಶೆಡ್ಯೂಲ್ ಆಸ್ತಿ ಈ ಕೆಳಗಿನಂತಿದೆ: 1) ಸರ್ವೆ ನಂ. 81/4, ವಿಸ್ತೀರ್ಣ: 0–25 ಗುಂಟೆ, 2) ಸರ್ವೆ ನಂ. 81/5, ವಿಸ್ತೀರ್ಣ: 0–29 ಗುಂಟೆ, 3) ಸರ್ವೆ ನಂ. 22/1, ವಿಸ್ತೀರ್ಣ: 0.3.05 ಗುಂಟೆ, 4) ಸರ್ವೆ ನಂ.20/1, ವಿಸ್ತೀರ್ಣ: 1 ಎಕರೆ 20 ಗುಂಟೆ. ಮೇಲ್ಕಂಡ 4 ಸ್ವತ್ತುಗಳು ಇದೇ ಗೊಟ್ಟಿಗೆರೆ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ವ್ಯಾಪ್ತಿಯಲ್ಲಿರುತ್ತದೆ, ಹಾಗೂ 5) ಸರ್ವೆ ನಂ.90/1 ವಿಸ್ತೀರ್ಣ: 3 ಎಕರೆ 08 ಗುಂಟೆ, 6) ಸರ್ವೆ ನಂ. 91/2, ವಿಸ್ತೀರ್ಣ: 1 ಎಕರೆ 28 ಗುಂಟೆ. ಈ ಎರಡು ಸ್ವತ್ತುಗಳು ಇದೇ ಕಮ್ಮನಹಳ್ಳಿ ಗ್ರಾಮ, ಬೇಗೂರು ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ವ್ಯಾಪ್ತಿಯಲ್ಲಿರುತ್ತದೆ. ಮೇಲಿನ ಆಸ್ತಿಗಳೊಂದಿಗೆ ವ್ಯವಹರಿಸದಂತೆ ಸಾರ್ವಜನಿಕರಿಗೆ ಈ ಮೂಲಕ ಷರತ್ತು ವಿಧಿಸಲಾಗಿದೆ. ಯಾರಾದರೂ ವ್ಯವಹರಿಸಿದರೆ ಅದು ನ್ಯಾಯಾಲಯದ ಆದೇಶಗಳಿಗೆ ಒಳಪಟ್ಟಿರುತ್ತದೆ. ಯಾವುದೇ ವ್ಯಕ್ತಿಯು ವ್ಯವಹರಿಸಿದರೆ ಅದು ಅವನ/ಅವಳ ಸ್ವಂತ ಅಪಾಯ ಮತ್ತು ಆಪಾಯದಲ್ಲಿರುತ್ತದೆ. ಯಾವುದೇ ಸ್ಪಷ್ಟೀಕರಣದ ಸಂದರ್ಭದಲ್ಲಿ ದಯವಿಟ್ಟು ಸಂಪರ್ಕಿಸಿ ಆರ್. ರಾಜಶೇಖರ್, ಮೊಬೈಲ್ ಸಂಖ್ಯೆ 9845951324, 7892236170 (ಮೇಲಿನ ಎಲ್ಲಾ ಸ್ವತ್ತುಗಳಿಗೆ ಜಿಪಿಎ ದಾರರಾಗಿರುತ್ತಾರೆ).
ಸಹಿ/– ನೇಚರ್ ಲಾ ಅಸೋಸಿಯೇಟ್ಸ್
ನಂ.4, 4ನೇ ಮುಖ್ಯರಸ್ತೆ, ಕೆ.ಆರ್. ರಸ್ತೆ, ಟಾಟಾ ಸಿಲ್ಕ್ ಫಾರಂ, (ಒಬಲಪ್ಪ ಗಾರ್ಡನ್), ಬೆಂಗಳೂರು–82

PUBLIC NOTICE
To Place your Classified Ads Contact
9731810277

DH DECCAN HERALD Classifieds
More value, more impact
JOB HUNT
ಪ್ರಜಾವಾಣಿ
Get your HIRING NEEDS answered
Get the right people for your company...
Book your Ad with us now !
www.dhclassifieds.com
BOOK NOW
For more details contact:
+91 9901641752 | +91 9731810277 | +91 9900428036 |
+91 9886213331 | +91 9845114560 | 080-45557163/164

ಕಲಾಸಿಪಾಳ್ಯದ ಖಾಸಗಿ ಬಸ್ ನಿಲ್ದಾಣದಲ್ಲಿ ಬಸ್‌ಗಳು ನಿಂತಿರುವುದು – ಕಿಶೋರ್ ಕುಮಾರ್ ಬೋಳಾರ್ (ಎಡಚಿತ್ರ) ಬೆಂಗಳೂರಿನ ಓಕಳಿಪುರಂ ಬಳಿ ಆಟೊ ಹಾಗೂ ಟ್ಯಾಕ್ಸಿ ಚಾಲಕರು ಮೆರವಣಿಗೆ ನಡೆಸಿದರು – ಪ್ರಜಾವಾಣಿ ಚಿತ್ರ– ಪ್ರಶಾಂತ್ ಎಚ್‌.ಜಿ.

ಬಸ್‌ನಲ್ಲಿ ಪ್ರಯಾಣಿಸಿದ ಕುಂಬ್ಳೆ

ಭಾರತದ ಮಾಜಿ ಕ್ರಿಕೆಟ್ ಆಟಗಾರ ಅನಿಲ್‌ಕುಂಬ್ಳೆ ಅವರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಅವರ ಮನೆಗೆ ಬಿಎಂಟಿಸಿಯ ವಾಯುವಜ್ರ ಬಸ್‌ನಲ್ಲಿ ಪ್ರಯಾಣಿಸಿದರು. ಬಿಎಂಟಿಸಿ ಬಸ್‌ನಲ್ಲಿ ಪ್ರಯಾಣಿಸುವಾಗ ಸೆಲ್ಫಿ ಫೋಟೊ ತೆಗೆದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಬಹಳ ಜನರು ಅವರ ಫೋಟೊಗೆ ಪ್ರತಿಕ್ರಿಯಿಸಿದ್ದಾರೆ. 'ಕುಂಬ್ಳೆ ಸರ್ಕಲ್‌ನಲ್ಲಿ ನೀವು ಇಳಿಯುವುದಾದರೆ ನನ್ನ ಸರ್ಕಲ್‌ಗೆ ಟಿಕೆಟ್ ಕೊಡಿ ಎಂದು ನಿರ್ವಾಹಕರನ್ನು ಕೇಳ್ತೀರಾ?' ಎಂದು ಕೆಲವರು ಪ್ರತಿಕ್ರಿಯಿಸಿದ್ದಾರೆ.

ಖಾಸಗಿ ಸಾರಿಗೆ ಸಂಘಗಳ ಒಕ್ಕೂಟದ ಪ್ರತಿಭಟನೆ • ಹಲವೆಡೆ ಹಲ್ಲೆ, ಹಾನಿ • ಮುಷ್ಕರ ವಾಪಸ್

ಮುಷ್ಕರ: ಸಾರ್ವಜನಿಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟವು ಸೋಮವಾರ ಮುಷ್ಕರ ನಡೆಸಿದ್ದರಿಂದ ಸಾರ್ವಜನಿಕರು ಪರದಾಡುವಂತಾಯಿತು. ಮುಷ್ಕರ ಕರೆಗೆ ಓಗೊಡದೇ ವಾಹನ ಚಲಾಯಿಸಿದ ಚಾಲಕರ ಮೇಲೆ ಹಲ್ಲೆ ನಡೆಸಲಾಗಿದೆ. ವಾಹನಗಳಿಗೆ ಹಾನಿ ಮಾಡಲಾಗಿದೆ.

ಆರ್ಥಿಕ ಇಲಾಖೆಗೆ ಸಂಬಂಧಿಸಿದ ಬೇಡಿಕೆಗಳನ್ನು ಹೊರತುಪಡಿಸಿ ಉಳಿದವುಗಳನ್ನು ಈಡೇರಿಸುವ ಭರವಸೆಯನ್ನು ಸಾರಿಗೆ ಸಚಿವರು ನೀಡಿದ ಕಾರಣ ಒಕ್ಕೂಟವು ಸೋಮವಾರ ಮಧ್ಯಾಹ್ನದ ಹೊತ್ತಿಗೆ ಮುಷ್ಕರವನ್ನು ಹಿಂಪಡೆದುಕೊಂಡಿತು.

'ಶಕ್ತಿ' ಯೋಜನೆಯನ್ನು ಖಾಸಗಿ ಬಸ್‌ಗಳಿಗೂ ವಿಸ್ತರಿಸಬೇಕು ಅಥವಾ ರಸ್ತೆ ತೆರಿಗೆ ರದ್ದು ಮಾಡಬೇಕು. ರ್‍ಯಾಪಿಡೊ ಬೈಕ್– ಟ್ಯಾಕ್ಸಿ ನಿಷೇಧಿಸಬೇಕು. ರ್‍ಯಾಪಿಡೊ, ಓಲಾ, ಉಬರ್, ಇನ್ನಿತರ ಆನ್‌ಲೈನ್ ಕಂಪನಿಗಳಿಗೆ ಇ–ರಿಕ್ಷಾಗಳ ನೇರ ನೋಂದಣಿ ಮಾಡುವುದನ್ನು ನಿಷೇಧಿಸಬೇಕು. ಬಿಳಿ ಬಣ್ಣದ ಫಲಕ ಹೊಂದಿರುವ ವಾಹನಗಳಲ್ಲಿ ಬಾಡಿಗೆ ಮಾಡುವವರ ಮೇಲೆ ಕ್ರಮ ಕೈಗೊಳ್ಳಬೇಕು. ವಾಹನಗಳಿಗೆ ಜೀವಿತಾವಧಿ ತೆರಿಗೆ ವಿಧಿಸುವುದನ್ನು ಕೈಬಿಡಬೇಕು. ಚಾಲಕರಿಗೆ ₹ 10 ಸಾವಿರ ಮಾಸಿಕ ಪರಿಹಾರ ಧನಸಹಾಯ ನೀಡಬೇಕು. ಚಾಲಕರ ಕಲ್ಯಾಣ ನಿಧಿ ಆರಂಭಿಸಬೇಕು ಎಂಬುದು ಸೇರಿ 30 ಬೇಡಿಕೆಗಳನ್ನು ಮುಂದಿಟ್ಟುಕೊಂಡು ಒಕ್ಕೂಟವು ಮುಷ್ಕರಕ್ಕೆ ಕರೆ ನೀಡಿತ್ತು.

ಈ ಒಕ್ಕೂಟದ ಅಡಿಯಲ್ಲಿ ಬರುವ ಖಾಸಗಿ ಬಸ್, ಆಟೊ, ಟ್ಯಾಕ್ಸಿ, ಶಾಲಾ ವಾಹನ ಸಹಿತ 32 ಸಂಘಟನೆಗಳ ಸದಸ್ಯರು ಸೋಮವಾರ ಮುಂಜಾನೆಯೇ ರಸ್ತೆಗೆ ಇಳಿದಿದ್ದರು. ಖಾಸಗಿ ವಾಹನಗಳು ರಸ್ತೆಗಿಳಿಯಬಾರದು ಎಂದು ಮೆರವಣಿಗೆ ನಡೆಸಿ ಮನವಿ ಮಾಡಿಕೊಂಡರು.

ಮುಷ್ಕರಕ್ಕೆ ಬೆಂಬಲ ನೀಡಿರುವ ವಿವಿಧ ಸಂಘಟನೆಗಳ ಸದಸ್ಯರು ನಗರದ ವಿವಿಧ ಕಡೆಗಳಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಿದರು. ಬಳಿಕ ಉದ್ಯಾನದಲ್ಲಿ ಪ್ರತಿಭಟನಾ ಸಭೆ ನಡೆಯಿತು. 30 ಬೇಡಿಕೆಗಳು ಈಡೇರುವವರೆಗೆ ಮುಷ್ಕರ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು.

ಬಿಎಂಟಿಸಿ ಹೆಚ್ಚುವರಿ ಬಸ್: ಮುಷ್ಕರದಿಂದ ಸಾರ್ವಜನಿಕರು ತೊಂದರೆಗೀಡಾಗಬಾರದು ಎಂದು ಹೆಚ್ಚುವರಿಯಾಗಿ ಬಿಎಂಟಿಸಿ ಬಸ್‌ಗಳನ್ನು ರಸ್ತೆಗಿಳಿಸಲಾಗಿತ್ತು. ಆದರೂ ಬೆಳಿಗ್ಗೆ ಮತ್ತು ಮಧ್ಯಾಹ್ನದ ಹೊತ್ತು ಹಲವು ಬಸ್‌ಗಳಲ್ಲಿ ನೂಕುನುಗ್ಗಲು ಉಂಟಾಗುವಷ್ಟು ಪ್ರಯಾಣಿಕರ ದಟ್ಟಣೆ ಹೆಚ್ಚಾಗಿತ್ತು.

ಸಾರಿಗೆ ಸಚಿವರ ಭೇಟಿ: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದರು. 'ನಾನು ನಿಮ್ಮ ಪರ ಇದ್ದೇನೆ. ನನ್ನನ್ನೂ ನಿಮ್ಮ ಜೊತೆಗೆ ಸೇರಿಸಿಕೊಳ್ಳಿ. ತೆರಿಗೆ ಮತ್ತು ಶಕ್ತಿ ಯೋಜನೆಗೆ ಸಂಬಂಧಿಸಿದ ಬೇಡಿಕೆಯನ್ನು ಈಡೇರಿಸುವುದು ನನ್ನ ವ್ಯಾಪ್ತಿಯಲ್ಲಿ ಕಷ್ಟ. ಉಳಿದ ಬೇಡಿಕೆಗಳನ್ನು ಈಡೇರಿಸುತ್ತೇನೆ' ಎಂದು ಭರವಸೆ ನೀಡಿದರು.

'ಅಧಿಕ ದಂಡ ವಿಧಿಸುವ ನಿಯಮ ಮಾಡಿದಾಗ ನಾನೇ ನಿಮ್ಮ ನೆರವಿಗೆ ಬಂದು ಕಡಿಮೆ ಮಾಡಿಸಿದ್ದೆ. ಮುಖ್ಯಮಂತ್ರಿ ಜೊತೆಗೆ ಸಭೆ ನಡೆಸಿದಾಗ ನೀವು ಪಾಲ್ಗೊಂಡಿಲ್ಲ. ಚಾಲಕರ ಅಭಿವೃದ್ಧಿ ನಿಗಮ ರಚಿಸಲಾಗುವುದು. ಚಾಲಕರಿಗೆ ಕ್ಯಾಂಟೀನ್ ಮಾಡಲಾಗುವುದು. ತೆರಿಗೆ ಕಡಿಮೆ ಮಾಡುವುದು, ಮನ್ನಾ ಮಾಡುವುದೆಲ್ಲ ಸಾರಿಗೆ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಶಕ್ತಿ ಯೋಜನೆಯನ್ನು ಖಾಸಗಿ ಬಸ್‌ಗಳಿಗೆ ವಿಸ್ತರಿಸುವುದು, ಪರಿಹಾರ ನೀಡುವುದು ಕೂಡ ಕಷ್ಟ. ಉಳಿದ ಬೇಡಿಕೆಗಳನ್ನು ಈಡೇರಿಸಲಾಗುವುದು' ಎಂದು ತಿಳಿಸಿದರು.

'ಆರ್ಥಿಕ ಇಲಾಖೆಗೆ ಸಂಬಂಧಿಸಿದ ಮೂರು ಬೇಡಿಕೆಗಳನ್ನು ಹೊರತುಪಡಿಸಿ ಉಳಿದ 27 ಬೇಡಿಕೆಗಳನ್ನು ಈಡೇರಿಸಲು ಮಂಗಳವಾರವೇ ಕ್ರಮ ಕೈಗೊಳ್ಳಬೇಕು ಎಂಬ ಷರತ್ತು ವಿಧಿಸಿ ಮುಷ್ಕರ ಹಿಂಪಡೆಯಲಾಯಿತು' ಎಂದು ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ್ ಶರ್ಮ ತಿಳಿಸಿದ್ದಾರೆ.

ರಾಜ್ಯ ಖಾಸಗಿ ಸಾರಿಗೆ ಸಂಘಗಳ ಒಕ್ಕೂಟ ಮುಷ್ಕರ ನಡೆಸಿದ್ದರಿಂದ ಬೆಂಗಳೂರಿನ ಕೆ.ಎಸ್‌ಆರ್‌ ರೈಲು ನಿಲ್ದಾಣದ ಆಟೊ/ ಪ್ರೀಪೇಯ್ಡ್ ಟ್ಯಾಕ್ಸಿ ಸೇವೆ ಕಚೇರಿ ಮುಚ್ಚಲಾಗಿದ್ದು, ಪ್ರಯಾಣಿಕರು ಪರದಾಡಿದರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ವಿಮಾನಯಾನಕ್ಕಿಂತ ದುಬಾರಿಯಾದ ಟ್ಯಾಕ್ಸಿ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕರಿಗೆ ಬೆಂಗಳೂರು ಬಂದ್ ಬಿಸಿ ತಟ್ಟಿತು. ಪ್ರಯಾಣಿಕರು ವಿಮಾನ ಟಿಕೆಟ್‌ಗಿಂತ ಹೆಚ್ಚು ಹಣ ಪಾವತಿಸಿ ತಮ್ಮ ಸ್ಥಳ ತಲುಪಿದರು.

ಲಭ್ಯವಾದ ಕೆಲ ಟ್ಯಾಕ್ಸಿಗಳಲ್ಲಿ ದೇವನಹಳ್ಳಿಯಿಂದ ಮೆಜೆಸ್ಟಿಕ್‌ಗೆ ₹4,000 ಬಾಡಿಗೆ ತೆತ್ತು ಪ್ರಯಾಣಿಸಬೇಕಾಯಿತು. ಪ್ರಯಾಣಿಕರ ಅನುಕೂಲಕ್ಕಾಗಿ ವಿಮಾನ ನಿಲ್ದಾಣಕ್ಕೆ ಬಿಎಂಟಿಸಿ ವಾಯುವಜ್ರ ಬಸ್ ಸೇವೆಯನ್ನು ಹೆಚ್ಚುವರಿಯಾಗಿ ಒದಗಿಸಲಾಯಿತು. ಕೆಲ ಪ್ರಯಾಣಿಕರು ಬಸ್‌ನಲ್ಲಿ ತೆರಳಲು ಇಚ್ಛಿಸದೇ ಖಾಸಗಿ ವೈಟ್ ಬೋರ್ಡ್ ಕಾರುಗಳಲ್ಲಿ ದುಪ್ಪಟ್ಟು ಹಣ ಕೊಟ್ಟು ಪ್ರಯಾಣಿಸಿದರು.

ಟ್ಯಾಕ್ಸಿ ದರ ಕೇಳಿ ಬೆಚ್ಚಿ ಬಿದ್ದ ಕೆಲ ಪ್ರಯಾಣಿಕರು ಬಿಎಂಟಿಸಿ ಬಸ್‌ನಲ್ಲಿ ಸಾಗಿದರು. ಮತ್ತೊಂದಷ್ಟು ಜನ ಅವರ ಸ್ವಂತ ವಾಹನ ಬರುವವರೆಗೂ ವಿಮಾನ ನಿಲ್ದಾಣದಲ್ಲೇ ಕಾದು ಕುಳಿತಿದ್ದ ದೃಶ್ಯಗಳು ಸಾಮಾನ್ಯವಾಗಿ ಕಂಡು ಬಂದವು. ಹಣ ವಸೂಲಿಗೆ ಇಳಿಸಿದ್ದ ಕಾರು ಚಾಲಕರನ್ನು ನಿಯಂತ್ರಿಸಲು ವಿಮಾನ ನಿಲ್ದಾಣದ ಪೊಲೀಸರಾಗಲಿ, ಟ್ಯಾಕ್ಸಿ ನಿರ್ವಹಣೆಯ ಹೊಣೆ ಹೊತ್ತ ವಿಮಾನದ ಲ್ಯಾಂಡ್ ಸೈಡ್‌ನ ವ್ಯವಸ್ಥಾಪಕರಾಗಲಿ ಗಮನ ಹರಿಸಲಿಲ್ಲ.

ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಕಡಿಮೆ

ಆಟೊ, ಟ್ಯಾಕ್ಸಿಗಳನ್ನು ಅವಲಂಬಿಸಿದ್ದ ಅನೇಕರು ಸಮಸ್ಯೆಗಳನ್ನು ಎದುರಿಸಿದರು. ಮೆಟ್ರೊ, ರೈಲು ಹಾಗೂ ಕೆಎಸ್‌ಆರ್‌ಟಿಸಿ ನಿಲ್ದಾಣದವರೆಗೆ ಆಟೊ, ಟ್ಯಾಕ್ಸಿಗಳಲ್ಲಿ ಹೋಗುವವರು, ಉದ್ಯೋಗ ಸ್ಥಳಗಳಿಗೆ ಕ್ಯಾಬ್‌ಗಳಲ್ಲಿ ತೆರಳುವವರು ಸೋಮವಾರ ಬೆಳಿಗ್ಗೆ ಪರದಾಡಿದರು.

ರೈಲು ನಿಲ್ದಾಣಗಳಲ್ಲಿ ಆಟೊ, ಕ್ಯಾಬ್, ಟ್ಯಾಕ್ಸಿ, ಕಾರುಗಳಿಗೆ ಕಾಯುತ್ತಿರುವುದು ಕಂಡು ಬಂತು. ಕೊನೆಗೆ ಕೆಲವರು ಬಿಎಂಟಿಸಿ ಬಸ್ ನಿಲ್ದಾಣದ ಕಡೆಗೆ ತೆರಳಿದರೆ, ಹಲವರು ತಮ್ಮ ಸಂಬಂಧಿಕರಿಗೆ ಕರೆ ಮಾಡಿ ವೈಯಕ್ತಿಕ ಬಳಕೆಯ ವಾಹನಗಳಲ್ಲಿ ನಿಗದಿತ ಸ್ಥಳ ಸೇರಿದರು.

ಬೆಂಗಳೂರಿನ ಹಲವು ಶಾಲೆಗಳು ರಜೆ ನೀಡಿದ್ದರೆ, ಕೆಲ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇತ್ತು. ಬಂದ್ ಬಗ್ಗೆ ಮಾಹಿತಿ ಇದ್ದರೂ, ಶಾಲಾ ಆಡಳಿತ ಮಂಡಳಿಗಳು ಸರಿಯಾದ ಮಾಹಿತಿ ನೀಡದ ಕಾರಣ ಕೆಲ ಪೋಷಕರು ಸ್ವಂತ ವಾಹನದಲ್ಲಿ ಶಾಲೆಗೆ ಕರೆತಂದಿದ್ದರು. ಆಗ ಶಾಲೆಗಳಿಗೆ ರಜೆ ನೀಡಿದ ಪ್ರಸಂಗಗಳೂ ನಡೆದವು.

'ಸಾರಿಗೆ ಸೇವೆಗಳಿಗಾಗಿ ಖಾಸಗಿ ವಾಹನ ಅವಲಂಬಿಸಿರುವ ಕೆಲ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು. ಆದರೆ, ಹೆಚ್ಚಿನ ಶಾಲೆಗಳು ತೆರೆದಿದ್ದವು. ಶಾಲಾ ವಾಹನಗಳಿಗೆ ಯಾವುದೇ ಅಡ್ಡಿಯಾಗಿಲ್ಲ' ಎಂದು ಕರ್ನಾಟಕ ಖಾಸಗಿ ಶಾಲೆಗಳ ಆಡಳಿತ ಮಂಡಳಿ ಸಮನ್ವಯ ಸಮಿತಿ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಪ್ರತಿಕ್ರಿಯಿಸಿದರು.

ಟ್ಯಾಕ್ಸಿ ಮೇಲೆ ಕಲ್ಲು ತೂರಾಟ

ಭಾನುವಾರ ರಾತ್ರಿಯಿಂದಲೆ ಖಾಸಗಿ ಬಸ್, ಆಟೋ, ಓಲಾ, ಉಬರ್‌ನಂತಹ ಕ್ಯಾಬ್ ಸೇವೆ ಸ್ಥಗಿತಗೊಂಡಿದೆ. ಇದರ ಬೆನ್ನಲ್ಲೇ ವಿಮಾನ ನಿಲ್ದಾಣದ ಟ್ಯಾಕ್ಸಿಯೊಂದರ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ.

ವಿಮಾನ ನಿಲ್ದಾಣದಿಂದ ಆಗಮಿಸುವ ವೇಳೆ ಏರ್‌ಪೋರ್ಟ್ ಟ್ಯಾಕ್ಸಿ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ ಎಂದು ಪ್ರದ್ಯುಮ್ನ ಎಂಬುವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. 'ಬೆಂಗಳೂರಿನಲ್ಲಿ ಕಾನೂನು ಸುವ್ಯವಸ್ಥೆಗೆ ಏನಾಗಿದೆ? ಏರ್‌ಪೋರ್ಟ್‌ನಿಂದ ಆಗಮಿಸು ವೇಳೆ ನಾನು ಸಂಚರಿಸುತ್ತಿದ್ದ ಟ್ಯಾಕ್ಸಿ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ. ಟ್ಯಾಕ್ಸಿ ಗಾಜು ಪುಡಿಪುಡಿಯಾಗಿದೆ. ಸೂಕ್ಷ್ಮ ಪ್ರದೇಶಗಳಲ್ಲಿ ಏಕೆ ಪೊಲೀಸರನ್ನು ನಿಯೋಜಿಸಿಲ್ಲ' ಎಂದು ಪ್ರಶ್ನಿಸಿದ್ದಾರೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

12 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಂದ್ ವೇಳೆ ಪ್ರತಿಭಟನಕಾರರು ಕೆಲವರ ಮೇಲೆ ಹಲ್ಲೆ ನಡೆಸಿದ್ದು ವಿವಿಧ ವಿಭಾಗದ ವ್ಯಾಪ್ತಿಯಲ್ಲಿ 13 ಎಫ್‌ಐಆರ್‌ಗಳು ದಾಖಲಾಗಿವೆ.

ರಸ್ತೆಗೆ ವಾಹನ ಇಳಿಸಿದ ಕ್ಯಾಬ್ ಚಾಲಕರು ಹಾಗೂ ರ್‍ಯಾಪಿಡೊ ಸವಾರರ ಮೇಲೆ ಮೊಟ್ಟೆ ಎಸೆತ, ಹಲ್ಲೆ, ಚಕ್ರಗಳ ಗಾಳಿ ತೆಗೆದ ಆರೋಪದ ಮೇಲೆ ಒಟ್ಟು 12 ಮಂದಿ ಪ್ರತಿಭಟನಕಾರರನ್ನು ಪೊಲೀಸರು ಬಂಧಿಸಿದ್ದಾರೆ.

ಕೇಂದ್ರ ವಿಭಾಗದಲ್ಲಿ ಒಂದು ಪ್ರಕರಣ ದಾಖಲಾಗಿದ್ದು ಮೂವರನ್ನು ಬಂಧಿಸ ಲಾಗಿದೆ. ಪಶ್ಚಿಮ ವಿಭಾಗದಲ್ಲಿ 7 ಪ್ರಕರಣಗಳು ದಾಖಲಾಗಿವೆ. ಉತ್ತರ ವಿಭಾಗದಲ್ಲಿ 2 ಪ್ರಕರಣ ದಾಖಲಾಗಿದ್ದು, 6 ಮಂದಿಯನ್ನು ಬಂಧಿಸಲಾಗಿದೆ. ಆಗ್ನೇಯ ವಿಭಾಗದಲ್ಲಿ ಒಂದು ಎಫ್‌ಐಆರ್ ದಾಖಲಾಗಿದೆ. ಈಶಾನ್ಯ ವಿಭಾಗದಲ್ಲಿ 2 ಎಫ್‌ಐಆರ್ ದಾಖಲಾಗಿದ್ದು, ಮೂವರು ಚಾಲಕರನ್ನು ಬಂಧಿಸಲಾಗಿದೆ.

ರ್‍ಯಾಲಿ: ಫ್ರೀಡಂ ಪಾರ್ಕ್‌ಗೆ ಬೃಹತ್ ಪ್ರತಿಭಟನಾ ರ್‍ಯಾಲಿಯಲ್ಲಿ ಆಟೊ, ಖಾಸಗಿ ಬಸ್ ಹಾಗೂ ಕ್ಯಾಬ್ ಚಾಲಕರು ಬಂದರು. ವಾಹನಗಳಿಗೆ ಪರ್ಯಾಯ ಮಾರ್ಗದಲ್ಲಿ ತೆರಳುವಂತೆ ಸಂಚಾರ ಪೊಲೀಸರು ಸೂಚಿಸಿದ್ದರು.

ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೂ ಖೋಡೆ ವೃತ್ತದಿಂದ ಬಂದ ವಾಹನಗಳು, ಆರ್‌.ಆರ್‌.ಜಂಕ್ಷನ್, ಕೃಷ್ಣ ಫ್ಲೋರ್ ವೃತ್ತದ ಮೂಲಕ ಮಲ್ಲೇಶ್ವರ ದತ್ತ ತೆರಳಿದವು. ಗೂಡ್‌ಶೆಡ್ ರಸ್ತೆ ಕಡೆಯಿಂದ ಬಂದ ವಾಹನಗಳು, ಜಿ.ಟಿ.ರಸ್ತೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತ, ಓಕಳಿಪುರ ಮೂಲಕ ಸುಜಾತಾ ವೃತ್ತದ ಮೂಲಕ ತೆರಳಿದವು. ಮಾರ್ಗದಲ್ಲಿ ವಾಹನಗಳ ಸಾಲುಗಟ್ಟಿ ನಿಂತಿದ್ದವು.

ಚಾಲಕರ ಮೇಲೆ ಹಲ್ಲೆ

ಸಂಗೊಳ್ಳಿ ರಾಯಣ್ಣ ಫ್ಲೈಓವರ್ ಸಹಿತ ಕೆಲವು ಕಡೆಗಳಲ್ಲಿ ರ್‍ಯಾಪಿಡೊ ಬೈಕ್– ಟ್ಯಾಕ್ಸಿ ಚಾಲಕರನ್ನು ತಡೆದು ಹಲ್ಲೆ ಮಾಡಿರುವುದು ವರದಿಯಾಗಿದೆ. ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುತ್ತಿದ್ದ ಕಾರಿಗೆ ಚಿಕ್ಕಜಾಲದಲ್ಲಿ ಕಲ್ಲೆಸೆದು ಹಾನಿ ಮಾಡಲಾಗಿದೆ. ಹೆಬ್ಬಾಳದಲ್ಲಿ ಕಾರಿಗೆ ಮತ್ತು ಕಾರು ಚಾಲಕನ ತಲೆಗೆ ಮೊಟ್ಟೆಯನ್ನು ಒಡೆಯಲಾಗಿದೆ.

ಎಸ್‌.ಪಿ. ರಸ್ತೆಯಲ್ಲಿ ಬಾಡಿಗೆ ಮಾಡುತ್ತಿದ್ದ ಗೂಡ್ಸ್ ವಾಹನದ ಚಕ್ರದ ಗಾಳಿ ತೆಗೆಯಲಾಗಿದೆ. ಮೌರ್ಯ ಸರ್ಕಲ್‌ನಲ್ಲಿ ಕಾರು ಚಾಲಕನ ಮೇಲೆ ಹಲ್ಲೆ ಮಾಡಲಾಗಿದೆ. ಹೀಗೆ ಹಲವು ಕಡೆಗಳಲ್ಲಿ ಹಲ್ಲೆ ಮತ್ತು ಹಾನಿ ಘಟನೆಗಳು ನಡೆದಿವೆ.

'ಹಲ್ಲೆ ನಡೆದಿದ್ದರೆ ದೂರು ನೀಡಿ'

ಬೆಂಗಳೂರು: 'ರ್‍ಯಾಪಿಡೊ ಹಾಗೂ ಆಟೊ ಚಾಲಕರ ಮೇಲೆ ನಡೆದ ಹಲ್ಲೆಗೆ ಸಂಬಂಧಿಸಿದಂತೆ ದೂರು ನೀಡಿದರೆ ಪ್ರಕರಣ ದಾಖಲಿಸಿಕೊಳ್ಳಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ತಿಳಿಸಿದ್ದಾರೆ. ಧೈರ್ಯದಿಂದ ಬಂದು ದೂರು ನೀಡಬಹುದು' ಎಂದು ಮನವಿ ಮಾಡಿದ್ದಾರೆ.

'ಎಲ್ಲಿಯೂ ಅಹಿತಕರ ಘಟನೆಗಳು ನಡೆದಿಲ್ಲ. ಕೆಲವರ ನಡುವೆ ವಾಗ್ವಾದ, ಗಲಾಟೆ ಹಾಗೂ ಹಲ್ಲೆ ಪ್ರಕರಣಗಳು ವರದಿಯಾಗಿವೆ. ಈ ಸಂಬಂಧ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಹೇಳಿದ್ದಾರೆ.

ಪರಿಶಿಷ್ಟರ ಹಣ ಗ್ಯಾರಂಟಿಗೆ ಸೆ.25ರಿಂದ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಮೀಸಲಾದ ಅನುದಾನದಲ್ಲಿ ₹11,144 ಕೋಟಿಯನ್ನು 'ಗ್ಯಾರಂಟಿ' ಯೋಜನೆಗಳಿಗೆ ಬಳಸುವ ತೀರ್ಮಾನವನ್ನು ಸರ್ಕಾರ ಇನ್ನೂ ಕೈಬಿಟ್ಟಿಲ್ಲ. ಆದ್ದರಿಂದ ಇದೇ 25ರಿಂದ ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು ಮಾಜಿ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೋರಾಟವು ಜಿಲ್ಲಾ ಕೇಂದ್ರಗಳಲ್ಲಿ ಸೆ.25ರಿಂದ ಅಕ್ಟೋಬರ್ 10ರವರೆಗೆ ನಡೆಯಲಿದೆ ಎಂದು ಹೇಳಿದರು.

ಅನುದಾನವನ್ನು ಪರಿಶಿಷ್ಟ ಸಮುದಾಯಕ್ಕೆ ಬಳಸದೇ ಹೋದರೆ ಎರಡನೇ ಹಂತದಲ್ಲಿ ಜಿಲ್ಲಾ ಸಚಿವರು ಮತ್ತು ಶಾಸಕರಿಗೆ ಮುತ್ತಿಗೆ ಹಾಕಲಾಗುವುದು. ಅಕ್ಟೋಬರ್ 11ರಿಂದ 25ರವರೆಗೆ ಎಲ್ಲ ಜಿಲ್ಲೆಗಳಲ್ಲಿ ಶಾಸಕರು ಮತ್ತು ಸಚಿವರ ಮನೆ ಮುಂದೆ ಧರಣಿ ಹಮ್ಮಿಕೊಳ್ಳಲಾಗುವುದು ಎಂದರು.

ಇದಕ್ಕೂ ಮುನ್ನ ನಗರದ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣದಲ್ಲಿ 'ಸಿಟಿಜನ್ ಫಾರ್ ಸೋಶಿಯಲ್ ಜಸ್ಟೀಸ್ - ಬೆಂಗಳೂರು' ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಕಾರಜೋಳ ಮಾತನಾಡಿ, 'ಡೋಂಗಿ ಮಾತುಗಳು, ಸುಳ್ಳು ಭರವಸೆಗಳ ಮೂಲಕ ಪರಿಶಿಷ್ಟರನ್ನು ಮೋಸ ಮಾಡಲು ಸಿದ್ದರಾಮಯ್ಯ ಮುಂದಾಗಿದ್ದಾರೆ. ಎಸ್‌ಸಿ– ಎಸ್‌ಟಿ ಜನಾಂಗದ ಶಿಕ್ಷಣ, ಆರೋಗ್ಯ ಮತ್ತು ಅಭಿವೃದ್ಧಿಗಾಗಿ ಈ ಹಣ ಬಳಸಬೇಕಾಗಿದೆ. ಮನಸ್ಸಿಗೆ ಬಂದಂತೆ ಬಳಸಲು ಅಲ್ಲ' ಎಂದು ತರಾಟೆಗೆ ತೆಗೆದುಕೊಂಡರು.

'ಈ ಸಮುದಾಯದಲ್ಲಿ ಹುಟ್ಟಿದ ಮಲ್ಲಿಕಾರ್ಜುನ ಖರ್ಗೆಯವರು ಇದನ್ನೆಲ್ಲ ಸಹಿಸಿಕೊಂಡು ಬಾಯಿ ಮುಚ್ಚಿಕೊಂಡಿರುವುದೇಕೆ? ಏಕೆ ತುಟ್ಟಿ ಬಿಚ್ಚುತ್ತಿಲ್ಲ? ಮತಬ್ಯಾಂಕ್ ರಾಜಕಾರಣಕ್ಕೆ ಅವರೂ ಜೋತು ಬಿದ್ದಿದ್ದಾರೆಯೇ' ಎಂದು ಕಾರಜೋಳ ಪ್ರಶ್ನಿಸಿದರು.

'ಈ ಚುನಾವಣೆಯಲ್ಲಿ ನಾವು ಸೋತಿದ್ದೇವೆ. ಆದರೆ ಆಕಾಶ ಕೆಳಗೆ ಬಿದ್ದಿಲ್ಲ, ಪ್ರಳಯ ಆಗಿಲ್ಲ. ನಮಗೆ ಮುಂದೆ ಅವಕಾಶ ಸಿಗಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ವಿಧಾನಪರಿಷತ್ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಪರಿಶಿಷ್ಟ ಹಣದ ದುರ್ಬಳಕೆಯನ್ನು ತಡೆದು, ಮೀಸಲಿಟ್ಟ ಅನುದಾನವನ್ನು ನಿಗದಿಯ ಉದ್ದೇಶಕ್ಕೆ ಮಾತ್ರ ಬಳಸಬೇಕು. ಹಣ ದುರ್ಬಳಕೆ ವಿರುದ್ಧ ಹೋರಾಟ ಮಾಡಲೇಬೇಕು ಎಂದು ಹೇಳಿದರು. ಮಾಜಿ ಸಚಿವ ಬಿ.ಶ್ರೀರಾಮುಲು ಮಾತನಾಡಿ, 'ಬಿಜೆಪಿ ಸರ್ಕಾರ ಜನರಿಗಾಗಿ ಹಲವು ಒಳ್ಳೆಯ ಕೆಲಸಗಳನ್ನು ಮಾಡಿತ್ತು. ಆದರೆ, ಒಳ್ಳೆಯ ಕೆಲಸಗಳು ಈಗ ಮರೆತೇ ಹೋಗಿದೆ. ಕಾಂಗ್ರೆಸ್ ಸರ್ಕಾರದಿಂದ ಜನರು ಸಂಕಷ್ಟಕ್ಕಿಡಾಗಿದ್ದಾರೆ' ಎಂದರು.

ಮಾಜಿ ಶಾಸಕ ಎನ್.ಮಹೇಶ್, ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಸಿದ್ದರಾಜು, ಕೋಲಾರ ಸಂಸದ ಮುನಿಸ್ವಾಮಿ, ಮಾಜಿ ಶಾಸಕ ಪಿ.ರಾಜೀವ್ ಸೇರಿ ಬಿಜೆಪಿಯ ಪ್ರಮುಖ ನಾಯಕರು ಭಾಗವಹಿಸಿದ್ದರು.

ಸಿಟಿಜನ್ ಫಾರ್ ಸೋಶಿಯಲ್ ಜಸ್ಟೀಸ್ ಬೆಂಗಳೂರು' ನಗರದ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣದಲ್ಲಿ 'ಎಸ್‌ಸಿ, ಎಸ್‌ಟಿ ಮೀಸಲು ಹಣ ಮುಳುಗಿಸುತ್ತಿರುವ ರಾಜ್ಯ ಸರ್ಕಾರ' ಎಂಬ ವಿಷಯದ ಕುರಿತ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಮಾಜಿ ಶಾಸಕರಾದ ಬಸವರಾಜ ದಡೆಸಗೂರು, ಸೋಮಲಿಂಗಪ್ಪ, ಪಿ.ರಾಜೀವ್, ಎನ್ ಮಹೇಶ್, ಗೋವಿಂದ ಕಾರಜೋಳ ಇದ್ದರು.

ರಮೇಶ್ ಕೆಪಿಸಿಸಿ ಒಬಿಸಿ ಕಾರ್ಯದರ್ಶಿ

ಬೆಂಗಳೂರು: ಬಾಪೂಜಿ ನಗರದ ಎಸ್. ರಮೇಶ್ ಅವರನ್ನು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಹಿಂದುಳಿದ ವರ್ಗಗಳ ಸಂಘಟನೆಗೆ ಮತ್ತು ಬಲವರ್ಧನೆಗೆ ಶ್ರಮಿಸಲು ರಮೇಶ್ ಅವರನ್ನು ನೇಮಿಸಲಾಗಿದೆ ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ವಿಭಾಗದ ಅಧ್ಯಕ್ಷರೂ ಆಗಿರುವ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

ನೀರು ಪೂರೈಕೆಯಲ್ಲಿ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಯ ಚಂದ್ರಾ ಬಡಾವಣೆಯ ಜಲಗಾರಕ್ಕೆ ನೀರು ಪೂರೈಕೆಯ ಮಾರ್ಗಗಳಲ್ಲಿನ ಕವಾಟುಗಳ ದುರಸ್ತಿ ಕಾಮಗಾರಿ ನಡೆಯುತ್ತಿರುವುದರಿಂದ ಇದೇ 13ರಂದು (ಬುಧವಾರ) ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ನೀರು ವ್ಯತ್ಯಯವಾಗುವ ಸ್ಥಳಗಳು: ಮಹಾಲಕ್ಷ್ಮಿ ಲೇಔಟ್, ಜೆ.ಸಿ. ನಗರದ 1ನೇ ರಸ್ತೆಯಿಂದ 12ನೇ ಮುಖ್ಯರಸ್ತೆವರೆಗೂ, ಆತ್ಮೀಯರ ಗೆಳೆಯರ ಬಳಗ, ಶ್ರೀರಾಮನಗರ, ಸರಸ್ವತಿಪುರ, ಬೋವಿಪಾಳ್ಯ, ಮೈಕೊ ಲೇಔಟ್, ರಾಜಾಜಿನಗರ 2ನೇ ಬ್ಲಾಕ್‌ನಿಂದ 5ನೇ ಬ್ಲಾಕ್, ಭುವನೇಶ್ವರಿನಗರ, ಡಾ.ರಾಜ್‌ಕುಮಾರ್ ರಸ್ತೆ, ಪ್ರಕಾಶನಗರ, ಕೇತಮಾರನಹಳ್ಳಿ, ಗಾಯತ್ರಿನಗರ, ನಂದಿನಿ ಲೇಔಟ್, ಕಂಠೀರವನಗರ, ವಿಜಯಾನಂದನಗರ, ರಾಜೀವಗಾಂಧಿ ನಗರ, ಬಸವೇಶ್ವರನಗರ, ಜೆ.ಸಿ.ನಗರ, ವಾಣಿವಿಲಾಸ್ ಗಾರ್ಡನ್, ಕರ್ನಾಟಕ ಲೇಔಟ್, ವೈಯಾಲಿ ಕಾವಲ್, ಕಿರ್ಲೋಸ್ಕರ್ ಕಾಲೊನಿ, ಟೀಚರ್ಸ್ ಬಡಾವಣೆ, ಮೀನಾಕ್ಷಿನಗರ.

ಕಾಮಾಕ್ಷಿಪಾಳ್ಯ, ಹೌಸಿಂಗ್ ಬೋರ್ಡ್, ಮಾರುತಿನಗರ, ವಿನಾಯಕನಗರ, ಮಂಜುನಾಥನಗರ, ಶಿವನಹಳ್ಳಿ, ಇಂದಿರಾನಗರ ಸ್ಲಂ, ಭೀಮಜ್ಯೋತಿ, ಅಗ್ರಹಾರ ದಾಸರಹಳ್ಳಿ, ಪಾಪಯ್ಯ ಗಾರ್ಡನ್, ಕೊಟ್ಟಿಗೆಪಾಳ್ಯ, ವಿಧಾನಸೌಧ ಲೇಔಟ್, ಶೆಟ್ಟಿಹಳ್ಳಿ ವಾರ್ಡ್ ಸಂಖ್ಯೆ–12, ಪೀಣ್ಯ ಕೈಗಾರಿಕಾ ಪ್ರದೇಶ ವಾರ್ಡ್ ಸಂಖ್ಯೆ41, ಲಗ್ಗೆರೆ ವಾರ್ಡ್ ಸಂಖ್ಯೆ 69, ದೀಪಾಂಜಲಿನಗರ, ಹಂಪಿನಗರ, ವಿಜಯನಗರ, ಕಸ್ತೂರಿನಗರ, ಶಂಕರಪ್ಪ ಗಾರ್ಡನ್, ಪ್ರಮೋದ್ ಲೇಔಟ್, ಪಂತರಪಾಳ್ಯ, ಬಾಲಾಜಿ ಲೇಔಟ್, ಬಂಗಾರಪ್ಪನಗರ, ಚೆನ್ನಸಂದ್ರ ಗ್ರಾಮ, ಕೆರೆಪಾಳ್ಯ, ಕೋಡಿಪಾಳ್ಯ, ಅತ್ತಿಗುಪ್ಪೆ, ಚಂದ್ರಾ ಲೇಔಟ್, ನಾಯಂಡಹಳ್ಳಿ, ಮಾನಸನಗರ, ಹೊಯ್ಸಳನಗರ, ವಿದ್ಯಾಗಿರಿ ಲೇಔಟ್, ಕಾವೇರಿಪುರ, ಗೋವಿಂದರಾಜನಗರ, ಸರಸ್ವತಿನಗರ, ಶಿವಾನಂದನಗರ, ಕೆನರಾ ಬ್ಯಾಂಕ್ ಕಾಲೊನಿ, ಮೂಡಲಪಾಳ್ಯ, ಕನಕನಗರ, ಬೈರವೇಶ್ವರನಗರ, ಆದರ್ಶನಗರ, ಶಕ್ತಿ ಗಾರ್ಡನ್, ಅಮರಜ್ಯೋತಿನಗರ, ಜಗಜ್ಯೋತಿನಗರ, ಕೆಂಪಣ್ಣ ತೋಟ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ@75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ

bit.ly/40dPCqy

ರಸ್ತೆ ಬದಿ ಫ್ಲೆಕ್ಸ್: ಕಾಸ ಗ್ರ್ಯಾಂಡ್ ಸಂಸ್ಥೆಗೆ ₹50 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಲಘಟ್ಟಪುರ ರಸ್ತೆ ಬದಿಯಲ್ಲಿ ಫ್ಲೆಕ್ಸ್ ಅಳವಡಿಸಿದ್ದ ಕಾಸ ಗ್ರ್ಯಾಂಡ್ ಸಂಸ್ಥೆಗೆ ಬಿಬಿಎಂಪಿ ₹50 ಸಾವಿರ ದಂಡ ವಿಧಿಸಿದೆ.

ಬಿಬಿಎಂಪಿ ರಾಜರಾಜೇಶ್ವರಿನಗರ ವಲಯದ ಕೆಂಗೇರಿ ವಿಭಾಗದ ವಾರ್ಡ್ ಹೆಮ್ಮಿಗೆಪುರ ವ್ಯಾಪ್ತಿಯಲ್ಲಿ ಕಾಸ ಗ್ರ್ಯಾಂಡ್ ವಸತಿ ಸಮುಚ್ಚಯ ನಿರ್ಮಾಣ ಮಾಡುವ ಸಂಸ್ಥೆಯು ಜಾಹೀರಾತು ಫ್ಲೆಕ್ಸ್ ಗಳನ್ನು ಅಳವಡಿಸಿತ್ತು. ಅವುಗಳನ್ನು ತೆರವು ಮಾಡಿ ₹ 50,000 ದಂಡವನ್ನು ವಸೂಲಿ ಮಾಡಲಾಗಿರುತ್ತದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ರಾಜರಾಜೇಶ್ವರಿ ನಗರ ವಲಯ ಆಯುಕ್ತ ಬಿ. ರೆಡ್ಡಿಶಂಕರ ಬಾಬು ಮತ್ತು ವಲಯ ಜಂಟಿ ಆಯುಕ್ತರ ಅಜಯ್.ವಿ. ಮಾರ್ಗದರ್ಶನ ನೀಡಿ, ದಂಡ ವಸೂಲಿಗೆ ಆದೇಶ ನೀಡಿದ್ದರು. ಘನ ತ್ಯಾಜ್ಯ ವಿಭಾಗದ ವಿಭಾಗದ ಸಿಬ್ಬಂದಿ ತೆರವು ಕಾರ್ಯ ನಡೆಸಿದರು.

'ಖಾಸಗಿ ಸಾರಿಗೆ ವ್ಯವಸ್ಥೆಗೆ ನೆರವು ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಜಾರಿಗೊಳಿಸಿರುವ ಅರೆ ಬೆಂದ 'ಶಕ್ತಿ' ಯೋಜನೆಯಿಂದ ಖಾಸಗಿ ಸಂಚಾರ ವ್ಯವಸ್ಥೆ ಬುಡಮೇಲಾಗಿದೆ. ಈ ಕ್ಷೇತ್ರದಲ್ಲಿ ಸಂಕಷ್ಟದಲ್ಲಿ ಸಿಲುಕಿರುವವರಿಗೆ ಸರ್ಕಾರ ನೆರವು ಕೊಡಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಈ ಕುರಿತು ಸೋಮವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಅಡ್ಡ ಪರಿಣಾಮದ ತೀವ್ರತೆ ಜನರಿಗೆ ತಟ್ಟುತ್ತಿದೆ. ಸರ್ಕಾರಿ ಸೌಲಭ್ಯಗಳ ಹಂಚಿಕೆಯಲ್ಲಿನ ಅಸಮಾನತೆ ಮತ್ತು ಪಕ್ಷಪಾತದಿಂದ ಅರಾಜಕತೆ ಸೃಷ್ಟಿಯಾಗಿದೆ' ಎಂದು ದೂರಿದ್ದಾರೆ.

ಸಾಲ ಮಾಡಿ ಆಟೊ ರಿಕ್ಷಾ, ಕ್ಯಾಬ್ ಓಡಿಸಿ ಜೀವನ ನಡೆಸುತ್ತಿದ್ದವರು ಬೀದಿ ಪಾಲಾಗಿದ್ದಾರೆ. ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳಷ್ಟೇ ಉತ್ತಮವಾಗಿ ಸೇವೆ ಒದಗಿಸುತ್ತಿದ್ದ ಖಾಸಗಿ ಬಸ್ ಜಾಲವನ್ನು ಸರ್ಕಾರ ಹಾಳು ಮಾಡಿದೆ. ಈ ಕ್ಷೇತ್ರವನ್ನು ನಂಬಿದ್ದ ಅನೇಕರ ಜೀವನಕ್ಕೆ 'ಗ್ಯಾರಂಟಿ' ಇಲ್ಲವಾಗಿದೆ ಎಂದು ಟೀಕಿಸಿದ್ದಾರೆ.

ಈ ವಿಚಾರದಲ್ಲಿ ಸರ್ಕಾರ ಪ್ರತಿಷ್ಠೆ ಪ್ರದರ್ಶಿಸಬಾರದು. ಖಾಸಗಿ ಸಾರಿಗೆ ಒಕ್ಕೂಟದವರ ಬೇಡಿಕೆಗಳನ್ನು ಮಾನವೀಯತೆಯಿಂದ ಪರಿಶೀಲಿಸಿ, ಈಡೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ನಗರದಲ್ಲಿ ಇಂದು

'ಮಿಲ್‌ಐಕಾನ್–2023' ಸಿರಿಧಾನ್ಯ ಅಂತರರಾಷ್ಟ್ರೀಯ ಸಮಾವೇಶ: ಅತಿಥಿಗಳು: ಖಾದರ್ ವಲಿ, ಶ್ರೀದೇವಿ ಅನ್ನಪೂರ್ಣ ಸಿಂಗ್, ಪಿ.ಬಿ. ಕವಿ ಕಿಶೋರ್, ಅಧ್ಯಕ್ಷತೆ: ಚೆನ್‌ರಾಜ್ ರಾಯಚಂದ್, ಸ್ಥಳ: ಸ್ಕೂಲ್ ಆಫ್ ಸೈನ್ಸ್, ಜೈನ್ ವಿಶ್ವವಿದ್ಯಾಲಯ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಪದ್ಮಲತಾ ಮೋಹನ್ ಅವರ 'ಮೃತ್ಯು ಚುಂಬನ' ಪುಸ್ತಕ ಬಿಡುಗಡೆ: ಜೋಗಿ, ಅಧ್ಯಕ್ಷತೆ: ರಾ.ನಂ. ಚಂದ್ರಶೇಖರ, ಪುಸ್ತಕ ಪರಿಚಯ: ಜಿ.ಎನ್. ಮೋಹನ್, ಉಪಸ್ಥಿತಿ: ಆರ್. ದೊಡ್ಡೆಗೌಡ, ಆಯೋಜನೆ: ನಿರಂತರ, ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಮಧ್ಯಾಹ್ನ 2.30

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ, ಎಚ್‌.ಪಿ. ಸುಧಾಮ್ ದಾಸ್ ಅವರಿಗೆ ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಸನ್ಮಾನಿತರು: ಸುಧಾಮ್ ದಾಸ್, ಅಧ್ಯಕ್ಷತೆ: ಎನ್. ಮಹೇಶ್, ಅತಿಥಿಗಳು: ಜೆ. ಅರುಣ್ ಚಕ್ರವರ್ತಿ, ಬಿ. ಗೋಪಾಲ್, ಬಿ.ಟಿ. ಲಲಿತಾ ನಾಯಕ್, ಹೆಣ್ಣೂರು ಶ್ರೀನಿವಾಸ್, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ರೊಬೋಟಿಕ್ ಕಾಡುಪ್ರಾಣಿಗಳ ಪ್ರದರ್ಶನ: ಆಯೋಜನೆ: ರೊಬೋಟಿಕ್ ಬರ್ಡ್ಸ್ ವರ್ಲ್ಡ್, ಸ್ಥಳ: ಸೀತಾರಾಮಾಂಜನೇಯ ದೇವಸ್ಥಾನದ ಎದುರು, ಜಿ.ಕೆ.ಡಬ್ಲ್ಯು ಬಡಾವಣೆ, ಪೀಣ್ಯ 2ನೇ ಹಂತ, ಸಂಜೆ 4

ಭಾರತ ಸಂಗೀತ ಪರಂಪರೆ ಆಚರಣೆ: ಲಯ ಲಾವಣ್ಯ–ತಾಳ ವಾದ್ಯ ಕಛೇರಿ: ನಿರ್ದೇಶನ: ಆನೂರು ಅನಂತಕೃಷ್ಣ ಶರ್ಮ, ಮೃದಂಗ: ಆನೂರು ವಿನೋದ್ ಶ್ಯಾಮ್, ಖಂಜಿರ: ಆರ್. ಕಾರ್ತಿಕ್, ಕೊನ್ನಕ್ಕೋಲ್: ಸೋಮಶೇಖರ ಜೋಯಿಸ್, ಕೊಳಲು: ಶಡಜ್ ಗೋಡ್ಖಿಂಡಿ, ಪಿಟೀಲು: ವೈಭವ್ ರಮಣಿ, ಮೋರ್ಚಿಂಗ್: ಚಿದಾನಂದ, ತಬಲಾ: ಆದರ್ಶ ಶಣೈ, ತಬಲಾ: ಜಗದೀಶ್ ಕುರ್ತಕೋಟಿ, ಮೃದಂಗ: ವಿದ್ಯಾಶಂಕರ್ ಎನ್., ಘಟ: ವಿದ್ಯಾಶಂಕರ್ ಬಿ.ಆರ್., ಪಖವಾಜ್: ಪ್ರಬೋಧ್ ಶ್ಯಾಮ್, ರಿದಂ ಪ್ಯಾಡ್: ಅಮೋಘವರ್ಷ, ಸುಮಧುರ್ ಎ.ಡಿ., ತಾಳ: ಪ್ರಸನ್ನ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ: ಗಾಯನ: ಜಯತೀರ್ಥ ಮೇವುಂಡಿ, ತಬಲಾ: ರವೀಂದ್ರ ಜಿ. ಕಾಟೋಟಿ, ತಂಬೂರಿ: ಬಿ.ಎನ್. ಶಿವಪ್ರಸಾದ್, ಆಯೋಜನೆ: ಆಕಾಶವಾಣಿ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30ರಿಂದ

ಜಯತೀರ್ಥ ಮೇವುಂಡಿ

'ಪಾಂಚಜನ್ಯ ಕುಶಲವ' ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ, ಸ್ಥಳ: ಶುಭಂ ಕರೋತಿ ಮೈತ್ರೇಯ ಗುರುಕುಲ, ದೊಡ್ಡ ಆಲದಮರ ರಸ್ತೆ, ರಾಮೋಹಳ್ಳಿ, ಸಂಜೆ 5.30

ರಾಹುಲ್ ಗಾಂಧಿ ಅವರ ಬಗ್ಗೆ ಸುಗತ ಶ್ರೀನಿವಾಸರಾಜು ಅವರು ಬರೆದಿರುವ 'ಸ್ಟ್ರೇಂಜ್ ಬರ್ಡನ್ಸ್' ಪುಸ್ತಕ ಬಿಡುಗಡೆ: ಅತಿಥಿಗಳು: ಜಿ.ಎನ್. ದೇವಿ, ಸಂಜಯ್ ಜೈನ್, ಪದ್ಮಾವತಿ ರಾವ್, ಚಿರಂಜೀವಿ ಸಿಂಘ್, ಆಯೋಜನೆ: ಪ್ರದರ್ಶಕ ಮಿಡಿಯಾ ಫೌಂಡೇಷನ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಸಂಜೆ 6

ವಚನ ಶ್ರಾವಣ–2023: ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿ: ರಾಜಾ ನಂಜುಂಡಯ್ಯ, ಅಧ್ಯಕ್ಷತೆ: ಸಮೀವುಲ್ಲಾ ಖಾನ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಅನಸೂಯ, ಮಂಜುನಾಥ ಮನೆ ಅಂಗಳ, ಯಶವಂತಪುರ, ಸಂಜೆ 6

ಭಜನ-ಪ್ರವಚನ-ಸಂಕೀರ್ತನ: ಭಜನೆ: ವ್ಯಾಸತೀರ್ಥ ಮಂಡಳಿ, 'ಭಾಗವತದ ಸಂದೇಶಗಳು': ಎಸ್‌.ಎಂ. ಪ್ರಣವಾಚಾರ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಶ್ರೀಪಾದರಾಜ ಮಠ, ರಾಘವೇಂದ್ರ ಕಾಲೋನಿ, ಚಾಮರಾಜಪೇಟೆ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕ್ಷೇಮ ಕುಶಲ

ದೇಹಕ್ಕೆ ಬೇಕು ನೀರು...

ಡಾ. ಕಿರಣ್ ವಿ. ಎಸ್.

ನಮ್ಮ ದೇಹದ ಬಹುಭಾಗ ನೀರು. 'ಭೂಮಿಯ ಶೇ 66 ನೀರು; ಅಂತೆಯೇ, ದೇಹದ 66 ಪ್ರತಿಶತ ನೀರು' ಎನ್ನುವ ಚಮತ್ಕಾರದ ಮಾತಿದೆ. ಸುಮಾರು 70 ಕಿಲೋಗ್ರಾಂ ತೂಗುವ ವ್ಯಕ್ತಿಯ ಶರೀರದ 40-45 ಕಿಲೋಗ್ರಾಂ ನೀರು ಎಂದು ಅಂದಾಜಿಸಬಹುದು. ಸಣ್ಣ ಮಕ್ಕಳ ದೇಹದಲ್ಲಿ ಈ ನೀರಿನ ಪ್ರತಿಶತ ಪ್ರಮಾಣ ಅಧಿಕ; ವೃದ್ಧರಲ್ಲಿ ಸ್ವಲ್ಪ ಕಡಿಮೆ. ಮೂತ್ರ, ಬೆವರು, ಶ್ವಾಸದ ಆರ್ದ್ರತೆ, ಮತ್ತು ವಾತಾವರಣದ ಉಷ್ಣತೆಗೆ ಚರ್ಮದಿಂದ ಆವಿಯಾಗುವ ನೀರಿನ ಪ್ರಮಾಣವನ್ನು ನಾವು ಶರೀರಕ್ಕೆ ಮತ್ತೆ ನೀಡಬೇಕು. ನಾವು ಸೇವಿಸುವ ದ್ರವದ ಪ್ರಮಾಣ ನಮ್ಮ ದೇಹದಿಂದ ಹೊರ ಹೋಗುವ ನೀರಿನ ಅಂಶಕ್ಕಿಂತ ಕಡಿಮೆಯಾದರೆ ಶರೀರದ ಒಟ್ಟಾರೆ ನೀರಿನ ಮಟ್ಟ ಇಳಿದುಹೋಗುತ್ತದೆ. ಇದನ್ನೇ 'ನಿರ್ಜಲೀಕರಣ' (ಡಿಹೈಡ್ರೇಷನ್) ಎನ್ನಬಹುದು.

ಏಕಕೋಶ ಜೀವಿಗಳಿಂದ ಮೊದಲಾದ ಜೀವವಿಕಾಸ ಆರಂಭವಾದದ್ದು ಸಮುದ್ರದ ನೀರಿನಲ್ಲಿ. ಈ ಪ್ರಕ್ರಿಯೆ ಮುಂದುವರೆದಂತೆಲ್ಲ ಬಹುಕೋಶ ಜೀವಿಗಳು ವಿಕಾಸಗೊಂಡವು. ಇದು ಮುಂದುವರೆದು ನೆಲದ ಮೇಲೆ ಬದುಕಬಲ್ಲ ಜೀವಿಗಳು ವಿಕಸನವಾದವು. ಜೀವವಿಕಾಸ ಪ್ರಕ್ರಿಯೆಯನ್ನು ಯಾವುದೇ ದಿಕ್ಕಿನಲ್ಲಿ ಗಮನಿಸಿದರೂ ಜೀವಿಗಳ ಒಡಲಿನಲ್ಲಿ ಸಮುದ್ರದ ವಾತಾವರಣವೇ ಇರುತ್ತದೆ ಎಂದು ತಜ್ಞರ ಅಭಿಮತ. ಹೀಗಾಗಿ, ಸಮುದ್ರದ ನೀರಿನಂತೆಯೇ ನಮ್ಮ ದೇಹವೂ ಹಲವಾರು ಲವಣಗಳಿಗೆ ಮನೆ. ಈ ಉಪ್ಪಿನ ಅಂಶ ದೇಹದ ನೀರಿನಲ್ಲಿ ಕರಗಿ ದ್ರಾವಣದ ರೂಪದಲ್ಲಿರುತ್ತದೆ. ಈ ಲವಣಗಳು ದೇಹದ ಕೆಲಸಗಳಿಗೆ ಅತ್ಯಗತ್ಯ. ಶರೀರದೊಳಗಿನ ನೀರು ಮತ್ತು ಲವಣಗಳ ಅನುಪಾತ ಒಂದು ನಿರ್ದಿಷ್ಟ ಮಟ್ಟವನ್ನು ಕಾಯ್ದುಕೊಳ್ಳಬೇಕು. ನೀರಿನ ಭಾಗ ಹೆಚ್ಚಾದರೆ ಲವಣಗಳ ಸಾಂದ್ರತೆ ಕಡಿಮೆಯಾಗುತ್ತದೆ. ಒಂದು ವೇಳೆ ದೇಹದಲ್ಲಿ ನಿರ್ಜಲೀಕರಣವಾದರೆ ಉಪ್ಪಿನ ಮಟ್ಟ ಏರುತ್ತದೆ. ಈ ಎರಡೂ ಸಂದರ್ಭಗಳಲ್ಲಿ ಶರೀರದ ನಿರ್ವಹಣೆ ಹಳಿ ತಪ್ಪುತ್ತದೆ.

ಶರೀರದ ಚಯಾಪಚಯಗಳಿಂದ ಸದಾ ಕಾಲ ನೀರು ಬಾಷ್ಪವಾಗುತ್ತಲೆ ಇರುತ್ತದೆ. ಈ ನೀರಿನ ಅಂಶ ಒಂದು ಹಂತಕ್ಕಿಂತ ಕಡಿಮೆಯಾದಾಗ ಮಿದುಳು ಅದನ್ನು ದಾಹ ಎಂದು ಗುರುತಿಸುತ್ತದೆ. ನೀರಡಿಕೆ ಎಂಬುದು ದೇಹದಲ್ಲಿ ನೀರಿನ ಅಂಶ ಕಡಿಮೆಯಾಗಿದೆ ಎಂದು ನಮ್ಮ ಮಿದುಳು ನೀಡುವ ಸಂಕೇತ. ಈ ಸೂಚನೆಯನ್ನು ಅವಗಣಿಸಿದರೆ, ಅಥವಾ ನೀರಿನ ಬದಲಿಗೆ ಸಕ್ಕರೆಯುಕ್ತ ಪೇಯಗಳನ್ನು ಸೇವಿಸಿದರೆ, ನೀರಡಿಕೆ ತಾತ್ಕಾಲಿಕವಾಗಿ ಇಂಗುತ್ತದೆ. ಸಕ್ಕರೆಯುಕ್ತ ಪಾನೀಯಗಳು ಮೂತ್ರಪಿಂಡಗಳ ಮೂಲಕ ಹೆಚ್ಚು ನೀರನ್ನು ಸೋಸಿ, ಇನ್ನಷ್ಟು ನೀರನ್ನು ಮೂತ್ರದಲ್ಲಿ ಹೊರಹಾಕುತ್ತವೆ. ಇಂತಹ ಪಾನೀಯಗಳ ಜೊತೆಗೆ ಸೇವಿಸಿದ ನೀರಿಗಿಂತ ಶರೀರ ಹೊರಹಾಕುವ ನೀರಿನ ಅಂಶವೇ ಅಧಿಕ. ಹೀಗಾಗಿ, ದಾಹವಾದಾಗ ಮೊದಲು ಸಾಕಷ್ಟು ನೀರು ಕುಡಿಯುವುದು ಸರಿಯಾದ ಪದ್ಧತಿ.

ನಿರ್ಜಲೀಕರಣದ ಲಕ್ಷಣಗಳು ಹಲವಾರು - ದಾಹ, ತಲೆಸುತ್ತಿವಿಕೆ, ಬಾಯಿ ಒಣಗುವುದು, ಸುಸ್ತು, ನಿತ್ರಾಣ, ಮಂಕು ಕವಿಯುವುದು, ಕಣ್ಣು ಕಪ್ಪುಗಟ್ಟುವುದು, ಮೂತ್ರದ ಪ್ರಮಾಣ ಕಡಿಮೆಯಾಗುವುದು, ಮೂತ್ರ ಗಾಢ ಹಳದಿಬಣ್ಣಕ್ಕೆ ತಿರುಗುವುದು, ಮೊದಲಾದುವು. ಶರೀರದ ಸಹಜ ನೀರಿನ ಮಟ್ಟದಲ್ಲಿ ಎರಡು ಪ್ರತಿಶತ ಇಳಿಕೆಯಾದರೂ ಈ ಲಕ್ಷಣಗಳು ಕಾಣುತ್ತವೆ. ಮೂರು ಪ್ರತಿಶತ ಕಡಿಮೆಯಾದರೆ ಆಹಾರದ ರುಚಿ ಕಡಿಮೆಯಾಗಿ, ಪ್ರಜ್ಞೆ ತಪ್ಪುವಂತಾಗುತ್ತದೆ. ಇದಕ್ಕಿಂತ ಹೆಚ್ಚಿನ ಅಂಶ ನಷ್ಟವಾದರೆ ಆಸ್ಪತ್ರೆ ಸೇರುವ ಅಗತ್ಯ ಬರಬಹುದು.

ನಿರ್ಜಲೀಕರಣಕ್ಕೆ ಕಾರಣಗಳನ್ನು ಎರಡು ಮುಖ್ಯ ವಿಭಾಗಗಳಾಗಿ ಪರಿಗಣಿಸಬಹುದು: ಅಗತ್ಯಕ್ಕಿಂತ ಕಡಿಮೆ ನೀರಿನ ಸೇವನೆ ಮತ್ತು ನೀರಿನ ಅಧಿಕ ನಷ್ಟ. ದೇಹದ ಸಹಜ ನೀರಿನ ಮಟ್ಟವನ್ನು ಕಾಯ್ದುಕೊಳ್ಳಲು ವಯಸ್ಕರು ದಿನವೊಂದಕ್ಕೆ ಕನಿಷ್ಠ ಒಂದೂವರೆ ಲೀಟರ್ ನೀರನ್ನು ಕುಡಿಯಬೇಕು. ಹೆಚ್ಚು ಶ್ರಮದ ಕೆಲಸ ಮಾಡುವವರಿಗೆ, ರೋಗಿಗಳಿಗೆ, ಹಾರ್ಮೋನ್ ವ್ಯತ್ಯಯ ಇರುವವರಿಗೆ, ಚಯಾಪಚಯ ಕ್ರಿಯೆಗಳು ಅಧಿಕ ಮಟ್ಟದಲ್ಲಿ ಉಳ್ಳವರಿಗೆ ನೀರಿನ ಅಗತ್ಯ ಹೆಚ್ಚಾಗಿರುತ್ತದೆ. ಕಾಯಿಲೆಯ ವೇಳೆಯಲ್ಲಿ, ಜ್ವರದ ಸಮಯದಲ್ಲಿ ದೇಹದಿಂದ ಅಧಿಕ ಪ್ರಮಾಣದ ನೀರು ಆವಿಯಾಗುತ್ತದೆ. ಬಿಸಿಲುಗಾಲದಲ್ಲಿ, ಸೂರ್ಯನ ಶಾಖ ಹೆಚ್ಚು ಇರುವ ದೇಶಗಳಲ್ಲಿ ಚರ್ಮದಿಂದ ಹೆಚ್ಚಿನ ಪ್ರಮಾಣದ ನೀರು ಇಂಗುತ್ತದೆ. ಅತಿಸಾರಭೇದಿ, ವಾಂತಿಯಂತಹ ಕಾಯಿಲೆಗಳ ವೇಳೆ ಅಲ್ಪ ಸಮಯದಲ್ಲಿ ಬಹಳಷ್ಟು ನೀರಿನ ಅಂಶ ಶರೀರದಿಂದ ಹೊರಹೋಗುತ್ತದೆ. ಮಧುಮೇಹಿಗಳಲ್ಲಿ, ಮದ್ಯಪಾನಿಗಳಲ್ಲಿ ಅತಿಮೂತ್ರದ ಮೂಲಕ ನೀರಿನ ಅಂಶ ಕಡಿಮೆಯಾಗುತ್ತದೆ. ಮುಕ್ತವಾಗಿ ಗಾಳಿಯಾಡದ, ಹೆಚ್ಚು ಜನಸಾಂದ್ರತೆಯುಳ್ಳ ಜಿಮ್‌ಗಳಲ್ಲಿ ಸಹಜವಾಗಿಯೇ ವಾತಾವರಣದ ಉಷ್ಣತೆ ಹೆಚ್ಚಿರುತ್ತದೆ. ಅಲ್ಲಿ ಕಡಿಮೆ ಸಮಯದಲ್ಲಿ ಹೆಚ್ಚು ಶ್ರಮದ ವ್ಯಾಯಾಮ ಮಾಡುವಾಗ ಶರೀರದ ನೀರಿನ ಅಂಶ ಸಹಜಕ್ಕಿಂತಲೂ ವೇಗವಾಗಿ ನಷ್ಟವಾಗುತ್ತದೆ. ಆಗ ತೀವ್ರವಾಗಿ ಅಧಿಕವಾಗುವ ರಕ್ತದಲ್ಲಿನ ಲವಣದ ಅಂಶ ಹೃದಯದ ಬಡಿತವನ್ನು ಏರುಪೇರಾಗಿಸಬಹುದು. ಜಿಮ್‌ಗಳಲ್ಲಿ ಗಂಟೆಗಟ್ಟಲೆ ಕಸರತ್ತು ಮಾಡಿದ ನಂತರ ಹಠಾತ್ತಾಗಿ ಹೃದಯದ ಸಮಸ್ಯೆ ಕಾಣುವವರಲ್ಲಿ ಈ ಕಾರಣವೂ ಒಂದು.

> **ನಿರ್ಜಲೀಕರಣಕ್ಕೆ ಇರುವ ಏಕೈಕ ಚಿಕಿತ್ಸೆ ಶರೀರದ ನೀರಿನ ಅಂಶವನ್ನು ಪುನಃ ಸಾಮಾನ್ಯ ಮಟ್ಟಕ್ಕೆ ತಲುಪಿಸುವುದು.**

ನಿರ್ಜಲೀಕರಣಕ್ಕೆ ಇರುವ ಏಕೈಕ ಚಿಕಿತ್ಸೆ ಶರೀರದ ನೀರಿನ ಅಂಶವನ್ನು ಪುನಃ ಸಾಮಾನ್ಯ ಮಟ್ಟಕ್ಕೆ ತಲುಪಿಸುವುದು. ನೀರಿನ ನಷ್ಟವನ್ನು ನೀರಿನಿಂದಲೇ ತುಂಬಬೇಕು. ಅಲ್ಪ ಪ್ರಮಾಣದ ನಿರ್ಜಲೀಕರಣದ ಚಿಕಿತ್ಸೆಯಲ್ಲಿ ಓ.ಆರ್.ಎಸ್. ದ್ರಾವಣ, ನಿಂಬೆ ಪಾನಕ, ಅಕ್ಕಿಯ ಗಂಜಿ, ಸೂಪ್ ಮೊದಲಾದವು ಸಾಕಾಗುತ್ತವೆ. ಆದರೆ, ನಿರ್ಜಲೀಕರಣ ತೀವ್ರವಾದಾಗ ರಕ್ತದಲ್ಲಿನ ಉಪ್ಪಿನ ಅಂಶಗಳನ್ನು ಅಳೆದು, ಅದಕ್ಕೆ ಸಂವಾದಿಯಾದ ಲವಣಯುಕ್ತ ನೀರಿನ ಬಳಕೆ ಬೇಕಾಗುತ್ತದೆ. ಚಿಕಿತ್ಸೆಯ ಪ್ರತಿಯೊಂದು ಹಂತದಲ್ಲೂ ದೇಹದ ನೀರು ಮತ್ತು ಲವಣಗಳ ಅನುಪಾತವನ್ನು ಸರಿಯಾದ ಮಟ್ಟದಲ್ಲಿ ನಿರ್ವಹಿಸುವುದು ಬಹಳ ಮುಖ್ಯ. ಈ ಪ್ರಕ್ರಿಯೆಯಲ್ಲಿ ಅನುಪಾತ ಏರುಪೇರಾದರೆ ಜೀವಕ್ಕೆ ಅಪಾಯವಾಗಬಹುದು. ಲವಣಯುಕ್ತ ನೀರಿನ ಸೇವನೆ ಸಾಧ್ಯವಿಲ್ಲದಿರುವಾಗ ಸೂಕ್ತವಾದ 'ಸಲೈನ್' ದ್ರಾವಣವನ್ನು ನೇರವಾಗಿ ರಕ್ತನಾಳಕ್ಕೆ ಸೇರಿಸಬೇಕಾಗುತ್ತದೆ.

ಅವಕಾಶ ದೊರೆತಾಗಲೆಲ್ಲ ಸ್ವಲ್ಪ ಸ್ವಲ್ಪ ನೀರು ಕುಡಿಯುತ್ತಿರುವುದು ಒಳಿತು. ನಮ್ಮ ವಾಸದ ವಾತಾವರಣ ಮತ್ತು ಕೆಲಸದ ಪ್ರಮಾಣಕ್ಕೆ ಅನುಗುಣವಾಗಿ ಅಗತ್ಯವಾದಷ್ಟು ನೀರನ್ನು ಸೇವಿಸುವುದು ಬಹಳ ಮುಖ್ಯ. ನಿರ್ಜಲೀಕರಣ ಅನೇಕ ಕಾಯಿಲೆಗಳಿಗೆ ರಹದಾರಿ. ದೇಹದಲ್ಲಿನ ನೀರಿನ ಅಂಶವನ್ನು ಸರಿಯಾದ ಮಟ್ಟದಲ್ಲಿ ಕಾಯ್ದುಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಅತ್ಯಗತ್ಯ. ❖



'ಜನರೇಷನ್ ಗ್ಯಾಪ್'

ಲಾವಣ್ಯಗೌರಿ ವೆಂಕಟೇಶ್

ಒಂದು ತಲೆಮಾರಿಗೂ ಮತ್ತೊಂದು ತಲೆಮಾರಿಗೂ ಅಭಿಪ್ರಾಯಗಳಲ್ಲಿ, ಅಭಿಮತಗಳಲ್ಲಿ ಇರುವ ವ್ಯತ್ಯಾಸ ಅಥವಾ ಭಿನ್ನತೆಯನ್ನು ತಲೆಮಾರಿನ ಅಂತರ (ಜನರೇಷನ್ ಗ್ಯಾಪ್) ಎನ್ನಬಹುದು. ತಾಯಿ-ಮಕ್ಕಳ ನಡುವೆ, ತಂದೆ-ಮಕ್ಕಳ ನಡುವಿನ ಆಲೋಚನಾ ಕ್ರಮದ ಅಂತರವನ್ನೂ 'ಜನರೇಷನ್ ಗ್ಯಾಪ್' ಎಂದೇ ಹೇಳಬಹುದು.

ಸರಳವಾಗಿ ಹೇಳುವುದಾದರೆ, ಇಪ್ಪತ್ತು ರೂಪಾಯಿ ಉಳಿಸಲು ಅಪ್ಪ ಇಪ್ಪತ್ತು ನಿಮಿಷ ನಡೆಯುತ್ತಿದ್ದರು. ಅದೇ ಮಗ ಇಪ್ಪತ್ತು ನಿಮಿಷ ಉಳಿಸಲು ಇಪ್ಪತ್ತು ರೂಪಾಯಿ ಖರ್ಚು ಮಾಡುತ್ತಾನೆ. ವಿಷಯ ಒಂದೇಯಾದರೂ ಗ್ರಹಿಕೆ ಭಿನ್ನವಾಗಿರುತ್ತದೆ. ಹಾಗೆ ನೋಡಿದರೆ ಪ್ರತಿಯೊಬ್ಬರ ಆಲೋಚನಾ ಕ್ರಮ ಭಿನ್ನವಾಗಿಯೇ ಇರುತ್ತದೆ. ಈ ಜನರೇಷನ್ ಗ್ಯಾಪ್‌ಗೆ ಅತಿ ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನದ ಕೊಡುಗೆಯೂ ಅಧಿಕವಾಗಿದೆ.

ನಾವು ಚಿಕ್ಕವರಿದ್ದಾಗ ಇದ್ದದ್ದು ಸ್ಥಿರ ದೂರವಾಣಿ ಅಂದರೆ ಲ್ಯಾಂಡ್ ಲೈನ್ ಫೋನ್. 'ಇನ್ನು ಮುಂದೆ ಫೋನ್‌ನಲ್ಲಿ ಮಾತನಾಡುವವರ ಮುಖ ನೋಡಬಹುದಂತೆ' ಎಂದು ನಮ್ಮ ಅಜ್ಜಯ್ಯ ಹೇಳುತ್ತಿದ್ದದ್ದನ್ನು ಕೇಳಿದಾಗ, ನಮ್ಮ ಪುಟ್ಟ ತಲೆಯಲ್ಲಿ ನೂರೆಂಟು ಕಲ್ಪನೆಯ ಅಲೆಗಳು ತೇಲುತ್ತಿದ್ದವು. ಇಂದಿನ ಮಕ್ಕಳಿಗೆ ಹೋಲಿಸಿದಲ್ಲಿ ಚಿಕ್ಕವರಿದ್ದಾಗ, ನಾವು ಕೇಳುತ್ತಿದ್ದ ಪ್ರಶ್ನೆಗಳು ಬಹಳ ಕಡಿಮೆ. ಆದರೆ ನಮ್ಮ ಮಕ್ಕಳಿಗೆ ಏನು ಹೇಳಿದರೂ ಏಕೆ? ಹೇಗೆ? ಎಲ್ಲಿ? ಯಾವಾಗ? ಈ ರೀತಿಯ ಪ್ರಶ್ನೆಗಳು ಉದ್ಭವಿಸುತ್ತವೆ. ಇದಕ್ಕೆ ಇಂದಿನ ಮಕ್ಕಳಿಗೆ ಎಕ್ಸ್‌ಪೋಷರ್ ಅಥವಾ ಹಲವು ವಿಷಯಗಳಿಗೆ ಅನಾವರಣಗೊಳ್ಳುವ ಸ್ಥಿತಿ ಹೆಚ್ಚು ಎಂಬುದೂ ಕಾರಣ. ನಾವು ಎಷ್ಟೇ ಆಧುನಿಕತೆಗೆ ಹೊಂದಿಕೊಂಡರೂ ನಮ್ಮ ಮಕ್ಕಳೆದುರು ನಾವು ಹಳೆಯ ಕಾಲದವರೇ! ನಮ್ಮ ಅಜ್ಜನಿಗೆ ಅವರಪ್ಪ ಹಳಬ, ಅಪ್ಪನಿಗೆ ಅಜ್ಜ ಹಳಬ, ನಮಗೆ ಅಪ್ಪ ಹಳಬ ಹಾಗೆಯೇ ನಮ್ಮ ಮಕ್ಕಳಿಗೆ ನಾವು ಹಳಬರು!

ಬಹಳಷ್ಟು ವಿಷಯಗಳು ನಮ್ಮ ಮಕ್ಕಳಿಗೆ ಗೊತ್ತಿಲ್ಲ. ಅಂದ ಮೇಲೆ ನಮ್ಮ ಮಕ್ಕಳಿಗಿಂತ ನಾವು ಜಾಣರು. ಅಂತೆಯೇ ನಮ್ಮ ಹಿರಿಯರು ನಮಗಿಂತ ಚತುರರು. ಆದರೆ ಪ್ರತಿಯೊಬ್ಬರ ಕಲ್ಪನೆಯಲ್ಲಿಯೂ ತಮ್ಮ ಹಿರಿಯರಿಗಿಂತ ತಾವೇ ಬುದ್ಧಿವಂತರೆಂಬ ನಂಬಿಕೆ. ಹಾಗೆಯೇ ತಾವು ತಮ್ಮ ಕಿರಿಯರಿಗಿಂತ ವಿವೇಕವಂತರೆಂಬ ಹೆಮ್ಮೆ!

ತಂತ್ರಜ್ಞಾನವು ಜನರೇಷನ್ ಗ್ಯಾಪ್‌ಗೆ ಪೂರಕವಾಗಿದ್ದರೂ, ಇದು ಅವರವರ ಬೌದ್ಧಿಕ ಮಟ್ಟಕ್ಕೆ ಸಂಬಂಧಿಸಿದ್ದು. ಇದು ಇಂದು ಹಾಗೂ ನೆನ್ನೆಯದಲ್ಲ. ಎಲ್ಲಾ ಕಾಲದಲ್ಲೂ ಮತ್ತು ಎಲ್ಲಾ ದೇಶಗಳಲ್ಲೂ ಇರುವುದೇ ಆಗಿದೆ. ಹಾಗೆಯೇ ತಲೆಮಾರಿನ ಅಂತರವು ಖಂಡಿತ ಸಮಸ್ಯೆಯಲ್ಲ. ಇದು ನೈಸರ್ಗಿಕ ಹಾಗೂ ಅನಿವಾರ್ಯ ಕೂಡ. ಪ್ರಪಂಚದ ಯಾವುದೇ ಮೂಲೆಯ ಮನುಷ್ಯನನ್ನು ತೆಗೆದುಕೊಂಡರೂ, ಆತನ ಜೀವನದ ಪ್ರತಿ ಹಂತದಲ್ಲೂ ಈ ತಲೆಮಾರಿನ ಅಂತರವನ್ನು ತನ್ನ ಹಿರಿಯರೊಡನೆ ಹಾಗೂ ಕಿರಿಯರೊಡನೆ ಅನುಭವಿಸಿಯೇ ಇರುತ್ತಾನೆ. ಸಂಪ್ರದಾಯ, ಆಚರಣೆಗಳು, ನಂಬಿಕೆ, ಜೀವನಶೈಲಿ – ಇವುಗಳ ವ್ಯತ್ಯಾಸದಿಂದಾಗಿಯೇ ತಲೆಮಾರಿನಿಂದ ತಲೆಮಾರುಗಳ ನಡುವೆ ಘರ್ಷಣೆ ಉಂಟಾಗುವುದು. ಇದು ಕೌಟುಂಬಿಕ ವಲಯದಲ್ಲಿ ಮಾತ್ರವಲ್ಲದೆ, ಕಚೇರಿಗಳಲ್ಲಿ, ಶಾಲೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿಯೂ ಇರುತ್ತದೆ. ಇದಕ್ಕೆ ದೇಶ, ಕಾಲ ಹಾಗೂ ಸಮಯಗಳ ಭೇದವಿಲ್ಲ. ಬೇಸರದ ಸಂಗತಿಯೆಂದರೆ, ತಲೆಮಾರಿನಿಂದ ತಲೆಮಾರಿಗೆ ಬದುಕಿನ ಬೆಲೆ ಕುಸಿಯುತ್ತಿದೆ ಹಾಗೂ ಸಾಮಾಜಿಕ ಅಂತರ ಹೆಚ್ಚುತ್ತಿವೆ.

ಪ್ರತಿಯೊಂದು ತಲೆಮಾರೂ ತಾವು ನಂಬಿರುವ ಜೀವನಮೌಲ್ಯ ಹಾಗೂ ತಮ್ಮದೇ ಆದ ದೃಷ್ಟಿಕೋನವನ್ನು ಹೊಂದಿವೆ. ಹಾಗೆಯೇ ತಾವೇ ಸರಿ ಎಂಬುದನ್ನೂ ಪ್ರತಿಪಾದಿಸಲು ಬಯಸುತ್ತದೆ. ಈ ವರ್ತನೆ ತಲೆಮಾರುಗಳ ಅಂತರವನ್ನು ಹೆಚ್ಚಿಸಿವೆ. ಈ ಕಾರಣಕ್ಕಾಗೇ ಕುಟುಂಬಗಳಲ್ಲಿ ಅತ್ತೆ-ಸೊಸೆ, ಅಪ್ಪ-ಮಕ್ಕಳ ನಡುವೆ ಭಿನ್ನಾಭಿಪ್ರಾಯ ತಲೆದೋರುತ್ತದೆ. ತಲೆಮಾರಿನ ಅಂತರವು ಸಮಾಜದಲ್ಲಿ ಹಲವಾರು ಬದಲಾವಣೆಗಳಿಗೆ ಕಾರಣವಾಗಿದೆ.

ನಮ್ಮ ದೇಶದಲ್ಲಿ ಅವಿಭಕ್ತ ಕುಟುಂಬ ಪದ್ಧತಿಯು ಬಹಳ ಹಿಂದಿನಿಂದಲೂ ಪ್ರಚಲಿತದಲ್ಲಿದೆ. ಇತ್ತೀಚಿನ ದಿನಗಳಲ್ಲಿ ಖಾಸಗಿತನಕ್ಕೆ ಆದ್ಯತೆ ಸಿಗುತ್ತಿದೆ. ತಮ್ಮ ಜೀವನವನ್ನು ತಮ್ಮದೇ ರೀತಿಯಲ್ಲಿ ನಡೆಸಲು ಅಪೇಕ್ಷಿಸುತ್ತಾರೆ. ಅವಿಭಕ್ತ ಕುಟುಂಬ ವ್ಯವಸ್ಥೆಯು ಇದಕ್ಕೆ ಅಡ್ಡಿ ಎಂದು ಭಾವಿಸುತ್ತಾರೆ. ಹಾಗಾಗಿಯೇ ವಿಭಕ್ತ ಕುಟುಂಬಗಳು ಹೆಚ್ಚುತ್ತಿವೆ. ಅಂತೆಯೇ ಹಿಂದೆಲ್ಲಾ ಮಹಿಳೆಯರು ಮನೆ ಕೆಲಸಕ್ಕೆ ಮಾತ್ರ ಸೀಮಿತವಾಗಿದ್ದರು. ಹೊರಗೆ ಹೋಗಿ ಕೆಲಸ ಮಾಡುವುದು ಪುರುಷರ ಕೆಲಸವಾಗಿತ್ತು. ಆದರೆ ತಲೆಮಾರುಗಳಿಂದ ಸಮಾಜದಲ್ಲಿ ಮಹಿಳೆಯರ ಬಗೆಗಿನ ಮನೋಭಾವ ಬದಲಾಗಿದೆ. ಇಂದು ಮಹಿಳೆಯರು ತಮ್ಮಿಷ್ಟದ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಪುರುಷರಂತೆ ಕೆಲಸ ಮಾಡಬಲ್ಲರು. ಇವು ಕೆಲವು ನಿದರ್ಶನಗಳಷ್ಟೇ.

ಇಂಥ ಬದಲಾವಣೆಗಳು ಸಾಕಷ್ಟಿವೆ. ತಲೆಮಾರಿನ ಅಂತರ ಸಮಸ್ಯೆಯಲ್ಲ. ಆದರೆ ವಿಭಿನ್ನ ತಲೆಮಾರಿನ ಜನರು ತಮ್ಮ ಜೀವನಕ್ರಮ ಹಾಗೂ ಆಲೋಚನೆಗಳನ್ನು ಇನ್ನೊಬ್ಬರ ಮೇಲೆ ಹೇರಲು ಪ್ರಯತ್ನಿಸಿದಾಗಷ್ಟೆ ಸಮಸ್ಯೆ ಉದ್ಭವಿಸುತ್ತದೆ.

ತಲೆಮಾರಿನ ಅಂತರದ ಬದಲಾವಣೆಗಳಿಂದ ಒಳಿತಾಗುತ್ತಿದೆಯೋ ಅಥವಾ ಕೆಡುಕಾಗುತ್ತಿದೆಯೋ ಎನ್ನುವುದಕ್ಕಿಂತ ಸಾಮಾಜಿಕ ಅಂತರ ಹೆಚ್ಚುತ್ತಿದೆ ಎಂಬುದು ವಿಷಾದನೀಯ. ಈ ಅಂತರಕ್ಕೊಂದು ಸಂಪರ್ಕ ಸೇತುವೆ ನಿರ್ಮಿಸುವುದು ಅವಶ್ಯಕ. ಯಾವುದೇ ಭಿನ್ನಾಭಿಪ್ರಾಯಗಳಿದ್ದರೂ ಅದನ್ನು ಚರ್ಚಿಸಿ ಬಗೆಹರಿಸಿಕೊಳ್ಳಬೇಕು. ವಿಷಯದ ವಿರುದ್ಧ ತಾವೇ ಸರಿ ಎಂದು ಪ್ರತಿಪಾದಿಸುವ ಬದಲು ಒಬ್ಬರು ಮತ್ತೊಬ್ಬರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ತಲೆಮಾರಿನ ಅಂತರಕ್ಕೆ ವಯಸ್ಸಿನ ವ್ಯತ್ಯಾಸ ಮುಖ್ಯವಾದ ಕಾರಣವಾದರೂ ತಮ್ಮ ಆಲೋಚನೆ ಹಾಗೂ ನಂಬಿಕೆಯನ್ನು ಹೇರುವ ಬದಲು ಅವರಿರುವಂತೆಯೇ ಅವರನ್ನು ಗೌರವಿಸಿ, ಸ್ವೀಕರಿಸಬೇಕು. ತಲೆಮಾರಿನ ಅಂತರ ತಲೆತಲಾಂತರದಿಂದಲೂ ಇದೆ ;ಹಾಗೆಯೇ ಮುಂದೆಯೂ ಇರುತ್ತದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) …………ಯಲ್ಲಿ ಎರಡು ವಿಭಿನ್ನ ಅಣುಗಳು ಅಥವಾ ಅಣುಗಳ ಗುಂಪುಗಳು(ಅಯಾನುಗಳು) ವಿನಿಮಯಗೊಳ್ಳುತ್ತವೆ

ಎ) ದ್ವಿಸ್ಥಾನ ಪಲ್ಲಟ ಕ್ರಿಯೆ ಬಿ) ಅಂತರುಷ್ಣಕ ಕ್ರಿಯೆ

ಸಿ) ಪ್ರಕ್ಷೇಪನ ಕ್ರಿಯೆ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) ದ್ವಿಸ್ಥಾನ ಪಲ್ಲಟ ಕ್ರಿಯೆ

2) ಪ್ರಕ್ಷೇಪನ ಕ್ರಿಯೆಗಳು ವಿಲೀನಗೊಳ್ಳದ ……………… ಗಳನ್ನು ಉತ್ಪತ್ತಿ ಮಾಡುತ್ತವೆ.

ಎ) ಕಿಣ್ವ ಬಿ) ಲವಣ

ಸಿ) ನರ ತಂತು ಡಿ) ಯಾವುದೂ ಅಲ್ಲ

ಉತ್ತರ:- (ಬಿ) ಲವಣ

3) ಸಂಯೋಗ ಕ್ರಿಯೆಯಲ್ಲಿ ಎರಡು ಅಥವಾ ಹೆಚ್ಚು ವಸ್ತುಗಳು ಸಂಯೋಗವಾಗಿ ಒಂದೇ ಹೊಸ……………… ಉಂಟಾಗುತ್ತದೆ.

ಎ) ಜವ ಬಿ) ಉದ್ದ ಸಿ) ತೂಕ ಡಿ) ವಸ್ತು

ಉತ್ತರ:- (ಡಿ) ವಸ್ತು

4)'ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ' ಇದು ಯಾವ ನಿಯಮ?

ಎ) ಗುರುತ್ವಾಕರ್ಷಣ ನಿಯಮ ಬಿ) ನ್ಯೂಟನನ ಮೊದಲ ನಿಯಮ

ಸಿ) ರಾಶಿ ಸಂರಕ್ಷಣೆ ನಿಯಮ ಡಿ) ಹೊಸ ವಿಕಿರಣ ನಿಯಮ

ಉತ್ತರ:- (ಸಿ) ರಾಶಿ ಸಂರಕ್ಷಣೆ ನಿಯಮ

5) ಯಾವ ರಾಸಾಯನಿಕ ಕ್ರಿಯೆಯಲ್ಲಿ ಎರಡು ಅಥವಾ ಹೆಚ್ಚು ಪ್ರತಿವರ್ತಕಗಳು ಸೇರಿ ಒಂದೇ ಉತ್ಪನ್ನ ಉಂಟಾಗುತ್ತದೆಯೋ ಅಂತಹ ಕ್ರಿಯೆಗೆ……………………. ಎನ್ನುವರು

ಎ) ಸಂಯೋಗ ಬಿ) ಕುಂಬಕ

ಸಿ) ವಿಭಜನ ಡಿ) ಸ್ಥಾನಪಲ್ಲಟ ಕ್ರಿಯೆ

ಉತ್ತರ:- (ಎ) ಸಂಯೋಗ

6) ಬೆಳ್ಳಿಯ ಕ್ಲೋರೈಡ್‌ನ ಬಿಳಿ ಬಣ್ಣವು ಸೂರ್ಯನ ಬೆಳಕಿನಲ್ಲಿ ಬೂದು ಬಣ್ಣಕ್ಕೆ ತಿರುಗಿಸುತ್ತದೆ, ಇದಕ್ಕೆ ಕಾರಣ ಬೆಳಕು, ಬೆಳ್ಳಿಯ ಕ್ಲೋರೈಡ್ ಅನ್ನು……………… ಮತ್ತು ………. ಆಗಿ ವಿಭಜಿಸುವುದು

ಎ) ಬೆಳ್ಳಿ ಮತ್ತು ಆಕ್ಸಿಡ್ ಬಿ) ಚಿನ್ನ ಮತ್ತು ತಾಮ್ರ

ಸಿ) ಬೆಳ್ಳಿ ಮತ್ತು ಕಬ್ಬಿಣದ ಆಕ್ಸೈಡ್ ಡಿ) ಬೆಳ್ಳಿ ಮತ್ತು ಕ್ಲೋರಿನ್

ಉತ್ತರ:- (ಡಿ) ಬೆಳ್ಳಿ ಮತ್ತು ಕ್ಲೋರಿನ್

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಮಿಂಚು ಹುಳು ರಾತ್ರಿವೇಳೆಯಲ್ಲಿ ಮಿಂಚಲು ಕಾರಣವೇನು?

ಉತ್ತರ: ಮಿಂಚು ಹುಳುವಿನಲ್ಲಿರುವ ಪ್ರೊಟೀನ್ ಆಕ್ಸಿಜನ್‌ನೊಂದಿಗೆ ಅಪಕರ್ಷಿಸಿ ಬೆಳಕು ಬಿಡುಗಡೆ ಮಾಡುವ ರಾಸಾಯನಿಕ ಕ್ರಿಯೆ ನಡೆಯುವುದರಿಂದ ಅದು ರಾತ್ರಿ ವೇಳೆ ಮಿಂಚುತ್ತದೆ.

2) ಈ ಕೆಳಗಿನ ಯಾವುದೆಲ್ಲವೂ ಭೌತಿಕ ಕ್ರಿಯೆ ಅಥವಾ ರಾಸಾಯನಿಕ ಕ್ರಿಯೆಗಳಾಗಿವೆ ಎಂಬುದನ್ನು ತಿಳಿಸಿ

1) ಪೆಟ್ರೋಲಿಯಂ ಅನಿಲ ದಹನ
2) ಪೆಟ್ರೋಲ್ ಬಾಷ್ಪೀಕರಿಸುವಿಕೆ
3) ಕಬ್ಬಿಣವನ್ನು ಕೆಂಪಗೆ ಕಾಯಿಸುವುದು
4) ಹಾಲು ಮೊಸರಾಗುವಿಕೆ
5) ಅಮೋನಿಯಂ ಕ್ಲೋರೈಡ್ ನ ಸಂಸ್ಕರಣೆ
6) ನೀರು ಮಂಜುಗಡ್ಡೆಯಾಗುವುದು

ಉತ್ತರ: ಭೌತಿಕ ಕ್ರಿಯೆ:- (1) ಪೆಟ್ರೋಲ್ ಬಾಷ್ಪೀಕರಿಸುವಿಕೆ
(2) ಕಬ್ಬಿಣ ಕೆಂಪಗೆ ಕಾಯಿಸುವುದು
(3) ನೀರು ಮಂಜುಗಡ್ಡೆಯಾಗುವುದು
ರಾಸಾಯನಿಕ ಕ್ರಿಯೆ:- (1) ಪೆಟ್ರೋಲಿಯಂ ಅನಿಲದ ದಹನ
(2) ಹಾಲು ಮೊಸರಾಗುವಿಕೆ
(3) ಅಮೊನಿಯಂ ಕ್ಲೋರೈಡ್‌ನ ಸಂಸ್ಕರಣೆ

3) ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆ ಮತ್ತು ದ್ವಿಸ್ಥಾನಪಲ್ಲಟ ಕ್ರಿಯೆಗಳ ನಡುವಿನ ವ್ಯತ್ಯಾಸವನ್ನು ಬರೆಯಿರಿ

ಉತ್ತರ:- ರಾಸಾಯನಿಕ ಸ್ಥಾನಪಲ್ಲಟ ಕ್ರಿಯೆ ಎಂದರೆ ಹೆಚ್ಚು ಕ್ರಿಯಾಪಟುವಾದ ಲೋಹವು ಸಂಯುಕ್ತದಿಂದ ಕಡಿಮೆ ಕ್ರಿಯಾಪಟುವಾದ ಲೋಹವನ್ನು ಸ್ಥಾನಪಲ್ಲಟಗೊಳಿಸುವ ಕ್ರಿಯೆಯಾಗಿದೆ
ಆದರೆ ಎರಡು ಪ್ರತಿವರ್ತಕಗಳ ನಡುವೆ ಅಯಾನುಗಳ ವಿನಿಯಮ ನಡೆಯುವುದೋ ಅದನ್ನು ದ್ವಿಸ್ಥಾನಪಲ್ಲಟ ಕ್ರಿಯೆ ಎನ್ನುವರು.

4) ನೈಸರ್ಗಿಕ ಅನಿಲದ ದಹನವನ್ನು ರಾಸಾಯನಿಕ ಕ್ರಿಯೆ ಎಂದು ಹೇಗೆ ತಿಳಿಯುವಿರಿ?

ಉತ್ತರ:- ನೈಸರ್ಗಿಕ ಅನಿಲವನ್ನು ದಹಿಸಿದಾಗ ಶಾಖ ಬಿಡುಗಡೆಯಾಗುವುದರೊಂದಿಗೆ ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು ಉಂಟಾಗುವುದು ಆದ್ದರಿಂದ ಇದು ರಾಸಾಯನಿಕ ಕ್ರಿಯೆ ಎಂದು ತಿಳಿಯುತ್ತದೆ.

5) ಮಂಜುಗಡ್ಡೆ ನೀರಾಗುವುದು ರಾಸಾಯನಿಕ ಕ್ರಿಯೆ ಅಲ್ಲ ಎಂದು ಹೇಗೆ ತಿಳಿಯುವಿರಿ

ಉತ್ತರ:- ಮಂಜುಗಡ್ಡೆ ನೀರಾಗುವುದರಿಂದ ಹೊಸ ಉತ್ಪನ್ನ ಬಿಡುಗಡೆಯಾಗುವುದಿಲ್ಲ, ಆದ್ದರಿಂದ ಇದು ರಾಸಾಯನಿಕ ಕ್ರಿಯೆ ಅಲ್ಲ.

6) ಸರಿದೂಗಿಸಿದ ರಾಸಾಯನಿಕ ಸಮೀಕರಣ ಎಂದರೇನು? ರಾಸಾಯನಿಕ ಸಮೀಕರಣಗಳನ್ನು ಏಕೆ ಸರಿದೂಗಿಸಬೇಕು?

ಉತ್ತರ:- ಪ್ರತಿ ಧಾತುವಿನ ಪರಮಾಣುಗಳ ಸಂಖ್ಯೆ ರಾಸಾಯನಿಕ ಕ್ರಿಯೆಯ ಮೊದಲು ಮತ್ತು ನಂತರ ಒಂದೇ ರೀತಿ ಇರಬೇಕು ಅಂದರೆ ಪ್ರತಿವರ್ತಕ ಮತ್ತು ಉತ್ಪನ್ನಗಳಲ್ಲಿ ಸಮನಾದ ಧಾತುಗಳ ಒಟ್ಟು ರಾಶಿ ಇರುವಿಕೆಯನ್ನು ಸರಿದೂಗಿಸಿದ ರಾಸಾಯನಿಕ ಸಮೀಕರಣ ಎನ್ನುವರು.
ರಾಶಿ ಸಂರಕ್ಷಣೆಯ ನಿಯಮದಂತೆ ರಾಸಾಯನಿಕ ಕ್ರಿಯೆಯಲ್ಲಿ ರಾಶಿಯನ್ನು ಸೃಷ್ಟಿಸಲು ಅಥವಾ ಲಯಗೊಳಿಸಲು ಸಾಧ್ಯವಿಲ್ಲ ಆದ್ದರಿಂದ ಸಮೀಕರಣಗಳನ್ನು ಸರಿದೂಗಿಸಬೇಕು.

7) ಕಂದು ಬಣ್ಣದ ವಸ್ತು x ಅನ್ನು ಕಾಯಿಸಿದಾಗ ಅದರ ಮೇಲ್ಮೈ ಕಪ್ಪಾಗುವುದರೊಂದಿಗೆ y ಉತ್ಪತ್ತಿಯಾಗುವುದು ಬಿಸಿಯಾಗಿರುವ x ವಸ್ತುವಿನ ಮೇಲೆ ಹೈಡ್ರೋಜನ್ ಅನಿಲ ಹಾಯಿಸಿದಾಗ ಪುನಃ ಕಂದು ಬಣ್ಣದ x ವಸ್ತುವಾಗುವುದು.

ಅ) x ಮತ್ತು yವಸ್ತುಗಳು ಯಾವುವು?
ಬ) ಇದು ಯಾವ ಬಗೆಯ ರಾಸಾಯನಿಕ ಕ್ರಿಯೆ ಆಗಿದೆ?
ಕ) ಈ ರಾಸಾಯನಿಕ ಕ್ರಿಯೆಯ ಸರಿದೂಗಿದ ಸಮೀಕರಣ ಬರೆಯಿರಿ

ಉತ್ತರ:-
ಅ) x ವಸ್ತು:- ತಾಮ್ರ
y ವಸ್ತು : ತಾಮ್ರದ ಆಕ್ಸೈಡ್
ಬ) ತಾಮ್ರವನ್ನು ಕಾಯಿಸಿದಾಗ ಕಪ್ಪು ತಾಮ್ರದ ಆಕ್ಸೈಡ್ ಉಂಟಾಗುವುದು ಉತ್ಕರ್ಷಣ ಕ್ರಿಯೆ
ತಾಮ್ರದ ಆಕ್ಸೈಡ್‌ಗೆ ಹೈಡ್ರೋಜನ್ ಹಾಯಿಸಿದಾಗ ಪುನಃ ತಾಮ್ರ ಉಂಟಾಗುವುದು ರೆಡಾಕ್ಸ್ ಕ್ರಿಯೆ ಅಥವಾ ಉತ್ಕರ್ಷಣ-ಅಪಕರ್ಷಣ ಕ್ರಿಯೆ.
ಕ) ಈ ರಾಸಾಯನಿಕ ಕ್ರಿಯೆಯ ಸರಿದೂಗಿದ ಸಮೀಕರಣ

Cu + O2—– 2CuO

CuO + H2——Cu + H2O

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 1

ELECTRIC CHARGES AND FIELDS

21) Define Coulomb.

Ans: The SI unit of charge is called coulomb denoted by (C).

Coulomb can be defined as that charge which is repelled by a force of 9×10^9 Newtons when placed in free space at a distance of one metre from an identical charge.

22) Define the dielectric constant or relative permittivity of a medium.

Ans: - The dielectric constant of a medium is the ratio of the force between two point charges, separated by a distance in air to the force between the same two point charges separated by the same distance in the given medium. It is denoted by the letter K and is given by

$$K = \varepsilon_r = \frac{\varepsilon}{\varepsilon_o}$$

Where ε_r is called the relative permittivity or the dielectric constant of the medium

23) How many electrons are there in one coulomb of charge?

Ans:- Let there be n electrons in one coulomb of charge.

We know that from quantisation of charge,

$$q = ne$$

$$\therefore n = \frac{q}{e} = \frac{1}{1.6 \times 10^{-19}}$$

$$= 6.25 \times 10^{18}$$

24) The dimensions of an atom are of the order of an Angstrom. Thus there must be large electric fields between the protons and electrons. Why, then is the electrostatic field inside a conductor zero?

Ans:- The electric fields bind the atoms to neutral entity. Fields are caused by excess charges. There can be no excess charge on the inner surface of an isolated conductor.

25) Two identical metallic spheres of exactly equal masses are taken. One is given a positive charge of Q coulomb and the other is given equal negative charge by friction. Are their masses after charging equal?

Ans:- When two bodies are rubbed together, the electrons get removed from one body and transferred to the other body. The body from which the electrons get removed becomes positively charged and the body to which the electrons get transferred becomes negatively charged. Since an electron is a material particle, the mass of the positively charged body decreases and that of the negatively charged body increases.

Hence, when one of the two identical metallic spheres is charged positive and the other negative, their masses after charging will not be equal.

26) A bird perches on a bare high power line and nothing happens to the bird. A man standing on the ground touches the same line and gets a fatal shock. Why?

Ans:- When a bird perches on a bare high power line, the circuit does not get completed between the bird and the earth and therefore nothing happens to the bird, but when a man standing on the ground touches the same line, the circuit between the man and the earth gets completed. As a result, he gets a fatal shock.

27) What is the importance of the Coulomb's law in vector form?

Ans:- The importance of the Coulomb's law in vector form, is that it directly follows that the forces exerted by the two charges on each other are equal and opposite. Further, the force, which one charge exerts on the other, acts along the line joining the two charges that is., electrostatic force is a central force.

MULTIPLE CHOICE QUESTIONS:-

1. A point positive charge is brought near an isolated conducting sphere as in the figures given below. The electric field is best given by



a) Fig (i) **b) Fig (ii)**
c) Fig (iii) **d) Fig (iv)**

Ans:- (a),

2. **The electric flux through the surface**



a) in fig. (iv) is the largest.
b) in fig. (iii) is the least.
c) in fig. (ii) is same as fig. (iii) but is smaller than fig. (iv)
d) is the same for all the figures.

Ans:- (d),

ಭೂ ಒತ್ತುವರಿ: ಬೃಹತ್ ಕಟ್ಟಡಗಳ ತೆರವಿಗೆ ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಭೂಮಿ ಒತ್ತುವರಿ ಮಾಡಿ ಬೃಹತ್ ಕಟ್ಟಡ ನಿರ್ಮಿಸಿರುವ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ತೆರವು ಮಾಡಬೇಕು. ಈ ವಿಚಾರದಲ್ಲಿ ಹೊಣೆಗಾರಿಕೆ ನಿಭಾಯಿಸದ ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿದೆ.

ಸರ್ಕಾರಿ ಭೂಮಿಯೊಂದರ ಒತ್ತುವರಿ ಪ್ರಕರಣದಲ್ಲಿ ತೆರವು ಕಾರ್ಯಾಚರಣೆ ಕೈಗೊಳ್ಳಲು ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಅವರ ನೇತೃತ್ವದ ವಿಭಾಗೀಯ ಪೀಠ ಈ ಆದೇಶ ಮಾಡಿತು.

ಅರ್ಜಿ ರೂಪದಲ್ಲಿ ನ್ಯಾಯಾಲಯದ ಮುಂದಿರುವ ಬೆಂಗಳೂರಿನ ಈ ಒಂದು ಪ್ರಕರಣವು ಒಂದು ಸಣ್ಣ ಉದಾಹರಣೆಯಷ್ಟೆ. ಇಂತಹ ನೂರಾರು ಪ್ರಕರಣಗಳಿದ್ದು, ಅವುಗಳ ಬಗ್ಗೆ ರಾಜ್ಯ ಸರ್ಕಾರ ಗಮನಹರಿಸಬೇಕು ಎಂದು ತಾಕೀತು ಮಾಡಿದೆ.

ಈ ಆದೇಶದ ಅನುಪಾಲನೆಗೆ ಸರ್ಕಾರ ಮತ್ತು ಬೆಂಗಳೂರು ಜಿಲ್ಲಾಧಿಕಾರಿ ಕ್ರಮ ಕೈಗೊಳ್ಳಬೇಕು. ಆ ಬಗ್ಗೆ ನಾಲ್ಕು ವಾರಗಳಲ್ಲಿ ಸಮಗ್ರ ವರದಿ ಸಲ್ಲಿಸಬೇಕು ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ಸರ್ಕಾರಿ ವಕೀಲರು ಹಾಜರಾಗಿ, ಹೈಕೋರ್ಟ್ ನಿರ್ದೇಶನದಂತೆ ಪ್ರಕರಣದಲ್ಲಿ 1 ಎಕರೆ 9 ಗುಂಟೆ ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡು ನಿರ್ಮಿಸಿರುವ ಕಟ್ಟಡದ ಮಾಲೀಕರಿಗೆ ನಿಯಮದಂತೆ ಜಿಲ್ಲಾಧಿಕಾರಿ ಕಚೇರಿಯಿಂದ ಜಾರಿಗೊಳಿಸಿರುವ ನೋಟಿಸ್‌ಗೆ ಉತ್ತರ ನೀಡಿಲ್ಲ. ಪ್ರಕರಣದ ಎಲ್ಲ ಮಾಹಿತಿಯನ್ನು ವರದಿಯ ರೂಪದಲ್ಲಿ ಸಲ್ಲಿಸಲಾಗಿದೆ ಎಂದು ವಿವರಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಅನಧಿಕೃತ ಕಟ್ಟಡ ನಿರ್ಮಾಣವಾಗಲು ಅಧಿಕಾರಿಗಳೇ ಕಾರಣ. ಹಾಗಾಗಿ, ಅಧಿಕಾರಿಗಳ ವಿರುದ್ಧ ಮೊದಲು ಕ್ರಮ ಕೈಗೊಳ್ಳಬೇಕು. ಒಂದೆಡೆ ಒತ್ತುವರಿ ತೆರವು ಕಾರ್ಯ ಮಾಡಬೇಕು. ಮತ್ತೊಂದೆಡೆ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸಿ, ಅವರಿಂದ ದಂಡ ವಸೂಲು ಮಾಡಲು ಸರ್ಕಾರ ಮುಂದಾಗಬೇಕು. ಕಠಿಣ ಕ್ರಮ ಜರುಗಿಸದಿದ್ದರೆ ಅಕ್ರಮ ಕಟ್ಟಡಗಳ ನಿರ್ಮಾಣ ಪ್ರಕರಣಗಳು ಮರುಕಳಿಸುತ್ತಲೇ ಇರುತ್ತವೆ' ಎಂದು ಕಟುವಾಗಿ ಪ್ರತಿಕ್ರಿಯಿಸಿತು.

ಸರ್ಕಾರಿ ಭೂಮಿ ದುರುಪಯೋಗ ಆಗುವುದನ್ನು ತಡೆಯಬೇಕು. ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸುವವರು ಅಥವಾ ಆ ಕಟ್ಟಡಗಳ ವಾಸಿಗಳು ಕ್ರಮದಿಂದ ತಪ್ಪಿಸಿಕೊಳ್ಳಬಾರದು. ಅವರಿಗೆ ನೋಟಿಸ್ ನೀಡಿ ಕಾನೂನು ರೀತಿಯಲ್ಲಿ ಜರುಗಿಸಬೇಕು ಎಂದು ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶನ ನೀಡಿತು.

ನಿಯಮ ಉಲ್ಲಂಘನೆ: ದಂಡದ ಪ್ರಮಾಣ ಹೆಚ್ಚಿಸಿ

ತ್ಯಾಜ್ಯ ವಿಲೇವಾರಿ: ಕ್ರಿಮಿನಲ್ ಪ್ರಕರಣ ದಾಖಲಿಸಲು ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಘನ ತ್ಯಾಜ್ಯ ವಿಲೇವಾರಿಯಲ್ಲಿ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ವಿಧಿಸುತ್ತಿರುವ ದಂಡದ ಪ್ರಮಾಣ ತೀರಾ ಕಡಿಮೆಯಿದೆ. ಇದರ ಪ್ರಮಾಣ ಹೆಚ್ಚಳ ಮಾಡಬೇಕು. ಜೊತೆಗೆ ಐಪಿಸಿ ಸೆಕ್ಷನ್‌ಗಳ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ, ಶಿಕ್ಷೆ ವಿಧಿಸುವಂತೆ ಮಾಡಬೇಕು ಎಂದು ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ನಗರದಲ್ಲಿ ಘನ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ 11 ವಿವಿಧ ಸಾರ್ವಜನಿಕ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿ ವಿಚಾರಣೆಯನ್ನು ಅಕ್ಟೋಬರ್ 11ಕ್ಕೆ ಮುಂದೂಡಿದೆ.

ಘನ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ 2012ರಿಂದ ಹಲವು ನಿರ್ದೇಶನಗಳನ್ನು ನೀಡುತ್ತಿದ್ದರೂ, ನಿಯಮಗಳ ಉಲ್ಲಂಘನೆ ಮುಂದುವರಿದಿದೆ. ಈ ಹಿನ್ನೆಲೆಯಲ್ಲಿ ದಂಡ ಹೆಚ್ಚಳ ಶಿಕ್ಷೆ ಜಾರಿಯಾಗುವಂತೆ ಮಾಡಬೇಕಾಗಿದೆ ಎಂದು ಪೀಠ ತಿಳಿಸಿತು.

ದಂಡವನ್ನು ವಿಧಿಸುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂಬುದಾಗಿ ಅರ್ಥವಲ್ಲ. ನಿಯಮಗಳನ್ನು ಉಲ್ಲಂಘನೆ ಮಾಡುವವರನ್ನು ನಿಯಂತ್ರಣ ಮಾಡುವುದು ಉದ್ದೇಶ. ಈ ನಿಟ್ಟಿನಲ್ಲಿ ದಂಡವನ್ನು ಹೆಚ್ಚಳ ಮಾಡಬೇಕಾಗಿದೆ ಎಂದು ಪೀಠ ಅಭಿಪ್ರಾಯಪಟ್ಟಿತು.

2019ರಿಂದ 2023ರ ವರೆಗಿನ ಅವಧಿಯಲ್ಲಿ ತ್ಯಾಜ್ಯ ಉಲ್ಲಂಘನೆ ಮಾಡಿದ ಒಟ್ಟು 3.84 ಲಕ್ಷ ಮಂದಿಗೆ ₹ 11.66 ಕೋಟಿ ದಂಡ ವಿಧಿಸಿದ ಪಾಲಿಕೆ ಅಧಿಕಾರಿಗಳ ಕ್ರಮಕ್ಕೆ ತೀವ್ರ ಬೇಸರ ವ್ಯಕ್ತ ಪಡಿಸಿದ ನ್ಯಾಯಪೀಠ, 'ನಿಯಮಗಳನ್ನು ಉಲ್ಲಂಘನೆ ಮಾಡುತ್ತಿರುವವರ ವಿರುದ್ಧ ಬಿಬಿಎಂಪಿ ವಿಧಿಸುತ್ತಿರುವ ದಂಡದ ಪ್ರಮಾಣ ತೀರಾ ಕಡಿಮೆ ಇದೆ. ಇದರಿಂದಾಗಿ ಎಚ್ಚರಿಕೆಯ ನಡುವೆಯೂ ಉಲ್ಲಂಘನೆಗಳು ಮುಂದುವರಿದಿವೆ' ಎಂದು ಅಭಿಪ್ರಾಯ ಪಟ್ಟಿತು.

ನಗರದಲ್ಲಿ ಆಸ್ಪತ್ರೆಗಳ ಸಂಖ್ಯೆ ಹೆಚ್ಚಾಗಿದೆ. ಅದರಿಂದ ಉತ್ಪಾದನೆಯಾಗುತ್ತಿರುವ ವೈದ್ಯಕೀಯ ತ್ಯಾಜ್ಯ ಆತಂಕವನ್ನುಂಟು ಮಾಡುತ್ತಿದೆ. ಮೆಡಿಕಲ್ ತ್ಯಾಜ್ಯವನ್ನು ನಿರ್ವಹಣೆ ಮಾಡುವ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಪೀಠ ಬಿಬಿಎಂಪಿಗೆ ಸೂಚನೆ ನೀಡಿದೆ.

ಪ್ರಕರಣದಲ್ಲಿ ಬಿಬಿಎಂಪಿ ಹಾಗೂ ಸರ್ಕಾರದೊಂದಿಗೆ ನಗರದ ವಿವಿಧ ಭಾಗಗಳ ನಿವಾಸಿಗಳ ಸಂಘಗಳು ಪ್ರತಿವಾದಿಯಾಗಿವೆ. ಅಪಾರ್ಟ್‌ಮೆಂಟ್‌ಗಳ ಮಾಲೀಕರು, ಸಹಕಾರಿ ಸಂಘಗಳ ಸದಸ್ಯರು ತ್ಯಾಜ್ಯ ವಿಲೇವಾರಿ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಕ್ರಮಕ್ಕೆ ಮುಂದಾಗಬೇಕಾಗಿದೆ. ಈ ಪ್ರಕ್ರಿಯೆಯಲ್ಲಿ ಅಧಿಕಾರಿಗಳು ಮಾತ್ರವಲ್ಲ, ಸಾರ್ವಜನಿಕರು ಭಾಗಿಯಾಗುವಂತೆ ನೋಡಿಕೊಳ್ಳಬೇಕು ಎಂದು ಪೀಠ ಅಭಿಪ್ರಾಯ ಪಟ್ಟಿದೆ.

ಪ್ರಮಾಣಪತ್ರ ಸಲ್ಲಿಸುವಂತೆ ಸೂಚನೆ

ಪ್ರಕರಣ ಸಂಬಂಧ ಈವರೆಗೆ ನೀಡಿರುವ ನಿರ್ದೇಶನಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಕುರಿತಂತೆ ಮುಂದಿನ ವಿಚಾರಣೆ ವೇಳೆ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಬಿಬಿಎಂಪಿ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಚನೆ ನೀಡಿ ವಿಚಾರಣೆ ಮುಂದೂಡಿತು.

'ಇಸ್ರೊ' ಗಣೇಶ...

'ಇಸ್ರೊ ರಾಕೆಟ್' ಹಿಡಿದಿರುವ ಗಣೇಶ ಮೂರ್ತಿಗೆ ಬಾಲ ಕಲಾವಿದ ಎಚ್.ಎಸ್.ಮೋಹನ್ ಕುಮಾರ್ ಅಂತಿಮ ಸ್ಪರ್ಶ ನೀಡಿದ ದೃಶ್ಯ ಬೆಂಗಳೂರಿನ ಹನುಮಂತನಗರದ ಸುಂಕೇನಹಳ್ಳಿಯ ಗಣೇಶ ಭವನದ ಬಳಿ ಕಂಡಿದ್ದು ಹೀಗೆ

ಪ್ರಜಾವಾಣಿ ಚಿತ್ರ: ರಂಜು ಪಿ.

ಡೆಲಿವರಿ ಬಾಯ್‌ಗಳಿಗೆ ವಿಮಾ ಸೌಲಭ್ಯ

ಬೆಂಗಳೂರು: 2023–24ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಗಿಗ್ ಕಾರ್ಮಿಕರಿಗೆ ವಿಮಾ ಸೌಲಭ್ಯ ಜಾರಿಗೊಳಿಸುವ ತೀರ್ಮಾನವನ್ನು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಸ್ವಿಗ್ಗಿ, ಜೊಮಾಟೋ, ಅಮೆಜಾನ್, ಫ್ಲಿಪ್‌ಕಾರ್ಟ್, ಬಿಗ್‌ಬ್ಯಾಸ್ಕೆಟ್ ಮತ್ತಿತರ ಸಂಸ್ಥೆಗಳಲ್ಲಿ ಡೆಲಿವರಿ ಬಾಯ್‌ಗಳಾಗಿ ಕೆಲಸ ಮಾಡುವವರಿಗೆ ಸಾಮಾಜಿಕ ಭದ್ರತೆ ನೀಡಲು ₹2 ಲಕ್ಷ ಜೀವ ವಿಮೆ ಮತ್ತು ₹2 ಲಕ್ಷ ಅಪಘಾತ ಪರಿಹಾರ ವಿಮಾಸೌಲಭ್ಯ ಸೇರಿ ಒಟ್ಟು ₹4 ಲಕ್ಷ ವಿಮಾ ಸೌಲಭ್ಯ ಜಾರಿ ಮಾಡಲಾಗುವುದು. ಇದನ್ನು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಮೂಲಕ ಜಾರಿ ಮಾಡಲು ಆದೇಶಿಸಲಾಗಿದೆ.

ಮೋದಿ ಜತೆ ರಚನಾತ್ಮಕ ಚರ್ಚೆ: ಸುನಕ್

ಲಂಡನ್ (ಪಿಟಿಐ): ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ಕುರಿತು ಭಾರತ ಪ್ರಧಾನಿ ನರೇಂದ್ರ ಮೋದಿ ಜತೆ ರಚನಾತ್ಮಕ ಚರ್ಚೆ ನಡೆಸಲಾಗಿದೆ ಎಂದು ಪ್ರಧಾನಿ ರಿಷಿ ಸುನಕ್ ಅವರು ಸೋಮವಾರ ಸಂಸತ್‌ಗೆ ಮಾಹಿತಿ ನೀಡಿದ್ದಾರೆ.

ಉಕ್ರೇನ್ ಸಂಘರ್ಷ, ಹವಾಮಾನ ಕ್ರಮ, ಭಾರತದೊಂದಿಗಿನ ಸಂಬಂಧ ಬಲಪಡಿಸುವುದು, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಮೇಲೆ ರಾಜತಾಂತ್ರಿಕ ಒತ್ತಡ ಹೆಚ್ಚಿಸುವುದು ಸೇರಿದಂತೆ ತಮ್ಮ ಭಾರತ ಭೇಟಿಯ 3 ಪ್ರಮುಖ ಉದ್ದೇಶಗಳ ಬಗ್ಗೆ ಸುನಕ್ ತಿಳಿಸಿದರು. 'ರಕ್ಷಣೆ, ತಂತ್ರಜ್ಞಾನ ಮತ್ತು ನಮ್ಮ ದೇಶಗಳ ನಡುವಿನ ಮುಕ್ತ ವ್ಯಾಪಾರ ಒಪ್ಪಂದ ಸಂಬಂಧ ಬಲಪಡಿಸುವ ಬಗ್ಗೆ ಮೋದಿ ಅವರೊಂದಿಗೆ ಉತ್ತಮ ಚರ್ಚೆ ನಡೆಯಿತು' ಎಂದರು.

ಸಚಿವ ಡಿ.ಸುಧಾಕರ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯೋಜನೆ ಹಾಗೂ ಸಾಂಖ್ಯಿಕ ಸಚಿವ ಡಿ.ಸುಧಾಕರ್ ಸೇರಿದಂತೆ ಮೂವರ ಮೇಲೆ ಭೂಕಬಳಿಕೆ, ಹಲ್ಲೆ, ಜಾತಿ ನಿಂದನೆ ಆರೋಪದ ಅಡಿಯಲ್ಲಿ ಯಲಹಂಕ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸುಬ್ಬಮ್ಮ ಎಂಬವರು ನೀಡಿದ ದೂರಿನ ಮೇರೆಗೆ ಸುಧಾಕರ್, ಶ್ರೀನಿವಾಸ್, ಭಾಗ್ಯಮ್ಮ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಸೆವೆನ್ ಹಿಲ್ಸ್ ಡೆವಲಪರ್ಸ್ ಅಂಡ್ ಟ್ರೇಡರ್ಸ್ ಪಾಲುದಾರರಾದ ಸುಧಾಕರ್ ಸೇರಿದಂತೆ ಮೂವರು ಮೋಸದಿಂದ ಜಮೀನು ಕಬಳಿಸಿದ್ದಾರೆ. ಯಲಹಂಕದ ಸರ್ವೆ ನಂಬರ್ 108/1ರ ಜಮೀನು ವಿವಾದಕ್ಕೆ ಸಂಬಂಧಿಸಿದ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಹೀಗಿದ್ದರೂ ಅವರ 40 ಮಂದಿ ಸಹಚರರು ಬಂದು ನನ್ನ ಪುತ್ರಿ ಆಶಾ ಮೇಲೆ ಹಲ್ಲೆ ನಡೆಸಿದ್ದಾರೆ.

ಡಿ.ಸುಧಾಕರ್

ಪ್ರಶ್ನಿಸಿದಾಗ ಜಾತಿ ನಿಂದನೆ ಮಾಡಲಾಗಿದೆ. ಜೆಸಿಬಿ ಯಂತ್ರದಿಂದ ಕಟ್ಟಡ, ಸೀಟಿನ ಶೆಡ್, ಕಾಂಪೌಂಡ್ ತೆರವು ಮಾಡಲಾಗಿದೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ನಮ್ಮ ಜಾಗಕ್ಕೆ ಪ್ರವೇಶಿಸಿದವರನ್ನು ಹೊರಹಾಕಬೇಕು. ಹಲ್ಲೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದಾರೆ.

'ಸೆವೆನ್ ಹಿಲ್ಸ್ ಡೆವಲಪರ್ಸ್ ಮತ್ತು ಟ್ರೇಡರ್ಸ್‌ಗೆ ಸೇರಿದ ಜಾಗಕ್ಕೆ 11 ಮಂದಿ ಅತಿಕ್ರಮ ಪ್ರವೇಶ ಮಾಡಿದ್ದಾರೆ ಎಂದು ಆರೋಪಿಸಿ, ಸುಧಾಕರ್ ಕಡೆಯವರೂ ಈ ಘಟನೆ ನಡೆಯುವುದಕ್ಕೂ ಮೊದಲು ದೂರು ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಜಮೀನು ವಿವಾದ: ಹಲ್ಲೆ, ಜಾತಿ ನಿಂದನೆ ಆರೋಪದ ಅಡಿಯಲ್ಲಿ ಪ್ರಕರಣ
- ಸುಬ್ಬಮ್ಮ ಎಂಬುವವರಿಂದ ದೂರು
- ಯಲಹಂಕ ಪೊಲೀಸ್ ಠಾಣೆಯಲ್ಲಿ ಮೂವರ ವಿರುದ್ಧ ಎಫ್‌ಐಆರ್

ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹೇಳಿಕೆ

'ವಿಶ್ವ ಮಾನ್ಯತೆಯಿರುವ ಭಾಷೆ ಸಂಸ್ಕೃತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಚೀನ ಭಾಷೆಯಾದ ಸಂಸ್ಕೃತವು ಇಡೀ ವಿಶ್ವಕ್ಕೆ ಭಾಷೆಯಾಗಿದೆ' ಎಂದು ಉಡುಪಿ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಹೇಳಿದರು.

ನಗರದಲ್ಲಿ ಸಮ್ಯಕ್ ಪ್ರತಿಷ್ಠಾನ ಆಯೋಜಿಸಿದ್ದ 'ಸಂಸ್ಕೃತೋತ್ಸವ'ದಲ್ಲಿ ಅವರು ಮಾತನಾಡಿದರು.

'ಸಂಸ್ಕೃತವು ಶ್ರೀಮಂತ ಭಾಷೆ. ಈ ಭಾಷೆಯಿಂದಲೇ ಸಕಲ ಭಾಷೆಗಳು ಜನ್ಮ ತಾಳಿವೆ. ಹಾಗಾಗಿ, ಸಂಸ್ಕೃತಕ್ಕೆ ವಿಶ್ವ ಮಾನ್ಯತೆಯಿರುವ ಭಾಷೆ' ಎಂದು ಅವರು ಹೇಳಿದರು.

ಆಂಧ್ರಪ್ರದೇಶದ ಶತಾವಧಾನಿ ದೋರ್ಬಲ ಪ್ರಭಾಕರ ಶರ್ಮ ಅವರಿಗೆ 'ಸಂಸ್ಕೃತ ಸೇವಾವ್ರತಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಮ್ಯಕ್ ಪ್ರತಿಷ್ಠಾನ ಆಯೋಜಿಸಿದ್ದ 'ಸಂಸ್ಕೃತೋತ್ಸವ'ದಲ್ಲಿ ಸಂಸ್ಕೃತ ಭಾಷೆಯಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕರ್ನಾಟಕ ಸಂಸ್ಕೃತ ಕುಲಪತಿ ಅಹಲ್ಯ, ಮಹೇಂದ್ರ ಮನೋಟ್ ಜೈನ್ ಇದ್ದರು.

ತತ್ವ ಅಕಾಡೆಮಿ ನೃತ್ಯ ಶಾಲೆಯ ವಿದ್ಯಾರ್ಥಿಗಳು ಸಂಸ್ಕೃತ ಹಾಡಿಗೆ ನೃತ್ಯ ಪ್ರದರ್ಶಿಸಿದರು. ಸಂಸ್ಕೃತ ಭಾಷೆಯಲ್ಲಿ ಅತಿಹೆಚ್ಚು ಅಂಕ ಪಡೆದ 400ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನಾಡಪ್ರಭು ಕೆಂಪೇಗೌಡ ಬಡಾವಣೆ: 1,300 ಎಕರೆ ಭೂಸ್ವಾಧೀನ ನನೆಗುದಿಗೆ

ಕಾಮಗಾರಿಗೆ ‘ಆಮೆ’ವೇಗ

• ಆದಿತ್ಯ ಕೆ.ಎ.

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) 2010ರಲ್ಲಿ ಕೈಗೆತ್ತಿಕೊಂಡಿದ್ದ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣ ಕಾರ್ಯವು ನಿಧಾನಗತಿಯಲ್ಲಿ ಸಾಗುತ್ತಿದ್ದು, ಬಡಾವಣೆಗೆ ಅಗತ್ಯವಿರುವ ಜಮೀನು ಸ್ವಾಧೀನಕ್ಕೆ ಈಗ ಸಿಬ್ಬಂದಿ ಕೊರತೆ ಎದುರಾಗಿದೆ.

ವಿಶೇಷ ಭೂಸ್ವಾಧೀನ ಅಧಿಕಾರಿಗಳು, ಎಂಜಿನಿಯರ್‌ಗಳು, ಭೂಮಾಪಕರ ಕೊರತೆಯಿಂದ 1,300 ಎಕರೆಯಷ್ಟು ಭೂಸ್ವಾಧೀನ ಕಾರ್ಯವು ನನೆಗುದಿಗೆ ಬಿದ್ದಿದೆ. ಬಡಾವಣೆ ಸೊರಗಿದೆ.

13 ವರ್ಷಗಳ ಹಿಂದೆ ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕೆ 12 ಗ್ರಾಮಗಳ ವ್ಯಾಪ್ತಿಯ 4,040 ಎಕರೆ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿತ್ತು. ಅದರಲ್ಲಿ 2,694 ಎಕರೆ ಸ್ವಾಧೀನ ಪಡಿಸಿಕೊಂಡು ಬಡಾವಣೆಯಲ್ಲಿ 9 ಬ್ಲಾಕ್ ನಿರ್ಮಿಸಲಾಗಿದೆ. 26 ಸಾವಿರ ನಿವೇಶನ ಹಂಚಿಕೆ ಮಾಡಲಾಗಿದೆ. 1,346 ಎಕರೆ ಸ್ವಾಧೀನ ಬಾಕಿ ಉಳಿದಿದ್ದು ಬಡಾವಣೆ ನಿರ್ಮಾಣಕ್ಕೆ ಅಡಚಣೆ ಎದುರಾಗಿದೆ.

‘ಭೂಸ್ವಾಧೀನಕ್ಕೆ ಸರ್ಕಾರ ಅಧಿಸೂಚನೆ ಹೊರಡಿಸಿ ಒಂದು ದಶಕವೇ ಕಳೆದಿದೆ. ಆದರೆ, ಎಂಜಿನಿಯರ್ ವಿಭಾಗದಲ್ಲಿ ಪ್ರಸ್ತುತ ಒಬ್ಬ ಇಇ, ಇಬ್ಬರು ಎಇಇ, ಹಾಗೂ ಒಬ್ಬ ಎಇ ಮಾತ್ರವೇ ಇದ್ದಾರೆ. ಕೆಂಪೇಗೌಡ ಬಡಾವಣೆಯ ಭೂಸ್ವಾಧೀನ ವಿಭಾಗದಲ್ಲಿ ಇಬ್ಬರು ವಿಶೇಷ ಭೂಸ್ವಾಧೀನ ಅಧಿಕಾರಿ ಹಾಗೂ ಒಬ್ಬ ಭೂಮಾಪಕರು ಇದ್ದಾರೆ. ಸಿಬ್ಬಂದಿ ಕೊರತೆಯಿಂದ ಬಡಾವಣೆ ಸಮಗ್ರ ಅಭಿವೃದ್ಧಿ ಕಾಣುತ್ತಿಲ್ಲ’ ಎಂದು ಬಡಾವಣೆ ಮುಕ್ತ ವೇದಿಕೆ ಸದಸ್ಯರು ಅಳಲು ತೋಡಿಕೊಳ್ಳುತ್ತಾರೆ.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಡೆದಿರುವ ಕಾಮಗಾರಿ

ಬೇರೆ ಯೋಜನೆಗೆ ಹಣ



‘2016, 2018ರ ನಿವೇಶನ ಹಂಚಿಕೆ, 2021ರಲ್ಲಿ ನಡೆದ ಮೂಲೆ ನಿವೇಶನಗಳ ಹರಾಜಿನಿಂದ ಬಂದ ಹಣವನ್ನು ಪ್ರತ್ಯೇಕವಾಗಿ (ಎಸ್ಕ್ರೊ ಖಾತೆ) ನಿರ್ವಹಣೆ ಮಾಡಬೇಕಿತ್ತು. ಆ ನಿಯಮ ಪಾಲನೆಯಾಗಿಲ್ಲ. ಬಂದ ಆದಾಯವನ್ನು ಇದೇ ಬಡಾವಣೆಗೆ ಖರ್ಚು ಮಾಡಬೇಕಿತ್ತು. ಆದಾಯವನ್ನು ಬೇರೆ ಯೋಜನೆಗೆ ಬಿಡಿಎ ಬಳಸಿರುವ ಕಾರಣಕ್ಕೆ ಬಡಾವಣೆ ಸೊರಗಿದೆ.

ಎನ್.ಶ್ರೀಧರ್, ಅಧ್ಯಕ್ಷ, ಮುಕ್ತ ವೇದಿಕೆ

ಪ್ರಜಾವಾಣಿ ವಿಶೇಷ

12 ಗ್ರಾಮಗಳಿಗೆ ಕನಿಷ್ಠ ವೆಂದರೂ ಏಳು ಭೂಸ್ವಾಧೀನ ಅಧಿಕಾರಿಗಳು, ಆರು ಮಂದಿ ಭೂಮಾಪಕರ ಅಗತ್ಯವಿದೆ. ಅಷ್ಟು ಪ್ರಮಾಣದ ಸಿಬ್ಬಂದಿ ಇಲ್ಲ ಎಂದು ನಿವೇಶನದಾರರು ಮಾಹಿತಿ ನೀಡಿದ್ದಾರೆ.

‘ಅದೇ ಶಿವರಾಮ ಕಾರಂತ ಬಡಾವಣೆ ನಿರ್ಮಾಣ ಕಾರ್ಯಕ್ಕೆ 2008ರಲ್ಲಿ ಸರ್ಕಾರವು ಅಧಿಸೂಚನೆ ಹೊರಡಿಸಿತ್ತು. 2013ರ ತನಕ ಯಾವುದೇ ಕಾಮಗಾರಿ ನಡೆದಿರಲಿಲ್ಲ. ಅದಾದ ಮೇಲೆ ರೈತರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಸುಪ್ರೀಂ ಕೋರ್ಟ್ ಆದೇಶದಂತೆ ಮೇಲುಸ್ತುವಾರಿ ಸಮಿತಿ ನೇತೃತ್ವದಲ್ಲಿ ಬಡಾವಣೆಯಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಈಗ ಶೇ. 90ರಷ್ಟು ಕೆಲಸಗಳು ಮುಕ್ತಾಯವಾಗಿವೆ. ಭೂಮಿ ಸ್ವಾಧೀನ ಪಡಿಸಿಕೊಂಡ 17 ಗ್ರಾಮಗಳಿಗೂ ಕೆಎಎಸ್ ಅಧಿಕಾರಿಗಳ ನೇಮಕ ಮಾಡಲಾಗಿತ್ತು. ಎಂಜಿನಿಯರಿಂಗ್ ವಿಭಾಗದಲ್ಲೂ ಸಾಕಷ್ಟು ಸಿಬ್ಬಂದಿ ಇದ್ದರು. ಹೀಗಾಗಿ, ಕೆಲಸಗಳು ವೇಗವಾಗಿ ನಡೆದಿದ್ದವು. ಕೆಂಪೇಗೌಡ ಬಡಾವಣೆಗೆ ಸಂಬಂಧಿಸಿದಂತೆ ಯಾವುದೇ ವ್ಯವಸ್ಥೆ ಇಲ್ಲವಾಗಿದೆ’ ಎಂದು ಮುಕ್ತ ವೇದಿಕೆ ವಕ್ತಾರ ಸೂರ್ಯಕಿರಣ್ ದೂರಿದ್ದಾರೆ.

‘ಮತ್ತೆ ಗಡುವು ವಿಸ್ತರಣೆ ಬೇಡ’

ಸ್ವಾಧೀನ ಪಡಿಸಿಕೊಂಡಿರುವ ಸ್ಥಳದಲ್ಲಿ ಮೂಲಸೌಕರ್ಯ ಕಲ್ಪಿಸುವುದನ್ನು ಬಿಡಿಎ ಎಂಜಿನಿಯರಿಂಗ್ ವಿಭಾಗವು ವಿಸ್ತರಿಸುತ್ತಲೇ ಇದೆ. 2024ರ ಡಿಸೆಂಬರ್ ವೇಳೆಗೆ ಕಾಮಗಾರಿ ಮುಗಿಸುವ ಭರವಸೆ ನೀಡಲಾಗಿದೆ. ನ್ಯಾಯಾಲಯದಲ್ಲಿ ಪ್ರಕರಣವಿದೆ ಎಂಬ ನೆಪ ಹೇಳಿಕೊಂಡು ಗಡುವು ವಿಸ್ತರಣೆ ಮಾಡುವುದು ಸರಿಯಲ್ಲ. ಕೋರ್ಟ್ ಪ್ರಕರಣ ಹೊರತು ಪಡಿಸಿ ಉಳಿದ ಸ್ಥಳದಲ್ಲಿ ಪೂರ್ಣ ಕಾಮಗಾರಿ ನಡೆಸಲಿ.

ಸೂರ್ಯಕಿರಣ್, ವಕ್ತಾರ, ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ

ಸಮಸ್ಯೆಗಳ ಆಗರ ಬಡಾವಣೆ: ಬಡಾವಣೆಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ನ್ಯಾಯಾಲಯದ ಪ್ರಕರಣ ಹೊರತು ಪಡಿಸಿ ಉಳಿಕೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅಭಿವೃದ್ಧಿ ಪಡಿಸಿದ್ದರೆ ಸುಸಜ್ಜಿತ ಲೇಔಟ್ ತಲೆಯೆತ್ತುತ್ತಿತ್ತು. ಒಳಚರಂಡಿ ವ್ಯವಸ್ಥೆ, ರಸ್ತೆ, ವಿದ್ಯುತ್ ಸಂಪರ್ಕ ಎಲ್ಲವೂ ಅರೆಬರೆ ಕಾಮಗಾರಿ ನಡೆದಿದೆ. 9 ಬ್ಲಾಕ್‌ಗಳಲ್ಲಿ ಸಿವಿಲ್ ಕಾಮಗಾರಿ ಗುತ್ತಿಗೆಯನ್ನು 2018ರಲ್ಲಿ ಎರಡು ಕಂಪನಿಗಳಿಗೆ ನೀಡಲಾಗಿತ್ತು. ಇನ್ನೂ ಮೂಲಸೌಕರ್ಯ ಕಲ್ಪಿಸಿಲ್ಲ ಎಂದು ವೇದಿಕೆ ಸದಸ್ಯರು ಹೇಳುತ್ತಾರೆ.

‘ಸೌಂದರ್ಯ ಸಹಕಾರಿ ಸಂಘ ಕೆಲವೇ ತಿಂಗಳಲ್ಲಿ ಸ್ವಂತ ಕಟ್ಟಡಕ್ಕೆ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಸೌಂದರ್ಯ ಸೌಹಾರ್ದ ಕ್ರೆಡಿಟ್ ಸಹಕಾರ ಸಂಘ 2,400 ಚದರ ಅಡಿ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಕೆಲವೇ ತಿಂಗಳಲ್ಲಿ ಪ್ರಧಾನ ಕಚೇರಿಯು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲಿದೆ’ ಎಂದು ಸಂಘದ ಅಧ್ಯಕ್ಷ ಸೌಂದರ್ಯ ಪಿ.ಮಂಜಪ್ಪ ತಿಳಿಸಿದರು.

ಹಾವನೂರು ಬಡಾವಣೆಯ ಸೌಂದರ್ಯ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ 8ನೇ ವಾರ್ಷಿಕ ಮಹಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

8 ವರ್ಷಗಳ ಹಿಂದೆ ₹ 20 ಲಕ್ಷ ಷೇರು ಬಂಡವಾಳದಲ್ಲಿ ಪ್ರಾರಂಭವಾದ ಸಹಕಾರಿಯು ಪ್ರಸ್ತುತ ₹ 200 ಕೋಟಿಗೂ ಹೆಚ್ಚು ವ್ಯವಹಾರ ನಡೆಸಿ ₹ 2.98 ಕೋಟಿ ನಿವ್ವಳ ಲಾಭಗಳಿಸಿದೆ. ಕೋರ್ ಬ್ಯಾಂಕಿಂಗ್ ಸೌಲಭ್ಯ ಹಾಗೂ ಸಂಪೂರ್ಣ ಗಣಕೀಕೃತ ಸಹಕಾರಿ ಸಂಸ್ಥೆ ಇದಾಗಿದೆ. ಸದಸ್ಯರ ಆರೋಗ್ಯದ ಕಾಳಜಿಯಿಂದ ಈಗಾಗಲೆ ಡಯಾಗ್ನೋಸ್ಟಿಕ್ ಸೆಂಟರ್ ಕಾರ್ಯ ನಿರ್ವಹಿಸುತ್ತಿದ್ದು,ಮುಂದಿನ ದಿನಗಳಲ್ಲಿ ಆಸ್ಪತ್ರೆ ಪ್ರಾರಂಭಿಸಲು ಯೋಜಿಸಲಾಗಿದೆ ಎಂದರು.

ವ್ಯವಸ್ಥಾಪಕ ನಿರ್ದೇಶಕ ಕೆ.ಕೃಷ್ಣಶೆಟ್ಟಿ ಮಾತನಾಡಿ, ‘ನೂರಾರು ವರ್ಷಗಳ ಇತಿಹಾಸ ಹೊಂದಿರುವ ಸಹಕಾರಿ ಕ್ಷೇತ್ರ ಭಾರತದ ಆರ್ಥಿಕ ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದೆ, ಬೆರಳೆಣಿಕೆಯಷ್ಟು ಸಮಸ್ಯಾತ್ಮಕವಾಗಿ ಕಾರ್ಯನಿರ್ವಹಿಸಿವೆ. ಅದನ್ನು ಎಲ್ಲಕ್ಕೂ ಅನ್ವಯಿಸಬಾರದು. ಸಹಕಾರಿ ಕ್ಷೇತ್ರದಿಂದ ಕೋಟ್ಯಂತರ ಜನರು ಹಲವು ರೀತಿಯ ಪ್ರಯೋಜನಗಳನ್ನು ಪಡೆದಿದ್ದಾರೆ’ ಎಂದರು.

ಸೌಂದರ್ಯ ಸೌಹಾರ್ದ ಕ್ರೆಡಿಟ್ ಸಹಕಾರ ಸೊಸೈಟಿ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಅಧ್ಯಕ್ಷ ಸೌಂದರ್ಯ ಪಿ.ಮಂಜಪ್ಪ ಉದ್ಘಾಟಿಸಿದರು. ನಿರ್ದೇಶಕರಾದ ಎಂ.ಕೀರ್ತನ್‌ಕುಮಾರ್, ಪಿ.ಪಿ.ಚಿನ್ನಮ್ಮ, ಪ್ರತೀಕ್ಷಾ, ಉಪಾಧ್ಯಕ್ಷೆ ಎಂ.ಸುನಿತಾ, ವ್ಯವಸ್ಥಾಪಕ ನಿರ್ದೇಶಕ ಕೆ. ಕೃಷ್ಣಶೆಟ್ಟಿ, ನಿರ್ದೇಶಕ ವರುಣ್, ಕೋ ಆಪರೇಟೀವ್ ಸೊಸೈಟಿಗಳ ಸಂಘಟನೆಯ ರಾಜ್ಯ ಅಧ್ಯಕ್ಷ ವೈ.ಕುಮಾರ್, ವಿ.ಸುಧೀರ್, ರಜನಿ. ಪಿ.ಸೂರಿ, ಮಹಾಂತೇಶ್ ನೆಗಳೂರ, ಸುರೇಶ್.ಸಿ.ಹೆಗಡಿ ಇದ್ದಾರೆ

ಕೋ ಆಪರೇಟೀವ್ ಸೊಸೈಟಿಗಳ ಸಂಘಟನೆಯ ರಾಜ್ಯ ಅಧ್ಯಕ್ಷ ವೈ.ಕುಮಾರ್ ಮಾತನಾಡಿ, ‘ಸೌಂದರ್ಯ ಸಹಕಾರಿಯು ರಾಜ್ಯದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಾವಿರಕ್ಕೂ ಹೆಚ್ಚು ಸಹಕಾರಿಗಳಲ್ಲಿ ಒಂದಾಗಿದೆ’ ಎಂದರು.

ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಮಾರಕ ಕಾಯಿಲೆಗಳಿಂದ ಬಳಲುತ್ತಿರುವ ಸದಸ್ಯರಿಗೆ ಸಹಾಯಧನ ನೀಡಲಾಯಿತು.

57 ವರ್ಷಗಳ ಹಿಂದೆ ಎಮ್ಮೆ ಕದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಹುಲಸೂರ (ಬೀದರ್) : 57 ವರ್ಷಗಳಿಂದ ತಲೆ ಮರೆಸಿಕೊಂಡಿದ್ದ ಎಮ್ಮೆ ಕಳವು ಪ್ರಕರಣದ ಆರೋಪಿ ಗಣಪತಿ ವಿಠ್ಠಲ ವಾಗ್ಮಾರೆ(77) ಯನ್ನು ಮೆಹಕರ್ ಠಾಣೆ ಪೊಲೀಸರು ಸೋಮವಾರ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಮುರಳೀಧರ ಕುಲಕರ್ಣಿ ಎಂಬುವರು ತಮ್ಮ ಎರಡು ಎಮ್ಮೆ ಹಾಗೂ ಒಂದು ಎಮ್ಮೆ ಕರು ಕಳುವಾಗಿರುವ ಬಗ್ಗೆ 1965ರಲ್ಲಿ ಪ್ರಕರಣ ದಾಖಸಿದ್ದರು. ಆಗ ಒಬ್ಬ ಆರೋಪಿ ಕಿಶನ್ ಚಂದ್ರನನ್ನು ಪೊಲೀಸರು ಬಂಧಿಸಿದ್ದರು. ಕಿಶನ್ ಚಂದ್ರ 2020ರಲ್ಲಿ ಮೃತಪಟ್ಟಿದ್ದರು. ಈ ಸಂಬಂಧ ನ್ಯಾಯಾಲಯಕ್ಕೆ ಮೃತಪಟ್ಟಿರುವ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಲಾಗಿತ್ತು. ಆದರೆ, ಇನ್ನೊಬ್ಬ ಆರೋಪಿ ಗಣಪತಿ ತಲೆಮರೆಸಿಕೊಂಡಿದ್ದ.

ಮೇಹಕರ ಠಾಣೆ ಪಿಎಸ್‌ಐಗಳಾದ ಶಿವಕುಮಾರ ಮತ್ತು ಚಂದ್ರಶೇಖರ, ಎಎಸ್‌ಐ ಅಂಬಾದಾಸ್ ಅವರ ಸತತ ಪ್ರಯತ್ನದಿಂದ ಆರೋಪಿಯನ್ನು ಮಹಾರಾಷ್ಟ್ರದ ಲಾತೂರ ಜಿಲ್ಲೆಯ ಲೋಹಾ ತಾಲ್ಲೂಕಿನ ಟಾಕಳಗಾಂವ ಗ್ರಾಮದಲ್ಲಿದ್ದಾಗ ಪತ್ತೆ ಮಾಡಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಆರೋಪಿ ಪತ್ತೆಗೆ ಶ್ರಮಿಸಿದ ಅಧಿಕಾರಿ, ಸಿಬ್ಬಂದಿಗೆ ಪ್ರಶಂಸನಾ ಪತ್ರ ಹಾಗೂ ಬಹುಮಾನ ನೀಡಲಾಗಿದೆ.

ಗ್ರಾಹಕರ ಸೋಗಿನಲ್ಲಿ ಸರ ಕಳವು

ರೋಹಿತ್

ಬೆಂಗಳೂರು: ಗ್ರಾಹಕರ ಸೋಗಿನಲ್ಲಿ ಚಿನ್ನದ ಅಂಗಡಿಗಳಿಗೆ ತೆರಳಿ ಚಿನ್ನದ ಸರಗಳನ್ನು ಕೊರಳಿಗೆ ಹಾಕಿಕೊಂಡು ಪರಾರಿ ಆಗುತ್ತಿದ್ದ ಆರೋಪಿಯನ್ನು ಗೋವಿಂದರಾಜನಗರ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಯಶವಂತಪುರ ಎನ್‌ಎಚ್ ಕಾಲೊನಿ ಅಯ್ಯಪ್ಪ ದೇವಸ್ಥಾನ ಬಳಿಯ ನಿವಾಸಿ ಜೆ.ರೋಹಿತ್ ಬಂಧಿತ ಆರೋಪಿ. ಆರೋಪಿಯಿಂದ ₹ 2.50 ಲಕ್ಷ ಬೆಲೆ ಬಾಳುವ 45 ಗ್ರಾಂ ತೂಕದ ಚಿನ್ನದ ಸರ, ಕೃತ್ಯಕ್ಕೆ ಬಳಸುತ್ತಿದ್ದ ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಚಿನ್ನಾಭರಣ ಕಳವು: ಆರೋಪಿ ಸೆರೆ



ಗೋಪಿನಾಥ್

ಬೆಂಗಳೂರು: ಮನೆ ಬಾಗಿಲಿಗೆ ಹಾಕಿದ್ದ ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ಕಳವು ಮಾಡುತ್ತಿದ್ದ ಆರೋಪಿಯನ್ನು ಗೋವಿಂದರಾಜನಗರ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ರಾಮನಗರ ಜಿಲ್ಲೆ ಕನಕಪುರದ ಕುರುಪೇಟೆಯ ಗೋಪಿನಾಥ್ ಅಲಿಯಾಸ್ ಗೋಪಿ ಬಂಧಿತ ಆರೋಪಿ. ಈತ ನಗರದ ಕೋಣನಕುಂಟೆಯ ಬೀರೇಶ್ವರನಗರದಲ್ಲಿ ನೆಲೆಸಿದ್ದ.

‘ಬಂಧಿತನಿಂದ ₹ 6.50 ಲಕ್ಷದ 107 ಚಿನ್ನಾಭರಣ, ₹ 1.14 ಲಕ್ಷ ನಗದು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಆರೋಪಿಯು ಚುಂಚನಕಟ್ಟೆ ಮುಖ್ಯರಸ್ತೆ, ಆಂಜನೇಯ ದೇವಸ್ಥಾನ ಸುತ್ತಮುತ್ತ, ಯಲಚೇನಹಳ್ಳಿ, ಕೋಣನಕುಂಟೆ ಕ್ರಾಸ್‌ನಲ್ಲಿ ಮನೆಗಳನ್ನು ಗುರುತಿಸುತ್ತಿದ್ದ. ಬೀಗ ಹಾಕಿದ ಮನೆಗಳನ್ನೇ ಗುರಿಯಾಗಿಸಿ ಬೀಗ ಒಡೆದು ಚಿನ್ನಾಭರಣ ಕಳವು ಮಾಡುತ್ತಿದ್ದ’ ಎಂದಿದ್ದಾರೆ.

ಕಾವೇರಿ: ಸಭೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ನದಿ ನೀರು ನಿಯಂತ್ರಣ ಸಮಿತಿಯ ಸಭೆ (ಸಿಡಬ್ಲ್ಯುಆರ್‌ಸಿ) ಮಂಗಳವಾರ ನಡೆಯಲಿದೆ.

ಕಾವೇರಿ ನದಿಯಿಂದ ತಮಿಳು ನಾಡಿಗೆ ಪ್ರತಿನಿತ್ಯ ಅಂದಾಜು ಅರ್ಧ ಟಿಎಂಸಿ ಅಡಿ (5 ಸಾವಿರ ಕ್ಯೂಸೆಕ್) ನೀರು ಬಿಡುಗಡೆ ಮಾಡುವಂತೆ ಸಮಿತಿಯು ಆಗಸ್ಟ್ 29ರಂದು ಶಿಫಾರಸು ಮಾಡಿತ್ತು. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಆಗಸ್ಟ್ 29ರಂದು ನಡೆಸಿದ ಸಭೆಯಲ್ಲಿ ಸೆಪ್ಟೆಂಬರ್ 12ರವರೆಗೆ ಪ್ರತಿದಿನ 5 ಸಾವಿರ ಕ್ಯೂಸೆಕ್ ನೀರು ಬಿಡುಗಡೆ ಮಾಡುವಂತೆ ನಿರ್ದೇಶನ ನೀಡಿತ್ತು. ಪ್ರಾಧಿಕಾರವು ನಿಗದಿಪಡಿಸಿದಷ್ಟು ನೀರನ್ನು ಕರ್ನಾಟಕ, ತಮಿಳುನಾಡಿಗೆ ಬಿಡುಗಡೆ ಮಾಡಿದೆ.

'ಕಾವೇರಿ ಹಾಗೂ ಕೃಷ್ಣಾ ಕಣಿವೆಯಲ್ಲಿ ಭೀಕರ ಬರದ ಸನ್ನಿವೇಶ ಕಾಣಿಸಿಕೊಂಡಿದ್ದು, ಸೆಪ್ಟೆಂಬರ್ 12ರ ನಂತರ ತಮಿಳುನಾಡಿಗೆ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ’ ಎಂದು ಕರ್ನಾಟಕ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಈಗಾಗಲೇ ಪ್ರಮಾಣಪತ್ರ ಸಲ್ಲಿಸಿದೆ.

ಸಮಿತಿಯ ಅಧ್ಯಕ್ಷ ವಿನೀತ್ ಗುಪ್ತ ಅಧ್ಯಕ್ಷತೆಯಲ್ಲಿ ವರ್ಚುವಲ್ ಮೂಲಕ ಮಧ್ಯಾಹ್ನ 2.30ಕ್ಕೆ ಸಭೆ ನಡೆಯಲಿದ್ದು, ಕಾವೇರಿ ಕಣಿವೆಯ ಜಲಾಶಯಗಳ ಸ್ಥಿತಿ, ನೀರು ಬಿಡುಗಡೆ ಪ್ರಮಾಣ ಮತ್ತಿತರ ವಿಷಯಗಳ ಕುರಿತು ಚರ್ಚೆ ನಡೆಯಲಿದೆ. ಜಲಾಶಯಗಳ ವಾಸ್ತವ ಸ್ಥಿತಿ ಕುರಿತು ಸಮಿತಿಯು ಪ್ರಾಧಿಕಾರಕ್ಕೆ ವರದಿ ನೀಡಲಿದೆ. ಇನ್ನಷ್ಟು ನೀರು ಬಿಡುಗಡೆಗೆ ಶಿಫಾರಸು ಮಾಡುವ ಸಾಧ್ಯತೆಯೂ ಇದೆ ಎಂದು ಮೂಲಗಳು ಹೇಳಿವೆ.

‘ಸಾಮಾನ್ಯವಾಗಿ ಸಮಿತಿಯ ಸಭೆ ನಡೆದ 2–3 ದಿನಗಳಲ್ಲಿ ಪ್ರಾಧಿಕಾರದ ಸಭೆ ನಡೆಯಲಿದೆ. ಆದರೆ, ಈ ಸಲ ಪ್ರಾಧಿಕಾರದ ಸಭೆಯ ಕುರಿತು ನಮಗೆ ಯಾವುದೇ ಮಾಹಿತಿ ಬಂದಿಲ್ಲ’ ಎಂದು ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸ್ಟೋನಿಬ್ರೂಕ್ ವಿ.ವಿಯ ಭಾರತೀಯ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಶ್ರೀಧರ್ ಮಾಹಿತಿ

‘ಕುಮಾರವ್ಯಾಸ ಭಾರತ’ ಶೀಘ್ರ ಇಂಗ್ಲಿಷ್‌ನಲ್ಲಿ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ‘ಕುಮಾರವ್ಯಾಸನ ಕರ್ನಾಟ ಭಾರತ ಕಥಾಮಂಜರಿ ಕೃತಿಯ ಮೊದಲ ಸಂಪುಟ ಶೀಘ್ರ ಇಂಗ್ಲಿಷ್‌ನಲ್ಲಿ ಲಭ್ಯವಾಗಲಿದೆ’ ಎಂದು ಅನುವಾದಕರಲ್ಲೊಬ್ಬರಾದ, ನ್ಯೂಯಾರ್ಕ್‌ನ ಸ್ಟೋನಿಬ್ರೂಕ್ ವಿಶ್ವವಿದ್ಯಾಲಯದ ಭಾರತೀಯ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎಸ್.ಎನ್.ಶ್ರೀಧರ್ ತಿಳಿಸಿದರು.

ಬೆಂಗಳೂರಿನ ಕ್ರಿಸ್ತು ಜಯಂತಿ ಸ್ವಾಯತ್ತ ಕಾಲೇಜು ಮತ್ತು ಚಾಮರಾಜನಗರ ವಿಶ್ವ ವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಲಾಗಿರುವ ‘ವಿಶ್ವಕನ್ನಡದ ವಿವೇಕಯಾನ’ ಅಧ್ಯಾಪಕ ಅಭಿವೃದ್ಧಿ ಕಾರ್ಯಕ್ರಮದ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾಹಿತಿ ನೀಡಿದರು.

ಪ್ರೊ.ಎಸ್.ಎನ್. ಶ್ರೀಧರ್

‘ಏಳು ವರ್ಷಗಳಿಂದ ಪ್ರೊ. ಸಿ.ಎನ್.ರಾಮಚಂದ್ರನ್, ಎಚ್.ಎಸ್.ರಾಘವೇಂದ್ರರಾವ್, ಎಚ್.ಎಸ್.ಶಿವಪ್ರಕಾಶ್, ನಾರಾಯಣ ಹೆಗಡೆ ಅವರೊಂದಿಗೆ ಸೇರಿ ಅನುವಾದಿಸುವ ಕಾರ್ಯ ನಡೆದಿದ್ದು, ಕೃತಿಯನ್ನು ಹಾರ್ವರ್ಡ್ ಯೂನಿವರ್ಸಿಟಿ ಪ್ರೆಸ್ ಪ್ರಕಟಿಸಲಿದೆ’ ಎಂದರು.

‘ಕೃತಿಯಲ್ಲಿ 8 ಸಾವಿರಕ್ಕೂ ಹೆಚ್ಚುಪದ್ಯಗಳಿದ್ದು, ಎಲ್ಲವನ್ನೂ ಅನುವಾದಿಸುವುದು ಕಷ್ಟ. ಮೊದಲಿಗೆ 2,500 ಪದ್ಯಗಳನ್ನು ಅನುವಾದಿಸಲಾಗುತ್ತಿದೆ. ಪ್ರತಿಯೊಬ್ಬ ಅನುವಾದಕರೂ ಒಂದೊಂದು ಪರ್ವವನ್ನು ಆಯ್ಕೆ ಮಾಡಿಕೊಂಡಿದ್ದು, ಲೇಖಕ ಕೃಷ್ಣಮೂರ್ತಿ ಹನೂರು ಸೇರಿದಂತೆ ಕನ್ನಡದ ಹಲವು ವಿದ್ವಾಂಸರು ಸಹಕಾರ ನೀಡುತ್ತಿದ್ದಾರೆ’ ಎಂದರು.

‘ಹಾರ್ವರ್ಡ್ ಯೂನಿವರ್ಸಿಟಿ ಪ್ರೆಸ್‌ನಲ್ಲಿ ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ ಅವರ ಮಗ ರೋಹನ್ ನಾರಾಯಣ ಮೂರ್ತಿ ಅವರು ‘ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯಾ’ ಎಂಬ ದತ್ತಿ ನಿಧಿ ಸ್ಥಾಪಿಸಿದ್ದು, ಅದರಡಿಯಲ್ಲಿ ಭಾರತದ ಅತ್ಯುನ್ನತ ಕೃತಿಗಳನ್ನು ಜಗತ್ತಿಗೆ ಪರಿಚಯಿಸುವ ಕೆಲಸ ನಡೆದಿದೆ. ದತ್ತಿಯ ಸಂಪಾದಕರಾದ ಶೆಲ್ಡನ್ ಪೊಲಾಕ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದಾಗ, ಅವರು ಯೋಜನೆಗೆ ಒಪ್ಪಿಕೊಂಡಿದ್ದರು’ ಎಂದರು.

ನೆದರ್ಲೆಂಡ್ಸ್ ಪ್ರಧಾನಿ ಮಾರ್ಕ್ ರುಟ್ಟೆ ನೇತೃತ್ವದ ತಂಡದ ಜೊತೆ ಚರ್ಚೆ

ಡಚ್ ಕಂಪನಿಗಳಿಂದ ಹೂಡಿಕೆ: ಶೀಘ್ರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡಲು ಡಚ್ ಕಂಪನಿಗಳು ಮುಂದೆ ಬಂದಿವೆ.

ರಾಜ್ಯದಲ್ಲಿ ಡಚ್ ಕಂಪನಿಗಳ ಹೂಡಿಕೆಗೆ ಉತ್ತೇಜನ ಹಾಗೂ ಈಗಾಗಲೇ ಹೂಡಿಕೆ ಮಾಡಿರುವ ಕಂಪನಿಗಳು ಎದುರಿಸುತ್ತಿರುವ ತಾಂತ್ರಿಕ ಸಮಸ್ಯೆಗಳ ಕುರಿತು ಚರ್ಚಿಸಲು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ದುಂಡು ಮೇಜಿನ ಸಭೆಯನ್ನು ಸೋಮವಾರ ಏರ್ಪಡಿಸಲಾಗಿತ್ತು.

ರಾಜ್ಯ ಪ್ರವಾಸದಲ್ಲಿರುವ ನೆದರ್ಲೆಂಡ್ ಪ್ರಧಾನಿ ಮಾರ್ಕ್ ರುಟ್ಟೆ ನೇತೃತ್ವದ ಅಧಿಕಾರಿಗಳು ಮತ್ತು ಡಚ್ ಉದ್ಯಮಿಗಳ ನೇತೃತ್ವದ ನಿಯೋಗವು ಈ ಸಭೆಯಲ್ಲಿ ಪಾಲ್ಗೊಂಡು, ತಮ್ಮ ಬೇಡಿಕೆಗಳನ್ನು ಸಭೆಯ ಮುಂದಿಟ್ಟಿತು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹಾಗೂ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಸಭೆಯಲ್ಲಿ ಪಾಲ್ಗೊಂಡಿದ್ದರು. ಹೂಡಿಕೆಗೆ ಪೂರಕವಾದ ಪಾರದರ್ಶಕ ವ್ಯವಸ್ಥೆ ಹಾಗೂ ಅಬಕಾರಿ ನಿಯಮಗಳಲ್ಲಿ ಕೆಲವು ಬದಲಾವಣೆ ತರುವ ಕುರಿತು ಪ್ರಸ್ತಾವನೆಗಳನ್ನು ಮುಂದಿಟ್ಟಿತು.

ಈ ಕುರಿತು ಸರ್ಕಾರದಲ್ಲೇ ಮತ್ತೊಂದು ಸಭೆ ನಡೆಸಿ ಚರ್ಚಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಿಯೋಗಕ್ಕೆ ಭರವಸೆ ನೀಡಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಹೀನೆಕೆನ್ ಬ್ರಿವರೀಸ್‌ನ ಸಿಇಒ ರಾಡೋವನ್ ಸಿಕೋರ್ಸ್ಕಿ, 'ನಮ್ಮ ಕಂಪನಿಯು ಕಿಂಗ್‌ಫಿಷರ್ ಮತ್ತು ಹೀನೆಕೆನ್ ಬ್ರ್ಯಾಂಡ್‌ಗಳ ಅಡಿಯಲ್ಲಿ ಗುಣಮಟ್ಟದ ಬಿಯರ್ ತಯಾರಿಸಿ ತೃಪ್ತಿ ಹೂಡಿಕೆಯಲ್ಲಿ ಮೊದಲ ಸ್ಥಾನದಲ್ಲಿದೆ' ಎಂದರು.

ಎಂ.ಬಿ. ಪಾಟೀಲ ಮಾತನಾಡಿ, 'ರಾಜ್ಯದಲ್ಲಿ ಪ್ರವಾಸೋದ್ಯಮ ಬೆಳವಣಿಗೆ ಮತ್ತು ಜೈವಿಕ ಇಂಧನಗಳ ಉತ್ಪಾದನೆಗೆ ಹೇರಳ ಅವಕಾಶಗಳಿವೆ. ಡಚ್ ಕಂಪನಿಗಳು ಇದರತ್ತ ಗಮನ ಹರಿಸಬೇಕು' ಎಂದರು.

'ಹಂಪಿ, ಬಾದಾಮಿ, ವಿಜಯಪುರದಂಥ ಐತಿಹಾಸಿಕ ಸ್ಥಳಗಳು ನಮ್ಮಲ್ಲಿವೆ. ಜೊತೆಗೆ ಅಪಾರ ಸಂಖ್ಯೆಯ ಸಕ್ಕರೆ ಕಾರ್ಖಾನೆಗಳಿವೆ. ಇಲ್ಲಿರುವ ಹೂಡಿಕೆ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಆಹಾರ ಸಂಸ್ಕರಣೆ, ಬಯೋಟೆಕ್, ಫಾರ್ಮಾ, ನವೀಕರಿಸಬಹುದಾದ ಇಂಧನ, ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಹೂಡಿಕೆಗಳನ್ನು ವೃದ್ಧಿಸಬೇಕು' ಎಂದರು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ 1 ಸಾವಿರ ಎಕರೆ ಪ್ರದೇಶದಲ್ಲಿ ಜ್ಞಾನ, ಆರೋಗ್ಯ, ನಾವೀನ್ಯತೆ ಮತ್ತು ಸಂಶೋಧನಾ ನಗರ ನಿರ್ಮಿಸಲಿರುವ ವಿಚಾರವನ್ನು ಡಚ್ ನಿಯೋಗದ ಗಮನಕ್ಕೆ ತಂದರು.

ಇದಕ್ಕೆ ಸ್ಪಂದಿಸಿದ ಮಾರ್ಕ್ ರುಟ್ಟೆ, 'ಭಾರತದಲ್ಲಿ ನಮ್ಮ ದೇಶದ ಒಟ್ಟು 25 ಕಂಪನಿಗಳು ವಹಿವಾಟು ನಡೆಸುತ್ತಿವೆ. ಇವು ಭಾರತದಲ್ಲಿ ಹೂಡಿಕೆ ಮಾಡಿರುವ ಒಟ್ಟು ಮೊತ್ತದಲ್ಲಿ ಶೇ 6ರಷ್ಟು ಕರ್ನಾಟಕದಲ್ಲೇ ತೊಡಗಿಸಿವೆ' ಎಂದರು.

ಸಭೆಯಲ್ಲಿ ಮಾತನಾಡಿದ ಫಿಲಿಪ್ಸ್ ಕಂಪನಿಯ ಅರವಿಂದ್ ವೈಷ್ಣವ್, 'ತಾವು ಸದ್ಯದಲ್ಲೇ ಯಲಹಂಕದಲ್ಲಿ ಇರುವ ಎಂಬೆಸಿ ಬಿಜಿನೆಸ್ ಹಬ್‌ಗೆ ತಮ್ಮ ಕ್ಯಾಂಪಸನ್ನು ಸ್ಥಳಾಂತರಿಸುತ್ತಿದ್ದೇವೆ. ಕಂಪನಿಯ 5 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳ ಸುಗಮ ಓಡಾಟಕ್ಕೆ ಬಿಎಂಟಿಸಿ ವೋಲ್ವೊ ಬಸ್ಸುಗಳನ್ನು ಒದಗಿಸಬೇಕು ಹಾಗೂ ಸ್ಪರ್ಧಾತ್ಮಕ ದರದಲ್ಲಿ ವಿದ್ಯುತ್ ನೀಡಲು ಸರ್ಕಾರವು ವಿದ್ಯುತ್ ವೆಚ್ಚದ ಮೇಲೆ ಶೇ 20ರಷ್ಟು ಸಬ್ಸಿಡಿ ನೀಡಬೇಕು ಹಾಗೂ ಜಿಎಸ್‌ಟಿ ಮರುಪಾವತಿಯನ್ನು ಸುಲಭಗೊಳಿಸಬೇಕು' ಎಂದು ಮನವಿ ಮಾಡಿದರು.

ಡಚ್ ಕಂಪನಿಗಳಾದ ಬುಕಿಂಗ್ ಡಾಟ್‌ಕಾಂ ಪ್ರತಿನಿಧಿ ಪೀಟರ್ ಲಾಕ್ಸಹಿಲರ್, ಶೆಲ್ ಕಂಪನಿಯ ನಿತಿನ್ ಪ್ರಸಾದ್, ಕೆಎಲ್‌ಎಂನ ಕ್ರಿಸ್ಟಿಯನ್ ವ್ಯಾನ್ ಡಿ ಕುಪೆಲ್, ಎಎಸ್ಎಂಎಲ್‌ನ ಮಾರಿಸ್ ಗೆರೆಟ್ಸ್, ಕೆಪಿಎಂಜಿಯ ಮಾರ್ಕ್ ಬ್ರೋಕ್ಸ್, ಅರ್ಕ್ಯಾಡಿಸ್‌ನ ವೆಂಕಟ ಚುಂಡುರು, ರಾಂಡ್ ಸ್ಟಡ್ ಕಂಪನಿಯ ವಿಶ್ವನಾಥ್ ಪುದುಕ್ಕಾಡ್, ಈಸ್ಟ್ ವೆಸ್ಟ್ ಸೀಡ್ಸ್‌ನ ದಿಲೀಪ್ ರಾಜನ್, ಕೋಪರ್ಟ್ ಕಂಪನಿಯ ಹೆನ್ರಿ ಓಸ್ಟ್ರೋಕ್ ಭಾಗವಹಿಸಿದ್ದರು. ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಸೇರಿದಂತೆ ಇತರರು ಇದ್ದರು.

ನೆದರ್ಲೆಂಡ್ಸ್ ಪ್ರಧಾನಿ ಮಾರ್ಕ್ ರುಟ್ಟೆ ನೇತೃತ್ವದ ಡಚ್ ಕಂಪನಿಗಳ ತಂಡದ ಜೊತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಚರ್ಚೆ ನಡೆಸಿದರು

> **ಕರ್ನಾಟಕದಲ್ಲಿ ಹೂಡಿಕೆ ಹೆಚ್ಚಿಸಲು ನಮ್ಮ ಕಂಪನಿಗಳು ಉತ್ಸುಕವಾಗಿವೆ. ಈ ನಿಟ್ಟಿನಲ್ಲಿ ಇಲ್ಲಿನ ಉಪ ಮುಖ್ಯಮಂತ್ರಿ ಮತ್ತು ಸಚಿವರೇ ನಮ್ಮ ಬೇಡಿಕೆಗಳನ್ನು ಆಲಿಸಿದ್ದು ಸಕಾರಾತ್ಮಕ ಕ್ರಮವಾಗಿದೆ**
> **ಮಾರ್ಕ್ ರುಟ್ಟೆ,** ನೆದರ್ಲೆಂಡ್ ಪ್ರಧಾನಿ

> **ಡಚ್ ಕಂಪನಿಗಳೊಂದಿಗಿನ ಬಾಂಧವ್ಯ ಸದೃಢಗೊಳಿಸಲು ಬದ್ಧರಾಗಿದ್ದೇವೆ. ಬೆಂಗಳೂರು ಮಾತ್ರವಲ್ಲ, ಮೈಸೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿಯಲ್ಲೂ ಹೂಡಿಕೆಗೆ ನೆರವು ನೀಡಲಾಗುವುದು**
> **ಡಿ.ಕೆ. ಶಿವಕುಮಾರ್,** ಉಪ ಮುಖ್ಯಮಂತ್ರಿ

ಹಿರಿಯೂರು ತಾಲ್ಲೂಕಿನ ಗೊಲ್ಲಹಳ್ಳಿ ಗೇಟ್ ಸಮೀಪದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ಸಂಭವಿಸಿದ ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಬಸ್

ಲಾರಿಗೆ ಬಸ್ ಡಿಕ್ಕಿ: ಐವರ ಸಾವು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್ ಹಾಗೂ ಲಾರಿ ನಡುವೆ ಹಿರಿಯೂರು ತಾಲ್ಲೂಕಿನ ಗೊಲ್ಲಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ- 150ರಲ್ಲಿ ಸೋಮವಾರ ನಸುಕಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಐವರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಪಾರ್ವತಮ್ಮ (45), ರಾಯಚೂರಿನ ರಮೇಶ್ (40), ಮಾನ್ವಿಯ (35), ಮಸ್ಕಿಯ ರವಿ (23), ಮಾನ್ವಿಯ ನರಸಣ್ಣ (5) ಮೃತಪಟ್ಟವರು. ಈ ಪೈಕಿ ಇಬ್ಬರು ಸ್ಥಳದಲ್ಲಿಯೇ ಸಾವಿಗೀಡಾಗಿದ್ದಾರೆ, ಮೂವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಎಂಟು ಜನ ಪ್ರಯಾಣಿಕರು ಗಾಯಗೊಂಡಿದ್ದು, ಚಳ್ಳಕೆರೆ ಸಾರ್ವಜನಿಕ ಆಸ್ಪತ್ರೆ ಹಾಗೂ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

ರಾಯಚೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ಬಸ್‌ನಲ್ಲಿ 51 ಜನ ಪ್ರಯಾಣಿಕರಿದ್ದರು. ಗೊಲ್ಲಹಳ್ಳಿ ಗೇಟ್ ಬಳಿ ಲಾರಿಯನ್ನು ಹಿಂದಿಕ್ಕುವ ಭರದಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡ ಬಸ್ ಡಿಕ್ಕಿ ಹೊಡೆದಿದೆ. ಬಸ್‌ನ ಎಡಭಾಗ ಕಿಟಕಿಯ ಬಳಿ ಕುಳಿತುಕೊಂಡಿದ್ದ ಪ್ರಯಾಣಿಕರಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ. ಅವರ ಪೈಕಿ ಐವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಬಸ್ ಚಾಲಕ ಅತಿ ವೇಗ ಹಾಗೂ ನಿರ್ಲಕ್ಷ್ಯದಿಂದ ಚಾಲನೆ ಮಾಡುತ್ತಿದ್ದರು ಎಂದು ಪ್ರಯಾಣಿಕರು ದೂರಿದ್ದಾರೆ. ಲಾರಿಯನ್ನು ಹಿಂದಿಕ್ಕುವ ಆತುರದಲ್ಲಿ ಅಪಘಾತ ಸಂಭವಿಸಿದೆ. ಬಸ್‌ನ ಎಡಭಾಗ ಸಂಪೂರ್ಣ ಜಖಂಗೊಂಡಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ಮಾಹಿತಿ ನೀಡಿದ್ದಾರೆ.

ನನ್ನ ಹೆಣ ಕೂಡ ಬಿಜೆಪಿಗೆ ಹೋಗಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಮೈಸೂರು: 'ನನ್ನ ಹೆಣ ಕೂಡ ಬಿಜೆಪಿಗೆ ಹೋಗುವುದಿಲ್ಲ. ಆರಂಭದಿಂದಲೂ ಕೋಮುವಾದಿ ಪಕ್ಷಗಳ ವಿರುದ್ಧ ರಾಜಕಾರಣ ಮಾಡಿಕೊಂಡು ಬಂದಿದ್ದೇನೆ. ಅಧಿಕಾರ ಇರಲಿ ಅಥವಾ ಇಲ್ಲದಿರಲಿ ಕೋಮುವಾದಿಗಳ ಜೊತೆ ರಾಜಿ ಇಲ್ಲವೇ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಸಿದ್ದರಾಮಯ್ಯ ಬಿಜೆಪಿ ಬಾಗಿಲು ಬಡಿದಿರಲಿಲ್ಲವೇ? ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿಕೆಗೆ ಇಲ್ಲಿ ಸೋಮವಾರ ಜೋರಾಗಿ ನಗುತ್ತಾ ಪ್ರತಿಕ್ರಿಯಿಸಿದ ಅವರು, 'ಯಾರೋ ಹೇಳಿದರೆಂದು ಕುಮಾರಸ್ವಾಮಿ ಹೇಳಿ ದ್ದಾರೆ. ನಾನು ಬಿಜೆಪಿ ಸೇರಲು ಪ್ರಯತ್ನಿಸಿದ್ದೆ ಎನ್ನುವುದನ್ನು ಯಾರಾದರೂ ಊಹಿಸಿಕೊಳ್ಳಲು ಸಾಧ್ಯವೇ' ಎಂದು ಕೇಳಿದರು.

'ರಾಜಕೀಯ ಜೀವನದುದ್ದಕ್ಕೂ ಜಾತ್ಯತೀತ ಸಿದ್ಧಾಂತಕ್ಕೆ ಬದ್ಧವಾಗಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಿಕೊಂಡು ಬಂದಿದ್ದೇನೆ. ಎಲ್‌.ಕೆ. ಅಡ್ವಾಣಿ ಅವರನ್ನು ಭೇಟಿಯಾಗಿರಬಹುದು. ಈಚೆಗೆ ಕೇಂದ್ರ ಸಚಿವ ಅಮಿತ್ ಶಾ ಅವರನ್ನೂ ಭೇಟಿಯಾಗಿದ್ದೆ. ಯಾರೋ ನಾಯಕರನ್ನು ಭೇಟಿಯಾದಾಕ್ಷಣ ಸಿದ್ಧಾಂತ ಬಲಿ ಕೊಟ್ಟಿದ್ದೇನೆ ಎಂದಲ್ಲ' ಎಂದು ಹೇಳಿದರು. 'ಕುಮಾರಸ್ವಾಮಿ ಕುಟುಂಬ ರಾಜಕಾರಣಕ್ಕೋಸ್ಕರ ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳುತ್ತಿದ್ದಾರೆ' ಎಂದು ಟೀಕಿಸಿದರು.

ಸಮಯ ಕೊಡದ ಪ್ರಧಾನಿ: 'ಕಾವೇರಿ ವಿವಾದ ಬಗೆಹರಿಸಬೇಕು ಹಾಗೂ ನೀರಾವರಿ ಯೋಜನೆಗಳ ಅನುಷ್ಠಾನದ ವಿಷಯದಲ್ಲಿ ಎದುರಾಗಿರುವ ತೊಡಕುಗಳನ್ನು ನಿವಾರಿಸುವಂತೆ ಕೋರಲು ಸರ್ವಪಕ್ಷ ನಿಯೋಗ ಕರೆದುಕೊಂಡು ಬರುತ್ತೇನೆ, ಸಮಯ ಕೊಡಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದೇನೆ. ಆದರೆ, ಈವರೆಗೂ ಪ್ರತಿಕ್ರಿಯೆ ಬಂದಿಲ್ಲ' ಎಂದು ಕಿಡಿಕಾರಿದರು.

'ರಾಜ್ಯದಲ್ಲಿರುವ ಬಿಜೆಪಿಯ 25 ಸಂಸದರು ಕಾವೇರಿ ವಿಷಯವಾಗಿ ಸಂಸತ್‌ನಲ್ಲಿ ಯಾವತ್ತು ಗಲಾಟೆ ಮಾಡಿದ್ದಾರೆ? ನಮಗೂ ಸಮಯ ಕೊಡುವುದಿಲ್ಲ; ಬಿಜೆಪಿಯವರೂ ಹೋಗಿ ಮಾತನಾಡುವುದಿಲ್ಲ' ಎಂದು ಟೀಕಿಸಿದರು.

'ಹತಾಶರಾಗಿರುವ ಪ್ರಧಾನಿ'

'ಕರ್ನಾಟಕ ವಿಧಾನಸಭೆ ಚುನಾವಣೆಯ ಫಲಿತಾಂಶವು ಪ್ರಧಾನಿ ನರೇಂದ್ರ ಮೋದಿ ಮೇಲೆ ಬಹಳ ದೊಡ್ಡ ಪರಿಣಾಮ ಬೀರಿದೆ. ಹೀಗಾಗಿ, ಒಂದು ದೇಶ ಒಂದು ಚುನಾವಣೆ ಬಗ್ಗೆ ಮಾತನಾಡುತ್ತಿದ್ದಾರೆ' ಎಂದು ಸಿದ್ದರಾಮಯ್ಯ ಟೀಕಿಸಿದರು.

'ನಾನು ಕರ್ನಾಟಕಕ್ಕೆ ಬಂದು ಮಾಯ- ಮಂತ್ರ ಮಾಡಿಬಿಡುತ್ತೇನೆ, ರ‍್ಯಾಲಿ, ರೋಡ್ ಶೋ ನಡೆಸಿದರೆ ಪರಿಸ್ಥಿತಿ ಬದಲಾಗುತ್ತದೆ ಎಂದು ಭಾವಿಸಿದ್ದರು. ಆದರೆ, ಅವರು ಹೋದಲ್ಲೆಲ್ಲಾ ನಾವು ದೊಡ್ಡ ಅಂತರದಲ್ಲಿ ಗೆದ್ದಿದ್ದೇವೆ. ಪರಿಣಾಮ ಪ್ರಧಾನಿಗೆ ಹತಾಶೆ ಶುರುವಾಗಿದೆ. ಹೀಗಾಗಿಯೇ ಅವರಿಗೆ ವಿರೋಧಪಕ್ಷದ ನಾಯಕನನ್ನು ಆಯ್ಕೆ ಮಾಡಲೂ ಸಾಧ್ಯವಾಗಿಲ್ಲ. ಅದಕ್ಕೆ ಇಷ್ಟವೂ ಇಲ್ಲ. ಕರ್ನಾಟಕದ ಬಿಜೆಪಿ ಬಗ್ಗೆ ಅವರಿಗೆ ತಾತ್ಸಾರ ಬಂದಿದೆ' ಎಂದರು.

'ಕಮಲ ದಳ' ಎಂದು ಬದಲಿಸಿ ಕಾಂಗ್ರೆಸ್ ವ್ಯಂಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನತಾ ದಳ' ಎಂಬ ಹೆಸರನ್ನು 'ಕಮಲ ದಳ' ಎಂದು ಬದಲಿಸಿಕೊಂಡರೆ ಒಳಿತು ಎಂದು ಕಾಂಗ್ರೆಸ್‌ನ ರಾಜ್ಯ ಘಟಕ ವ್ಯಂಗ್ಯವಾಡಿದೆ.

ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಮೈತ್ರಿ ಮಾಡಿಕೊಳ್ಳಲು ಬಿಜೆಪಿ ಮತ್ತು ಜೆಡಿಎಸ್ ನಡುವೆ ಮಾತುಕತೆ ನಡೆಯುತ್ತಿದೆ. ಈ ವಿಚಾರವನ್ನು ಮುಂದಿಟ್ಟು 'X' (ಟ್ವೀಟ್) ಮಾಡಿರುವ ಕಾಂಗ್ರೆಸ್, 'ಚುನಾವಣೆಯಲ್ಲಿ ಸೋತರೆ ಪಕ್ಷ ವಿಸರ್ಜಿಸುತ್ತೇನೆ ಎಂದು ಆ ಪಕ್ಷದ ನಾಯಕರು ಹೇಳಿದ್ದರು. ಆದರೆ, ಈಗ 'ಜಾತ್ಯತೀತತೆ'ಯನ್ನು ವಿಸರ್ಜಿಸಲು ಹೊರಟಿದ್ದಾರೆ' ಎಂದು ಹೇಳಿದೆ.

'ಇತ್ತ ರಾಜ್ಯ ಬಿಜೆಪಿಯು ಜೆಡಿಎಸ್ ಪಕ್ಷವನ್ನು 'ಫ್ಯಾಮಿಲಿ ಪಾರ್ಟಿ' ಎಂದು ಟೀಕಿಸುತ್ತಿತ್ತು. ಈಗ ಅದೇ ಫ್ಯಾಮಿಲಿಗೆ ನಾಲ್ಕು ಸೀಟು ಬಿಟ್ಟು ಹೊಂದಾಣಿಕೆ ಮಾಡಿಕೊಳ್ಳುತ್ತಿರುವುದು ನಾಚಿಕೆಗೇಡು ಅಲ್ಲವೇ' ಎಂದು ಬಿಜೆಪಿ ನಾಯಕರನ್ನೂ ಕಾಂಗ್ರೆಸ್ ಪ್ರಶ್ನಿಸಿದೆ.

'ಬಿಜೆಪಿ-ಜೆಡಿಎಸ್ ಮೈತ್ರಿಯು ನಡು ನೀರಲ್ಲಿ ಮುಳುಗುತ್ತಿರುವ ಇಬ್ಬರು ಒಬ್ಬರನೊಬ್ಬರು ಕೈ ಹಿಡಿದು ಆಸರೆ ಪಡೆಯುವಂತಿದೆ..!' ಎಂದು ಹೇಳಿದೆ.

ದಕ್ಷಿಣ ಕನ್ನಡ, ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರಾಯೋಗಿಕ ಜಾರಿ

'ಮೈತ್ರಿ' ಮುಟ್ಟಿನ ಕಪ್ ವಿತರಣೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಸರ್ಕಾರಿ ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಕಲಿಯುತ್ತಿರುವ 17 ವರ್ಷ ಮೇಲ್ಪಟ್ಟ ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ಮುಟ್ಟಿನ ಕಪ್‌ಗಳನ್ನು ವಿತರಿಸುವ 'ಶುಚಿ ನನ್ನ ಮೈತ್ರಿ' ಯೋಜನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಸೋಮವಾರ ಇಲ್ಲಿ ಚಾಲನೆ ನೀಡಿದರು.

'ದಕ್ಷಿಣ ಕನ್ನಡ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿನ 15 ಸಾವಿರ ವಿದ್ಯಾರ್ಥಿನಿಯರಿಗೆ ಮುಟ್ಟಿನ ಕಪ್‌ಗಳನ್ನು ಉಚಿತವಾಗಿ ವಿತರಿಸುತ್ತಿದ್ದೇವೆ. ಕ್ರಮೇಣ ಈ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ವಿಸ್ತರಿಸಲಿದ್ದೇವೆ' ಎಂದರು.

ಯೋಜನೆಯ ರಾಯಭಾರಿ, ಚಿತ್ರನಟಿ ಸಪ್ತಮಿ ಗೌಡ ಮಾತನಾಡಿ, 'ಒಬ್ಬ ಮಹಿಳೆ ಎಲ್ಲ ಋತುಚಕ್ರಗಳನ್ನು ಪೂರೈಸುವಾಗ ಸುಮಾರು 200 ಕೆ.ಜಿ.ಗಳಷ್ಟು ಸ್ಯಾನಿಟರಿ ಪ್ಯಾಡ್‌ಗಳನ್ನು ಬಳಸಬೇಕಾಗುತ್ತದೆ. ಪರಿಸರ ಸಂರಕ್ಷಣೆಯ ದೃಷ್ಟಿಯಿಂದಲೂ ಮುಟ್ಟಿನ ಕಪ್ ಬಳಕೆ ಸೂಕ್ತ. ಇದರ ಬಳಕೆಯೂ ಸರಳ. ಇವುಗಳ ನಿರ್ವಹಣೆಯೂ ಸುಲಭ. ಈ ಕಾರಣಕ್ಕಾಗಿಯೇ ದೇಶದ ಹಾಗೂ ಜಗತ್ತಿನ ಮಹಿಳೆಯರು ಮುಟ್ಟಿನ ಕಪ್ ಬಳಕೆಗೆ ಒಲವು ತೋರಿಸುತ್ತಿದ್ದಾರೆ' ಎಂದು ಹೇಳಿದರು.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ಶಾಸಕ ಅಶೋಕ್ ಕುಮಾರ್ ರೈ, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಆಯುಕ್ತ ಡಿ. ರಂದೀಪ್, ನಿರ್ದೇಶಕಿ ಡಾ.ಎಂ. ಇಂದುಮತಿ, ಯೋಜನಾ ನಿರ್ದೇಶಕ ಡಾ. ಶ್ರೀನಿವಾಸ್ ಜಿ.ಎನ್., ವಿಭಾಗಿಯ ಸಹ ನಿರ್ದೇಶಕಿ ಡಾ.ರಾಜೇಶ್ವರಿ ದೇವಿ ಎಚ್. ಆರ್., ಉಪನಿರ್ದೇಶಕಿ ಡಾ. ವೀಣಾ ವಿ ಇದ್ದರು.

ಮಂಗಳೂರಿನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಸಚಿವ ದಿನೇಶ್ ಗುಂಡೂರಾವ್ ಅವರು ವಿದ್ಯಾರ್ಥಿನಿಯರಿಗೆ ಮುಟ್ಟಿನ ಕಪ್ ವಿತರಿಸುವ ಮೂಲಕ 'ಶುಚಿ ನನ್ನ ಮೈತ್ರಿ' ಯೋಜನೆಗೆ ಚಾಲನೆ ನೀಡಿದರು

> **ಮುಟ್ಟು ಸಹಜ ಜೈವಿಕ ಕ್ರಿಯೆ. ಅದು ಅಪವಿತ್ರ ಅಲ್ಲ. ಈ ಬಗ್ಗೆಯೂ ಬಹಿರಂಗವಾಗಿ ಚರ್ಚೆ ಆಗಬೇಕು**
> **ದಿನೇಶ್ ಗುಂಡೂರಾವ್,** ಸಚಿವ

> **ಋತುಚಕ್ರದ ಕಾರಣಕ್ಕೆ ಹೆಣ್ಣುಮಕ್ಕಳು ಚಟುವಟಿಕೆಯಿಂದ ಹಿಂದೆ ಸರಿಯುವುದನ್ನು ತಡೆಯಲು ಮುಟ್ಟಿನ ಕಪ್ ಸಹಕಾರಿ**
> **ಸಪ್ತಮಿ ಗೌಡ**
> ನಟಿ ಹಾಗೂ ಯೋಜನೆಯ ರಾಯಭಾರಿ

'40 ಲಕ್ಷ ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ಪ್ಯಾಡ್'

'ರಾಜ್ಯದ ಸರ್ಕಾರಿ ಪ್ರೌಢಶಾಲೆ ಹಾಗೂ ಕಾಲೇಜುಗಳಲ್ಲಿ ಕಲಿಯುತ್ತಿರುವ 40 ಲಕ್ಷ ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ಪ್ಯಾಡ್ ವಿತರಣೆಗೆ ಸರ್ಕಾರ ಕ್ರಮ ಕೈಗೊಂಡಿದೆ' ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

'2013-14ರಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಸರ್ಕಾರಿ ಶಾಲಾ-ಕಾಲೇಜು ವಿದ್ಯಾರ್ಥಿನಿಯರಿಗೆ ಉಚಿತವಾಗಿ ಸ್ಯಾನಿಟರಿ ಪ್ಯಾಡ್ ಒದಗಿಸುವ ಯೋಜನೆ ಆರಂಭಿಸಿತ್ತು. ಮೂರು ವರ್ಷಗಳಿಂದ ಇದನ್ನು ಸ್ಥಗಿತಗೊಳಿಸಲಾಗಿತ್ತು. ಈ ಕಾರ್ಯಕ್ರಮದಡಿ ಸ್ಯಾನಿಟರಿ ಪ್ಯಾಡ್‌ಗಳನ್ನು ಉಚಿತವಾಗಿ ವಿತರಿಸುವ ಕಾರ್ಯಕ್ರಮವನ್ನು ಪುನರಾರಂಭಿಸಿದ್ದೇವೆ. ಇದಕ್ಕೆ ರಾಜ್ಯದ ನಾಲ್ಕು ವಿಭಾಗಗಳಲ್ಲಿ ಪ್ರತ್ಯೇಕವಾಗಿ ಟೆಂಡರ್ ಕರೆದಿದ್ದೇವೆ' ಎಂದರು.

'ಅರಣ್ಯ ಭೂಮಿ ರಕ್ಷಣೆಗಾಗಿ ಹುತಾತ್ಮನಾಗಲೂ ಸಿದ್ಧ'

ಪ್ರಜಾವಾಣಿ ವಾರ್ತೆ

ಕೋಲಾರ: 'ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ಜಮೀನು ಒತ್ತುವರಿ ಮಾಡಿಕೊಂಡವರು ರೈತರಲ್ಲ; ಬದಲಾಗಿ ಭೂ ಮಾಫಿಯಾದವರು. ಅಮಾಯಕ ರೈತರ ಸೋಗಿನಲ್ಲಿ ಭೂಗಳ್ಳತನ ಮಾಡಿಕೊಂಡು ಜನರಲ್ಲಿ ತಪ್ಪು ಭಾವನೆ ಮೂಡಿಸುತ್ತಿದ್ದಾರೆ' ಎಂದು ಜಿಲ್ಲೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ವಿ.ಏಡುಕೊಂಡಲು ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾನೂನು ಬದ್ಧವಾಗಿ ಕೆಲಸ ಮಾಡಲು ಯಾವುದೇ ಒತ್ತಡ, ಬೆದರಿಕೆಗೆ ಬಗ್ಗಲ್ಲ. ಒಂದಿಂಚು ಅರಣ್ಯ ಜಮೀನು ಒತ್ತುವರಿ ಆಗಿದ್ದರೂ ಸಹಿಸಲ್ಲ. ಅರಣ್ಯ ಭೂಮಿ ರಕ್ಷಣೆಗಾಗಿ ಹುತಾತ್ಮನಾಗಲೂ ಸಿದ್ಧ. ಮುಂದೆ ಅರಣ್ಯ ಹುತಾತ್ಮರ ದಿನದಂದು ನನ್ನ ಭಾವಚಿತ್ರ ಇಟ್ಟು ಜನ ಪೂಜಿಸುತ್ತಾರೆ. ಅದು ಕೂಡ ಹೆಮ್ಮೆಯ ವಿಚಾರ' ಎಂದರು.

ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಮಲ್ಲಂಪಲ್ಲಿ, ದಳಸನೂರು ಹಾಗೂ ಶ್ರೀನಿವಾಸಪುರಕ್ಕೆ ಸೇರಿದ ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಒತ್ತುವರಿ ಮಾಡಲಾಗಿದ್ದ ಜಾಗವನ್ನು ಕಾನೂನು ಪ್ರಕಾರ ತೆರವುಗೊಳಿಸಲಾಗುತ್ತಿದೆ ಎಂದು ಅವರು ಸ್ಪಷ್ಟಪಡಿಸಿದರು.

'ಒತ್ತುವರಿದಾರರು ಯಾರು? ಭೂಗಳ್ಳರು ಯಾರು? ಯಾವ ರೀತಿ ಕಡತ ಸೃಷ್ಟಿ ಮಾಡಿಕೊಂಡಿದ್ದಾರೆ? ಇವರ ಕಾರ್ಯಾಚರಣೆ ಏನೇನು? ಈ ಎಲ್ಲಾ ವಿಷಯಗಳು ಎಲ್ಲರಿಗೂ ಗೊತ್ತಿವೆ. ರೈತರ ಹೆಸರಿನಲ್ಲಿ ಭೂ ಮಾಫಿಯಾ ದಂಧೆ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕುವುದು ಅರಣ್ಯ ಇಲಾಖೆಯ ಬಹುದಿನದ ಕನಸಾಗಿತ್ತು' ಎಂದು ಏಡುಕೊಂಡಲು ಹೇಳಿದರು.

> **ಶ್ರೀನಿವಾಸಪುರದಲ್ಲಿ ನಿಜವಾದ ರೈತರು ಅರಣ್ಯ ಭೂಮಿ ಒತ್ತುವರಿ ಮಾಡಿಲ್ಲ. ರೈತರ ಹೆಸರಲ್ಲಿ ಭೂಗಳ್ಳರು 25 ಎಕರೆಯಿಂದ 100 ಎಕರೆವರೆಗೂ ಒತ್ತುವರಿ ಮಾಡಿಕೊಂಡಿದ್ದಾರೆ**
> **ವಿ.ಏಡುಕೊಂಡಲು,** ಡಿಸಿಎಫ್, ಕೋಲಾರ

'ಕಾಂಗ್ರೆಸ್ ಗೆದ್ದಲು ಹಿಡಿದ ಪಕ್ಷ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾದೇಶಿಕ ಪಕ್ಷಗಳ ಬಲದಲ್ಲೇ ಬದುಕು ಕಂಡುಕೊಂಡ ಕಾಂಗ್ರೆಸ್ ಪಕ್ಷಕ್ಕೆ ಈಗ ಗೆದ್ದಲು ಹಿಡಿದಿದೆ' ಎಂದು ಜೆಡಿಎಸ್ ಟೀಕಿಸಿದೆ.

ಬಿಜೆಪಿ ಜತೆಗಿನ ಮೈತ್ರಿ ಕುರಿತು ಕಾಂಗ್ರೆಸ್ ಪಕ್ಷದ ಟೀಕೆಗೆ ತನ್ನ ಅಧಿಕೃತ 'X' (ಟ್ವಿಟರ್) ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಜೆಡಿಎಸ್, 'ಬಿಜೆಪಿ- ಜೆಡಿಎಸ್ ಮೈತ್ರಿ ಮಾತು ಕೇಳಿ ಕಾಂಗ್ರೆಸ್ ಮತಿಗೆಟ್ಟು ಕುಳಿತಿದೆ. ಚುನಾವಣೆಯಲ್ಲಿ ಒಂದು ಸ್ಥಾನವೂ ಸಿಗುವ ಸಾಧ್ಯತೆ ಇಲ್ಲದ ಸ್ಥಿತಿ ನೆನೆದು ಕೈ ಪರಚಿಕೊಳ್ಳುತ್ತಿದೆ' ಎಂದಿದೆ.

ಪಕ್ಷ ವಿಸರ್ಜನೆ ಕುರಿತು ಎಚ್‌.ಡಿ. ಕುಮಾರಸ್ವಾಮಿ ನೀಡಿದ್ದ ಹೇಳಿಕೆಯನ್ನೇ ಕೂಗುಮಾರಿ ಕಾಂಗ್ರೆಸ್ ತಿರುಚುತ್ತಿದೆ. ಈಗ ಮುಖ ಉಳಿಸಿಕೊಳ್ಳಲು ಸತ್ಯವನ್ನೇ ತಿರುಚುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದೆ. ಸ್ವಾತಂತ್ರ್ಯಾನಂತರದ 75 ವರ್ಷಗಳಲ್ಲಿ ಜಾತ್ಯತೀತ ತತ್ವದ ಜಪ ಮಾಡಿಕೊಂಡೇ ಅಧಿಕಾರದ ಅಮಲಿನಲ್ಲಿ ತೇಲಿದ ಆ ಪಕ್ಷಕ್ಕೆ ತನ್ನ ಕೊಳಕು ಬೆನ್ನು ಕಾಣುತ್ತಿಲ್ಲ. ಶಿವಸೇನಾ, ಜೆಡಿಯು, ಡಿಎಂಕೆಯಂತಹ ಪ್ರಾದೇಶಿಕ ಪಕ್ಷಗಳ ಬಲದಲ್ಲಿಯೇ ಬದುಕು ಕಂಡುಕೊಂಡು ಏದುಸಿರು ಬಿಡುತ್ತಾ ದೇಶದ ಉದ್ದಗಲಕ್ಕೂ 'ಹಸ್ತವ್ಯಸ್ತ' ವಾಗಿದೆ ಎಂದು ಟೀಕಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	98.02	3,677	4,252
ಹಾರಂಗಿ	2,859	2,858.09	3,344	100
ಕಬಿನಿ	2,284	2275.82	4,726	3,190
ಹೇಮಾವತಿ	2,922	2,900.32	896	6,090
ಲಿಂಗನಮಕ್ಕಿ	1,819	1,787	2,644	3249.29
ಸೂಪಾ (ಮೀ)	564	545.61	3,073	2,038
ಮಾಣಿ	595	579.68	934	-
ತುಂಗಭದ್ರಾ	1,633	1,622.68	3,150	10,001
ಮಲಪ್ರಭಾ	2079.50	2,065.76	00	194
ಘಟಪ್ರಭಾ	2175	2,162.95	598	177
ಭದ್ರಾ	186	161.9	652	2,492
ಆಲಮಟ್ಟಿ (ಮೀ)	519.60	519.07	00	11,285
ನಾರಾಯಣಪುರ (ಮೀ)	492.25	490.47	9,801	9,664

* ನೆಲಮಟ್ಟದಿಂದ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ

ಸಂಖ್ಯೆ:ಕಾಪಾಅ/ಗ್ರಾಕುನೀಮತ್ತುನೈ/ವಿಯಾ/ಟೆ.ಪ/SBM/2023-24/550 ದಿನಾಂಕ:08-09-2023

ಟೆಂಡರ ಪ್ರಕಟಣೆ-2ನೇ ಕರೆ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್" ಮೂಲಕ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಅಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

Sl. No.	Taluka	Village Name	Estimate cost (Rs in lakhs)	Indent No	Eligibility of Contractor	Period of Completion
1.	Shorapur	RAJANKOLLUR	68.971	2887	Class-III& above	90 Day's
2.	Shorapur	KHANAPUR SH	68.225	2889	Class-III & above	90 Day's

1) ಲೆಕ್ಕ ಶಿರ್ಷಿಕೆ: Swachh Bharat Mission-2022-23 3) ಗುತ್ತಿಗೆದಾರರ, ಅರ್ಹತೆ : 3ನೇ ಹಾಗೂ ಮೇಲ್ಪಟ್ಟು ದರ್ಜೆ 2)ಟೆಂಡರ ಫಾರಂ ಪಡೆಯುವ ದಿನಾಂಕ: 12-09-2023 ರಿಂದ 20-09-2023. 3) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರ. 4) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 20-09-2023 ಸಾಯಂಕಾಲ 4.30 ಗಂಟೆವರೆಗೆ. 5)ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: 21-09-2023 ಸಾಯಂಕಾಲ 5.00 ಗಂಟೆ ನಂತರ. 6) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 23-09-2023 ಬೆಳಿಗ್ಗೆ 11.00 ಗಂಟೆಯ ನಂತರ 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. 8) ಅಂತರ್ಜಾಲ ತಾಣದ ವಿಳಾಸ: https://kppp.karnataka.gov.in.

ಸಹಿ/- ಕಾರ್ಯಪಾಲಕ ಇಂಜಿನೀಯರರು,
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ,
ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/136/ಕೆ.ಎಸ್.ಎಂ.ಸಿ.ಎ/2023-24

ಗೌರಿ ಗಣೇಶ ಹಬ್ಬ: 1,200 ಹೆಚ್ಚುವರಿ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರಿ ಗಣೇಶ ಹಬ್ಬದ ಪ್ರಯುಕ್ತ 1,200 ಹೆಚ್ಚುವರಿ ಬಸ್‌ಗಳ ವಿಶೇಷ ಸಾರಿಗೆ ವ್ಯವಸ್ಥೆ ಮಾಡಲು ಕೆಎಸ್‌ಆರ್‌ಟಿಸಿ ನಿರ್ಧರಿಸಿದೆ.

ಇದೇ 15ರಿಂದ ಮೂರು ದಿನಗಳ ಕಾಲ ಬೆಂಗಳೂರಿನಿಂದ ವಿವಿಧ ಸ್ಥಳಗಳಿಗೆ ಹಾಗೂ 18ರಂದು ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ವಿಶೇಷ ಬಸ್‌ಗಳು ಸಂಚರಿಸಲಿವೆ.

ಕೆಂಪೇಗೌಡ ಬಸ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆಸುಬ್ರಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿ, ವಿಜಯವಾಡ, ಹೈದರಾಬಾದ್ ಮುಂತಾದ ಸ್ಥಳಗಳಿಗೆ ವಿಶೇಷ ಕಾರ್ಯಾಚರಣೆ ನಡೆಯಲಿದೆ.

ಬೆಂಗಳೂರಿನ ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿ ಮಾರ್ಗದ ಕಡೆಗೆ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಮಧುರೈ, ಕುಂಭಕೋಣಂ, ಚೆನ್ನೈ, ಕೊಯಮತ್ತೂರು, ತಿರುಚ್ಚಿ, ಪಾಲಕ್ಕಾಡ್, ತ್ರಿಶ್ಶೂರ್, ಎರ್ನಾಕುಲಂ, ಕೋಯಿಕ್ಕೋಡ್ ಮುಂತಾದ ಸ್ಥಳಗಳಿಗೆ ಹೋಗುವ ಬಸ್‌ಗಳು ಶಾಂತಿನಗರದಲ್ಲಿನ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ಮಾಡಲಿವೆ.

ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿ ಬಸ್‌ಗಳಲ್ಲಿ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಕರ್ನಾಟಕ ಮತ್ತು ಬೇರೆ ರಾಜ್ಯಗಳ 691 ಬುಕ್ಕಿಂಗ್ ಕೌಂಟರ್‌ಗಳಲ್ಲಿ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸಬಹುದು. ಇ-ಟಿಕೇಟ್ ಬುಕಿಂಗ್ ಅನ್ನು www.ksrtc.karnataka.gov.in ವೆಬ್‌ಸೈಟ್ ಮೂಲಕ ಮಾಡಬಹುದು. 4 ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇಕಡ 5ರಷ್ಟು ರಿಯಾಯಿತಿ ದೊರೆಯಲಿದೆ. ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟ್‌ಗಳನ್ನು ಒಟ್ಟಿಗೆ ಕಾಯ್ದಿರಿಸಿದಾಗ ಬರುವ ಪ್ರಯಾಣ ದರದಲ್ಲಿ ಶೇ 10ರಷ್ಟು ರಿಯಾಯಿತಿ ದೊರೆಯಲಿದೆ.

ಅಲ್ಲದೇ, ನಿಗಮದ ಕಾರ್ಯಾಚರಣೆ ವ್ಯಾಪ್ತಿಯಲ್ಲಿರುವ ಎಲ್ಲ ತಾಲ್ಲೂಕು, ಜಿಲ್ಲಾ ಕೇಂದ್ರಗಳ ಬಸ್ ನಿಲ್ದಾಣಗಳಿಂದ ಸಂಚಾರ ಒತ್ತಡಕ್ಕನುಗುಣವಾಗಿ ವಿಶೇಷ ಬಸ್ ಕಾರ್ಯಾಚರಣೆ ಮಾಡಲಾಗುವುದು ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
KMDS enabling municipal e-Governance
ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ
(ಪೌರಾಡಳಿತ ನಿರ್ದೇಶನಾಲಯ)
1-4, 6ನೇ ಮಹಡಿ, ಐಟಿ ಪಾರ್ಕ್, ರಾಜಾಜಿನಗರ ಕೈಗಾರಿಕಾ ಪ್ರದೇಶ, ಬೆಂಗಳೂರು-560010.
ದೂರವಾಣಿ: 080-23003100 E-mail: mckmds@mrc.gov.in Web: www.mrc.gov.in
ಸಂ: E47742 KMDS/TECH/OTHE/5/2023 ದಿನಾಂಕ: 12.09.2023

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕೆ.ಎಂ.ಡಿ.ಎಸ್.ಗೆ ಅವಶ್ಯವಿರುವ ಈ ಕೆಳಕಂಡ ಸೇವೆಗಳನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಬಿಡ್‌ಗಳನ್ನು https://kppp.karnataka.gov.in ನಲ್ಲಿ ಸಲ್ಲಿಸಬಹುದಾಗಿದೆ.

ಕ್ರ.ಸಂ.	ಟೆಂಡರ್ ವಿವರ
1.	ಟೆಂಡರ್ ಸಂಖ್ಯೆ. DMA/2023-24/SE0766 ಟೆಂಡರ್ ಹೆಸರು: Facility Management and Comprehensive Annual Maintenance Contract for Desktop, Workstations, Laptops, Printers, Scanners and Switches for a period of 3 Years extendable upto 5 Year ಟೆಂಡರ್ ಪೂರ್ವಭಾವಿ ಸಭೆ ದಿನಾಂಕ & ಸಮಯ: 21-09-2023 at 12.00 PM ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: 16-10-2023 at 11.00 AM ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: 26-10-2023 at 12.00 PM
2.	ಟೆಂಡರ್ ಸಂಖ್ಯೆ. DMA/2023-24/SE0713 ಟೆಂಡರ್ ಹೆಸರು: Supply, Installation, Commissioning and Maintenance of 150Mbps Internet Leased line for period of three years ಟೆಂಡರ್ ಪೂರ್ವಭಾವಿ ಸಭೆ ದಿನಾಂಕ & ಸಮಯ: 21-09-2023 at 11.00 AM ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: 16-10-2023 at 11.30 AM ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: 26-10-2023 at 12.30 PM
3.	ಟೆಂಡರ್ ಸಂಖ್ಯೆ. DMA/2023-24/SE0768 ಟೆಂಡರ್ ಹೆಸರು: Operation & Maintenance Services and Comprehensive Annual Maintenance Contract for a period of 3 Years extendable upto 5 Years. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ & ಸಮಯ: 21-09-2023 at 12.30 PM ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: 16-10-2023 at 12.00 PM ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: 26-10-2023 at 1.00 PM
4.	ಟೆಂಡರ್ ಸಂಖ್ಯೆ. DMA/2023-24/IND0417 ಟೆಂಡರ್ ಹೆಸರು: The Supply and installation of Backup solution for data backup with 5 years of OEM support. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ & ಸಮಯ: 21-09-2023 at 4.00 PM ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: 16-10-2023 at 12.30 PM ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: 26-10-2023 at 3.00 PM

ಮೇಲಿನ ಟೆಂಡರ್‌ಗಳ ಪ್ರಕಟಣೆ ದಿನಾಂಕ : 12-09-2023. ಮೇಲಿನ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 12-10-2023 at 5.30 PM.

ಸಹಿ/- ಜಂಟಿ ನಿರ್ದೇಶಕರು (ಸುಧಾರಣೆ)
DIPR/CP/BCPL/1259/2023-24 ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ, ಬೆಂಗಳೂರು

ಕರ್ನಾಟಕ ಸರ್ಕಾರ
ಮೂಲ ಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಕರ್ನಾಟಕ ಜಲಸಾರಿಗೆ ಮಂಡಳಿ

ಕ್ರ.ಸಂ.ಒಜಸಾ/ಒಪಿಎ/ಸಿಅರ್-30 /23-24 ದಿನಾಂಕ: 07-09-2023

ಆಸಕ್ತಿ ವ್ಯಕ್ತಪಡಿಸುವಿಕೆ 2ನೇ ಕರೆ (EXPRESSION OF INTEREST) 2nd call

ವಿಷಯ : ಹೊನ್ನಾವರ ವಲಯ ಹಂಗಾರಕಟ್ಟಾ ಕೊಡಿಬೆಂಗ್ರೆ ಕಡವು ಸೇವೆಯಲ್ಲಿರುವ ಇಲಾಖಾ ಎಲ್‌ಸಿಟಿ ನಾವೆಯನ್ನು ಬಾಡಿಗೆ ಆಧಾರದ ಮೇಲೆ ನಡೆಸಿಕೊಂಡು ಹೋಗುವ ಕಡವು ನಡೆಸುವ ಸೇವೆಯನ್ನು ಇದೇ ರೀತಿಯ ಅನುಭವ ಹೊಂದಿರುವ ಆಸಕ್ತ ಗುತ್ತಿಗೆದಾರರು/ಸಂಸ್ಥೆಗಳಿಂದ ಕೆಳ ಸಹಿ ಮಾಡಿರುವವರು ಆಹ್ವಾನಿಸಿದ್ದಾರೆ.

*****

ಇಲಾಖೆಯಿಂದ 2018 ರಲ್ಲಿ ನಿರ್ಮಿಸಲಾದ, ಕಾರವಾರ ಪೋರ್ಟನಲ್ಲಿ ನಂ. ಕೆಡಬ್ಲೂಆರ್-058 ನೊಂದಾಯಿತವಾದ 25Mx8MX2.00Mx0.90M ಅಳತೆಯ 40 ಜನರನ್ನು, 4 ಕಾರು, 1 ಬಸ್ಸ/ಲಾರಿ ಸಾಗಿಸಬಹುದಾದ 40 ಟನ್‌ಗಿಂತ ಕಡಿಮೆ ಭಾರವನ್ನು ಸಾಗಿಸುವ ಕಬ್ಬಿಣದಿಂದ ನಿರ್ಮಿಸಲಾದ ಮೆ॥ ಅಶೋಕ ಲೈಲಾಂಡ ಕಂಪನಿ ಲಿಮಿಟೆಡ್, ಚನ್ನೈ ಇಂಡಿಯಾ 2015 ರ ಮಾಡಲಿನ 136 ಬಿ.ಎಚ್.ಪಿ. 2400 ಆರ್.ಪಿ.ಎಂ. ಡಿಸೈಲ್ ಇಂಜಿನ್ ಹೊಂದಿರುವ ಎಲ್.ಸಿ.ಟಿ. ಸ್ವರ್ಣಶೀತಾ ಬಾರ್ಜನ್ನು ತಮ್ಮ ಸ್ವಂತ ಖರ್ಚಿನಲ್ಲಿ ಹೊನ್ನಾವರ ವಲಯ ಹಂಗಾರಕಟ್ಟಾ ಕೊಡಿಬೆಂಗ್ರೆ ಕಡವು ಸೇವೆಯನ್ನು ನಡೆಸಿಕೊಂಡು ಹೋಗುವ ಕೆಲಸ.

ಈ ದರವು ಬಾರ್ಜನ್ನು ನಡೆಸಲು, ನಿರ್ವಹಣೆ ಮತ್ತು ಕಾರ್ಯಾಚರಣೆ ವೆಚ್ಚಗಳು, ಬಾರ್ಜನ ವಿಮೆ, ಸುರಕ್ಷತಾ ಸಲಕರಣೆ, ಇಂಧನ, ಸಿಬ್ಬಂದಿ, ಸಿಬ್ಬಂದಿ ವೇತನ, ಇಎಸ್‌ಐ, ಇಪಿಎಫ್ ಇತ್ಯಾದಿ ಶಾಸನಾತ್ಮಕ ಮನ್ನಣೆಗಳಿಗೆ ಒಳಗೊಂಡಿರತಕ್ಕದ್ದು ದರಪಟ್ಟಿ ಸಲ್ಲಿಸುವ ದಿನ ಅನ್ವಯವಾಗುವ ಎಲ್ಲಾ ತೆರಿಗೆಗಳು ಹಾಗೂ ಸುಂಕಗಳನ್ನು ಒಳಗೊಂಡಂತೆ ಮತ್ತು ಜಿ.ಎಸ್.ಟಿಯನ್ನು ಹೊರತುಪಡಿಸಿ, ಸಂಪೂರ್ಣವಾಗಿ ಪೂರ್ಣಗೊಂಡ ದರಗಳನ್ನು ದಿನಾಂಕ : 21-09-2023 ರಂದು ಅಪರಾಹ್ನ 4.00 ಗಂಟೆಯ ಒಳಗೆ ಅಥವಾ ಮುಂಚಿತವಾಗಿ ಕೆಳ ಸಹಿ ಮಾಡಿದವರ ವಿಳಾಸಕ್ಕೆ ಸಲ್ಲಿಸುವುದು. ಒಂದು ವರ್ಷದ ಗುತ್ತಿಗೆ, ಅವಧಿ, ಅವಶ್ಯವಿದ್ದಲ್ಲಿ ಮುಂದಿನ ಅವಧಿಗೆ ವಿಸ್ತರಿಸಬಹುದಾದ (As per same terms and Conditions) ಕಡವು ಸೇವೆಯನ್ನು ಸೂರ್ಯೋದಯದಿಂದ ಸೂರ್ಯಾಸ್ತದ ವರೆಗೆ (Ferry Service) ನಡೆಸಲು ವಿಧಿಸುವ ಷರತ್ತುಗಳಿಗೆ ಒಳಪಟ್ಟು ಸಮರ್ಪಕವಾಗಿ ನಡೆಸುವ ಉದ್ದೇಶಕ್ಕೆ 1 ವರ್ಷಕ್ಕೆ ನಡೆಸಿಕೊಂಡು ಹೋಗುವ ಬಗ್ಗೆ ದರವನ್ನು ನಮೂದಿಸುವುದು.

ಯಾವುದೇ ಇತರ ಮಾಹಿತಿಗಾಗಿ ಮತ್ತು ಹೆಚ್ಚಿನ ವಿವರಗಳಿಗಾಗಿ ಕೆಳ ಸಹಿ ಮಾಡಿದವರ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಕಡವು ನಿರೀಕ್ಷಕರು, ಮಂಗಳೂರು ವಲಯ, ಹೊನ್ನಾವರ

ಸುಭಾಷಿತ

ನಿನ್ನನ್ನು ಪೀಡಿಸುವ ಸಂಕಟಗಳನ್ನು ನಗುನಗುತ್ತಾ ನಾಶಪಡಿಸು.

–ಸ್ವಾಮಿ ವಿವೇಕಾನಂದ

ಡೆಂಗಿ ಪ್ರಕರಣಗಳ ಉಲ್ಬಣ ಆಡಳಿತ ಯಂತ್ರಕ್ಕೆ ಮದ್ದು ಬೇಕಿದೆ

ಡೆಂಗಿ ಪ್ರಕರಣಗಳು ರಾಜ್ಯದಲ್ಲಿ ಕಳವಳಕಾರಿ ಮಟ್ಟದಲ್ಲಿ ಹೆಚ್ಚಾಗುತ್ತಿರುವುದಕ್ಕೆ ಆರೋಗ್ಯ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಹಾಗೂ ರಾಜ್ಯದ ಇತರ ಸ್ಥಳೀಯ ಆಡಳಿತಗಳು ಸೂಕ್ತ ಮುನ್ನೆಚ್ಚರಿಕೆ ವಹಿಸದಿರುವುದೇ ಕಾರಣ. ಇತ್ತೀಚಿನ ವರ್ಷಗಳಿಗೆ ಹೋಲಿಸಿದರೆ, ಈ ವರ್ಷ ಡೆಂಗಿ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ. ಆದರೆ, ರೋಗವನ್ನು ನಿಯಂತ್ರಿಸುವ ಹೊಣೆಗಾರಿಕೆ ನಿಭಾಯಿಸಬೇಕಾದವರು ಅಂಕಿಅಂಶಗಳನ್ನು ಕಲೆಹಾಕುವುದಕ್ಕೆ ತಮ್ಮ ಜವಾಬ್ದಾರಿಯನ್ನು ಸೀಮಿತ ಗೊಳಿಸಿಕೊಂಡಿದ್ದಾರೆ; ಚಿಕಿತ್ಸೆಗಿಂತಲೂ ರೋಗವನ್ನು ನಿಯಂತ್ರಿಸುವುದೇ ಹೆಚ್ಚು ಪರಿಣಾಮಕಾರಿ ಎನ್ನುವುದನ್ನು ಮರೆತಿದ್ದಾರೆ. ಕಲವು ದಿನಗಳ ಅವಧಿಯಲ್ಲಿ 7 ಸಾವಿರಕ್ಕೂ ಹೆಚ್ಚು ಡೆಂಗಿ ಪ್ರಕರಣಗಳು ರಾಜ್ಯದಲ್ಲಿ ವರದಿಯಾಗಿವೆ; 4 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಬೆಂಗಳೂರಿನಿಂದಲೇ ವರದಿಯಾಗಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ವಿಶ್ವದ ಮೂರನೇ ಒಂದರಷ್ಟು ಡೆಂಗಿ ಪ್ರಕರಣಗಳು ಭಾರತದಲ್ಲಿ ವರದಿಯಾಗುತ್ತಿದ್ದು, ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಕೆಲವು ದಿನಗಳಿಂದ ಡೆಂಗಿ ಪ್ರಕರಣಗಳ ಸಂಖ್ಯೆ ಏರುಮುಖವಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಹೀಗೆ ಒಂದೇ ಸಮನೆ ಡೆಂಗಿ ಪ್ರಕರಣಗಳು ಏರುತ್ತಿದ್ದರೂ ಆರೋಗ್ಯ ಇಲಾಖೆ ಮತ್ತು ಬಿಬಿಎಂಪಿ ಇನ್ನೂ ಪೂರ್ಣಪ್ರಮಾಣದಲ್ಲಿ ಎಚ್ಚರಗೊಂಡಂತಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ ಜುಲೈನಲ್ಲಿ 1,649 ಹಾಗೂ ಆಗಸ್ಟ್‌ನಲ್ಲಿ 1,589 ಪ್ರಕರಣಗಳು ಪತ್ತೆಯಾಗಿವೆ. 2022ರಲ್ಲಿ ಒಟ್ಟು 9,529 ಡೆಂಗಿ ಪ್ರಕರಣಗಳು ದಾಖಲಾಗಿದ್ದು, ಜ್ವರದ ತೀವ್ರ ಬಾಧೆಯಿಂದಾಗಿ 9 ಮಂದಿ ಮರಣ ಹೊಂದಿದ್ದರು. 2023ರಲ್ಲಿ ಸೆಪ್ಟೆಂಬರ್ ಮೊದಲ ವಾರದ ವೇಳೆಗಾಗಲೇ 8,563 ಪ್ರಕರಣಗಳು ವರದಿಯಾಗಿದ್ದು, ಅವುಗಳಲ್ಲಿ ಅರ್ಧಕ್ಕೂ ಹೆಚ್ಚು ಬಿಬಿಎಂಪಿ ವ್ಯಾಪ್ತಿಯಲ್ಲಿ ಪತ್ತೆಯಾಗಿವೆ. ಮೈಸೂರು, ಉಡುಪಿ, ದಕ್ಷಿಣ ಕನ್ನಡ, ಕಲಬುರಗಿ, ವಿಜಯಪುರ, ಚಿತ್ರದುರ್ಗ, ಬೆಳಗಾವಿ, ಹಾಸನ, ದಾವಣಗೆರೆ, ತುಮಕೂರು, ಧಾರವಾಡ ಹಾಗೂ ಕೊಡಗು ಜಿಲ್ಲೆಗಳಲ್ಲಿ ಡೆಂಗಿ ಬಾಧೆ ಹೆಚ್ಚಾಗಿ ಕಾಣಿಸಿಕೊಂಡಿದೆ.

ಜನಸಾಮಾನ್ಯರ ಆರೋಗ್ಯದ ಬಗ್ಗೆ ಕಾಳಜಿಯಿಲ್ಲದ ಆಡಳಿತಯಂತ್ರಕ್ಕೆ ಚುರುಕು ಮುಟ್ಟಿಸುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ

ಕೋವಿಡ್–19 ವ್ಯಾಪಕವಾಗಿ ಹರಡಿದ್ದ ಸಂದರ್ಭದಲ್ಲಿಯೂ ಆರೋಗ್ಯ ಇಲಾಖೆ ಹಾಗೂ ಬಿಬಿಎಂಪಿಯ ವೈಫಲ್ಯ ಸ್ಪಷ್ಟವಾಗಿ ಗೋಚರಿಸಿತ್ತು. ಕೋವಿಡ್‌ನಿಂದ ಸರ್ಕಾರಿ ಸಂಸ್ಥೆಗಳು ಪಾಠ ಕಲಿತಿಲ್ಲ ಎನ್ನುವುದನ್ನು ಈಗಿನ ಡೆಂಗಿ ವಿಕೋಪ ಹೇಳುವಂತಿದೆ. ಮಳೆ ನೀರು ನಿಲ್ಲುವ ಸ್ಥಳಗಳಲ್ಲಿ ಸೊಳ್ಳೆಗಳ ಸಂತತಿ ಉಲ್ಬಣಗೊಂಡು ಡೆಂಗಿ ವ್ಯಾಪಕವಾಗುತ್ತಿದೆ. ರಸ್ತೆಗಳಲ್ಲಿ ಮಳೆ ನೀರು ನಿಲ್ಲುತ್ತಿದ್ದರೆ ಅದರ ಹೊಣೆ ಯಾರದು? ಮಳೆ ನೀರು ನಿಲ್ಲದಂತೆ ಮುನ್ನೆಚ್ಚರಿಕೆ ವಹಿಸಲು ಯಾಕೆ ಸಾಧ್ಯವಾಗುತ್ತಿಲ್ಲ? ಈ ಪ್ರಶ್ನೆಗಳು ಸಾರ್ವಜನಿಕವಾಗಿದ್ದರೂ ಬಿಬಿಎಂಪಿ ಅಧಿಕಾರಿಗಳು ಉತ್ತರಿಸುತ್ತಿಲ್ಲ. ಬೆಂಗಳೂರಿನಂತೆ ಡೆಂಗಿ ಪ್ರಕರಣ ರಾಜಧಾನಿ ಎನ್ನುವ ಕುಖ್ಯಾತಿ ಪಡೆಯಲು ಸ್ಪರ್ಧೆ ನಡೆಸುತ್ತಿರುವಂತಿದೆ. ಡೆಂಗಿ ಪ್ರಕರಣಗಳ ಸಂಖ್ಯೆಯನ್ನು ಕಲೆ ಹಾಕುವುದಕ್ಕೆ ತನ್ನ ಕೆಲಸ ಎಂದು ಬಿಬಿಎಂಪಿ ಭಾವಿಸಿದಂತಿದೆ. ಡೆಂಗಿ ಪ್ರಕರಣಗಳ ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾದ ಪ್ರದೇಶಗಳಲ್ಲಿ ವಿಶೇಷ ನಿಗಾ ವಹಿಸಬೇಕು ಎಂದು ಬಿಬಿಎಂಪಿ ಹೇಳಿಕೊಂಡಿದೆ. ಚರಂಡಿ ಹಾಗೂ ಮೋರಿಗಳನ್ನು ಸುವ್ಯವಸ್ಥೆಯಲ್ಲಿಡುವ ವಿಫಲವಾಗಿರುವ ಪಾಲಿಕೆ, ಸೊಳ್ಳೆಗಳ ಸಂತಾನೋತ್ಪತ್ತಿಗೆ ಪೂರಕ ವಾತಾವರಣವನ್ನು ಸೃಷ್ಟಿಸಿದೆ. ಪಾಲಿಕೆಯಂತೆಯೇ ಆರೋಗ್ಯ ಇಲಾಖೆಯಲ್ಲಿಯೂ ಚಿಕಿತ್ಸೆಯ ಸಂದರ್ಭಗಳನ್ನು ಎದುರಿಸುವ ಬಗ್ಗೆ ಯೋಜನೆಗಳಿದ್ದಂತಿಲ್ಲ. ಡೆಂಗಿ ಬಾಧಿತರು ಆಸ್ಪತ್ರೆ ವೆಚ್ಚ ಭರಿಸಲು ಒದ್ದಾಡುತ್ತಿದ್ದಾರೆ. ಆಸ್ಪತ್ರೆಗಳ ಮುಖ್ಯಾಂಗಣಗಳ ಬಿಲ್‌ ಹೆಚ್ಚು, ಸ್ವಯಂ ಚಿಕಿತ್ಸಾಕ್ರಮಗಳಿಗೆ ಕೆಲವರು ಮುಂದಾಗುತ್ತಿರುವುದು ಸ್ಥಿತಿಯನ್ನು ವೈದ್ಯಕೀಯ ವ್ಯವಸ್ಥೆಯ ಸೃಷ್ಟಿಸಿದೆ. 'ಡೆಂಗಿ ಬಗ್ಗೆ ಭಯ ಬೇಡ, ಜಾಗ್ರತೆ ಇರಲಿ' ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಜನರಿಗೆ ನಿಜವಾದ ಭಯ ಇರುವುದು ಜನಸಾಮಾನ್ಯರ ಆರೋಗ್ಯದ ಬಗ್ಗೆ ಕಾಳಜಿಯಿಲ್ಲದ ಆಡಳಿತಯಂತ್ರದ ಬಗ್ಗೆ. ಜಡ್ಡುಗಟ್ಟಿದ ವ್ಯವಸ್ಥೆಗೆ ಚುರುಕು ಮುಟ್ಟಿಸುವ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಸೊಳ್ಳೆಗಳ ನಿಯಂತ್ರಣ ಸೇರಿದಂತೆ ಪರಿಸರವನ್ನು ಚೊಕ್ಕಟವಾಗಿಡುವ ಆಗತ್ಯದ ಕುರಿತು ಆರೋಗ್ಯ ಇಲಾಖೆ ಮತ್ತು ಸ್ಥಳೀಯ ಆಡಳಿತಗಳು ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸವನ್ನು ಆಂದೋಲನದ ರೂಪದಲ್ಲಿ ಕೈಗೊಳ್ಳಬೇಕಾಗಿದೆ. ಡೆಂಗಿ ನಿಯಂತ್ರಣಕ್ಕೆ ತಂತ್ರಜ್ಞಾನದ ನೆರವು ಪಡೆಯುವ ಸರ್ಕಾರದ ಉದ್ದೇಶ ಒಳ್ಳೆಯದು. ಈ ದಿಸೆಯಲ್ಲಿ, ಡೆಂಗಿ ರೋಗ ನಿಯಂತ್ರಣ ಹಾಗೂ ನಿರ್ವಹಣೆಗೆ ಆರೋಗ್ಯ ಇಲಾಖೆ ಮತ್ತು ಬಿಬಿಎಂಪಿಯು ಡ್ಯಾಶ್‌ಬೋರ್ಡ್ ಹಾಗೂ ಮೊಬೈಲ್ ಅಪ್ಲಿಕೇಷನ್ ಅಭಿವೃದ್ಧಿಪಡಿಸಿವೆ. ಈ ತಂತ್ರಜ್ಞಾನದಿಂದ ರೋಗದ ಮುನ್ಸೂಚನೆ ಮತ್ತು ವಿಶ್ಲೇಷಣೆ ಸಾಧ್ಯವಾಗಲಿದೆ ಎಂದು ಹೇಳಲಾಗಿದೆ. ತಂತ್ರಜ್ಞಾನ ಎಷ್ಟೇ ಅತ್ಯುತ್ತಮ ವಾಗಿದ್ದರೂ, ಅಧಿಕಾರಿಗಳ ಜಡತ್ವ ಏನನ್ನು ಬೇಕಾದರೂ ತುಕ್ಕುಹಿಡಿಯುವಂತೆ ಮಾಡಬಲ್ಲದು ಎನ್ನುವುದನ್ನು ಸರ್ಕಾರ ನೆನಪಿನಲ್ಲಿಟ್ಟುಕೊಳ್ಳಬೇಕು.

ದಿನದ ಟ್ವೀಟ್

ಹೀಗಿದೆ ನಮ್ಮ ವ್ಯವಸ್ಥೆ!

ಬ್ರಿಜ್‌ಭೂಷಣ್ ಶರಣ್ ಸಿಂಗ್ ಇನ್ನೂ ಸಂಸದರಾಗಿದ್ದಾರೆ, ಈಗಲೂ ಭಾರತ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಅಧ್ಯಕ್ಷರಾಗಿದ್ದಾರೆ ಮತ್ತು ತಮ್ಮ ಇಷ್ಟಾನುಸಾರ ನಡೆದುಕೊಳ್ಳಲು ಅನುವಾಗುವಂತೆ ಇನ್ನೂ ಅಧಿಕಾರದಲ್ಲಿ ಮುಂದುವರಿದಿದ್ದಾರೆ. ರಾಷ್ಟ್ರಧ್ವಜದಡಿ ಆಡುವುದಕ್ಕೆ ನಮ್ಮ ಕುಸ್ತಿಪಟುಗಳಿಗೆ ಅವಕಾಶ ನೀಡದಿರುವುದರ ನಡುವೆಯೇ ಇರುವ ವಾಸ್ತವ ಸಂಗತಿ ಇದು. ಅಷ್ಟೇ ಅಲ್ಲದೆ, ಇನ್ನೂ ಗಂಭೀರವಾದ ಆರೋಪಗಳು ಅವರ ಮೇಲಿವೆ. ನಾಚಿಕೆಗೇಡು!

(ಚುಂಬನ ಪ್ರಕರಣಕ್ಕೆ ಸಂಬಂಧಿಸಿ ಸ್ಪೇನ್‌ನ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಲೂಯಿಸ್ ರುಬಿಯೇಲ್ಸ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವುದಕ್ಕೆ ಪ್ರತಿಕ್ರಿಯೆ)

ಸಂಗೀತಾ, ಲೇಖಕಿ

ಕಿಡಿನುಡಿ

ಕೆಲವರು ಮನುಷ್ಯರ ನಡುವೆ ಹುಳಿ ಹಿಂಡುವ ಪ್ರಯತ್ನ ಮಾಡುತ್ತಿದ್ದು, ಅದಕ್ಕೆ ಬಲಿಯಾಗಬಾರದು. ಮನುಷ್ಯ ಮನುಷ್ಯನನ್ನು ಪ್ರೀತಿಸುವುದೇ ಧರ್ಮ. ಯಾವುದರಲ್ಲಿ ದಯೆ, ಪ್ರೀತಿ, ಕರುಣೆ ಇರುವುದಿಲ್ಲವೋ ಅದು ಧರ್ಮವಲ್ಲ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 12-9-1998

• ಕೆಪಿಸಿಸಿ ಗಾತ್ರಕ್ಕೆ ಸೋನಿಯಾ ಕತ್ತರಿ ಸಂಭವ

ನವದೆಹಲಿ, ಸೆ. 11– 'ಜಂಬೋಜೆಟ್' ಕೆಪಿಸಿಸಿ ಪದಾಧಿಕಾರಿಗಳ ಮತ್ತು ಕಾರ್ಯನಿರ್ವಾಹಕ ಸಮಿತಿಯ ಗಾತ್ರದ ಬಗೆಗೆ ಅಸಮಾಧಾನ ಮತ್ತು ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಸಮಿತಿಯ ಗಾತ್ರವನ್ನು ಕಡಿಮೆ ಮಾಡುವ ಇಂಗಿತ ನೀಡಿದ್ದಾರೆ.

ಕಳೆದ ವಾರ ರಚನೆಗೊಂಡ ಕೆಪಿಸಿಸಿ ಪಟ್ಟಿಯ ಬಗೆಗೆ ಸೋನಿಯಾ ಗಾಂಧಿ ಅವರಿಗೆ ಈಗಾಗಲೇ ದೂರುಗಳು ಬರುತ್ತಿದ್ದು, ನಿನ್ನೆ ವಿಧಾನ ಪರಿಷತ್ತಿನ ಹಿರಿಯ ಕಾಂಗ್ರೆಸ್ ಸದಸ್ಯ ಟಿ.ಎನ್.ನರಸಿಂಹಮೂರ್ತಿ ಖುದ್ದು ಭೇಟಿಯಾಗಿ ಅತೃಪ್ತಿ ವ್ಯಕ್ತಪಡಿಸಿದ್ದಾರೆ. ಇಂದು ಕೆಪಿಸಿಸಿ ಮಾಜಿ ಅಧ್ಯಕ್ಷ ಮತ್ತು ವಿಧಾನ ಪರಿಷತ್ತಿನ ಮತ್ತೊಬ್ಬ ಸದಸ್ಯ ಕೆ.ಮಲ್ಲಣ್ಣ, ಸೋನಿಯಾ ಅವರನ್ನು ಭೇಟಿಯಾಗಿದ್ದಾರೆ.

• ರಾಜ್ಯ ದಳ ಪುನರ್ರಚನೆ 105 ಮಂದಿಗೆ ಸ್ಥಾನ

ಬೆಂಗಳೂರು, ಸೆ. 11– ರಾಜ್ಯ ಜನತಾದಳದ ಕಾರ್ಯಕಾರಿ ಸಮಿತಿಯನ್ನು ಪುನರ್ರಚಿಸಲಾಗಿದ್ದು 47 ಮಂದಿ ಪದಾಧಿಕಾರಿಗಳೂ ಸೇರಿದಂತೆ ಒಟ್ಟು 105 ಮಂದಿ ಸದಸ್ಯರು ಪುನರ್ರಚಿತ ಸಮಿತಿಯಲ್ಲಿದ್ದಾರೆ.

ಮಾಜಿ ಸಚಿವ ಶಿವಾನಂದ ಕೌಜಲಗಿ ಅವರನ್ನು ಹಿರಿಯ ಉಪಾಧ್ಯಕ್ಷರನ್ನಾಗಿ, ಶಾಸಕ ಕೆ.ಎಚ್.ಶ್ರೀನಿವಾಸ್ ಅವರನ್ನು ಪಕ್ಷದ ವಕ್ತಾರರನ್ನಾಗಿ, ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರ ಸೋದರ ಎಸ್.ಎಚ್.ಪಟೇಲ್ ಅವರನ್ನು ನೀತಿ ಮತ್ತು ಕಾರ್ಯಕ್ರಮ ಸಮಿತಿಯ ಸಂಚಾಲಕರನ್ನಾಗಿ ನೇಮಿಸಲಾಗಿದೆ. ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಸಂಸದೀಯ ಮಂಡಲಿಯ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 12-9-1973

• ಹೆಣ್ಣುಮಕ್ಕಳ ಮರಣ: ತನಿಖೆ ಭರವಸೆ

ಬೆಂಗಳೂರು, ಸೆ. 11– ಮೈಸೂರು ಸರ್ಟಿಫೈಡ್ ಶಾಲೆಯಲ್ಲಿ ಇತ್ತೀಚೆಗೆ ಮೂವರು ಅನಾಥ ಹೆಣ್ಣುಮಕ್ಕಳ ಮರಣ ಮತ್ತು ಸ್ಟೇಟ್ ಹೋಂನ ಒಬ್ಬ ಯುವತಿಯು ಗರ್ಭಿಣಿ ಯಾಗಿರುವ ಬಗ್ಗೆ ಸರ್ಕಾರ ನಿಷ್ಪಕ್ಷಪಾತವಾದ ತನಿಖೆ ನಡೆಸುವುದೆಂದು ಸಮಾಜ ಕಲ್ಯಾಣ ಸಚಿವ ಶ್ರೀ ಎಂ.ಮಲ್ಲಿಕಾರ್ಜುನಸ್ವಾಮಿ ಇಂದು ವಿಧಾನಸಭೆಯಲ್ಲಿ ಭರವಸೆ ನೀಡಿದರು.

ಹಣಕಾಸು ರಾಜ್ಯ ಸಚಿವರ ಮಾಜಿ ಆಪ್ತ ಕಾರ್ಯದರ್ಶಿ ಶ್ರೀ ಜಿ.ಎಲ್.ಸಿಂಗ್ ಯುವತಿಯು ಗರ್ಭವತಿಯಾಗಲು ಕಾರಣ ಎಂದು ಆ ಯುವತಿ ಆಪಾದಿಸಿದ್ದಾಳೆಂದು ಸಚಿವರು ಹೇಳಿದರು.

• ಹೇಬಿಯಸ್ ಕಾರ್ಪಸ್ ರಿಟ್ ವಿಚಾರಣೆಗೆ ಬಂಧಿತ ವ್ಯಕ್ತಿಯನ್ನು ಹಾಜರು ಮಾಡುವುದು ಅನಗತ್ಯ

ನವದೆಹಲಿ, ಸೆ. 11 – ರಾಜ್ಯಾಂಗದ 32ನೇ ವಿಧಿಯ ಅನ್ವಯ ತನಗೆ ಸಲ್ಲಿಸುವ ಹೇಬಿಯಸ್ ಕಾರ್ಪಸ್ ರಿಟ್ ಅರ್ಜಿ ವಿಚಾರಣೆ ವೇಳೆ, ಸ್ಥಾನಬದ್ಧತೆಯಲ್ಲಿ ಇರಿಸಲಾಗಿರುವ ವ್ಯಕ್ತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಬೇಕಾದ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ರೂಲಿಂಗ್ ನೀಡಿತು.

ವೈವಿಧ್ಯಮಯ ಪಕ್ಷಿ ಪ್ರಭೇದಗಳನ್ನು ರಕ್ಷಿಸಲು ಬೇಕು ತೀವ್ರ ಪ್ರಯತ್ನ

ಅವನತಿಯತ್ತ ಪಕ್ಷಿ ಸಂಕುಲ

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಭಾರತದ ಪಕ್ಷಿ ಸಂತತಿಯ ಸ್ಥಿತಿ ಕುರಿತಾದ ಅಧ್ಯಯನ ವರದಿ ಆಗಸ್ಟ್ ಅಂತ್ಯದಲ್ಲಿ ಬಿಡುಗಡೆಯಾಗಿದೆ. ಮೌಲ್ಯಮಾಪನ ಮಾಡಲಾದ ದೇಶದ ಒಟ್ಟು 942 ಪಕ್ಷಿ ಪ್ರಭೇದಗಳ ಪೈಕಿ ದೀರ್ಘಾವಧಿ ಬದಲಾವಣೆಯ ಅಧ್ಯಯನಕ್ಕೆ ಒಳಪಡಿಸಿದ 338 ಪಕ್ಷಿ ಪ್ರಭೇದಗಳ ಸಂಖ್ಯೆಯು ಶೇ 60ರಷ್ಟು ಕಡಿಮೆಯಾಗಿದೆ ಎಂಬ ಆತಂಕಕಾರಿ ಅಂಶ ವರದಿಯಲ್ಲಿದೆ. ಭಾರತದಲ್ಲಿ ದಾಖಲಾಗಿರುವ 1,350 ಪಕ್ಷಿ ಪ್ರಭೇದಗಳಲ್ಲಿ ಬಹಳಷ್ಟು ಪ್ರಭೇದಗಳು ಹಾಗೂ ಅವುಗಳ ಸಂಖ್ಯೆಯು ತೀವ್ರಗತಿಯಲ್ಲಿ ಇಳಿಮುಖವಾಗುತ್ತಿವೆ. ಇಡೀ ದೇಶದಲ್ಲಿ ಪಕ್ಷಿಗಳ ಸ್ಥಿತಿ ಗಂಭೀರ ಮಟ್ಟ ತಲುಪಿದೆಯೆಂದು ವರದಿ ಹೇಳಿದೆ.

ಉತ್ತರ ಅಮೆರಿಕಕ್ಕೆ ಮಾತ್ರ ಸೀಮಿತವಾಗಿದ್ದ, ಕೋಟ್ಯಂತರ ಸಂಖ್ಯೆಯಲ್ಲಿದ್ದ ಪ್ಯಾಸೆಂಜರ್ ಪಿಜನ್ ಅಳಿದುಹೋಗಲು ಮುಖ್ಯ ಕಾರಣ ಮಾನವ ಬೇಟೆ. ಹಾಗೆಯೇ ಮಾರಿಷಸ್ ದ್ವೀಪದ ಡೋಡೋ ಪಕ್ಷಿಗಳು ಅಳಿಯಲು ನೇರವಾಗಿ ಮಾನವನೇ ಕಾರಣವೆಂದು ಇತಿಹಾಸದಲ್ಲಿ ದಾಖಲಾಗಿದೆ. ಹೀಗೆ ಒಂದರ ಹಿಂದೆ ಒಂದು ಪಕ್ಷಿ ಸಂತತಿ ಸಂಖ್ಯೆ ಕಡಿಮೆಯಾಗುವುದು ಅಥವಾ ಅಳಿದುಹೋಗುತ್ತಿರುವುದು ತೀವ್ರ ಕಳವಳಕಾರಿ.

ನವಿಲಿನ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ವರದಿ ಗುರುತಿಸಿದೆ. ಆದರೆ ಇದು ಸಂತಸದ ವಿಷಯವೇನಲ್ಲ. ರಾಷ್ಟ್ರಪಕ್ಷಿ ಎಂಬ ಕಾರಣಕ್ಕೆ ಅವುಗಳನ್ನು ಬೇಟೆಯಾಡುವುದು ಗಣನೀಯವಾಗಿ ಕಡಿಮೆಯಾಗಿದೆ ಎಂಬ ಅಂಶವೊಂದೇ ಅವುಗಳ ಹೆಚ್ಚಳಕ್ಕೆ ಕಾರಣವಾಗಿಲ್ಲ. ಮಲೆನಾಡಿನಲ್ಲಿ ಹೆಚ್ಚುತ್ತಿರುವ ನವಿಲಿನ ಸಂಖ್ಯೆಯು ಅರಣ್ಯವು ವ್ಯಾಪಕವಾಗಿ ನಾಶ ಆಗುತ್ತಿರುವುದನ್ನು ಸೂಚಿಸುತ್ತದೆ. ಅರಣ್ಯದಲ್ಲಿನ ನವಿಲುಗಳು ತಮ್ಮ ಅಗಲವಾದ ರೆಕ್ಕೆಯ ಕಾರಣಕ್ಕೆ ಸುಲಭವಾಗಿ ಬೇಟೆಪ್ರಾಣಿಗಳಿಗೆ ಬಲಿಯಾಗುತ್ತವೆ. ಮರಗಳ ದಟ್ಟಣೆ ಕಾಣೆಯಾದಂತೆ, ಬೇಟೆಪ್ರಾಣಿಗಳ ಸಂಖ್ಯೆಯೂ ಕಡಿಮೆಯಾಗುತ್ತದೆ. ಈ ಪ್ರಕ್ರಿಯೆ ಸ್ವಾಭಾವಿಕವಾಗಿ ನವಿಲಿನ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಪೂರಕ ಪಾತ್ರ ವಹಿಸುತ್ತದೆ.

ರಾಷ್ಟ್ರಪಕ್ಷಿಯ ಸಂಖ್ಯೆ ತೀವ್ರಗತಿಯಲ್ಲಿ ಏರುತ್ತಿದ್ದರೆ, ಮುಂದೆ ಅದು ಆಹಾರಭದ್ರತೆಗೆ ಧಕ್ಕೆ ತರಬಹುದಾದ ಅಪಾಯವಿದೆ. ಹೇಗೆಂದರೆ, ನವಿಲುಗಳು ಮಿಶ್ರಾಹಾರಿಗಳಾದ್ದರಿಂದ, ರೈತನ ಬೆಳೆಗಳಾದ ಭತ್ತ, ಬಾಳೆಯಂತಹವುಗಳ ಜೊತೆಯಲ್ಲಿ ಇಲಿಗಳನ್ನು ಭಕ್ಷಿಸುವ ಉರಗ ಸಂತತಿಯನ್ನೂ ಇಲ್ಲವಾಗಿಸುತ್ತವೆ. ಇಲಿಗಳಿಗೆ ನೈಸರ್ಗಿಕ ಶತ್ರುಗಳಾದ ಉರಗಗಳ ಸಂತತಿ ಕುಂಠಿತವಾದಲ್ಲಿ, ಮತ್ತೆ ಇಲಿಗಳ ಸಂಖ್ಯೆ ದಿಢೀರಾಗಿ ಹೆಚ್ಚುತ್ತದೆ. ಭಾರತದ ಹೊಲಗಳಲ್ಲಿ ಅತಿಹೆಚ್ಚು ಬೆಳೆನಾಶ ಮಾಡುವ ಪ್ರಭೇದಗಳಲ್ಲಿ ಇಲಿ, ಹೆಗ್ಗಣಗಳಿಗೆ ಪ್ರಥಮ ಸ್ಥಾನವಿದೆ. ಹೆಚ್ಚಾಗಿ ಇಲಿ, ಹೆಗ್ಗಣಗಳನ್ನೇ ಅವಲಂಬಿಸಿ ಬದುಕುವ ನಿಶಾಚರ ಪಕ್ಷಿಯಾದ ಗೂಬೆಗಳ ಸಂಖ್ಯೆಯೂ ಕಡಿಮೆಯಾಗಿದೆ.

ಅಧ್ಯಯನ ವರದಿಯು ಪಕ್ಷಿಗಳ ಸಂಖ್ಯೆ ಕುಸಿತದ ಕಾರಣಗಳಿಗೆ ಹೆಚ್ಚು ಒತ್ತು ನೀಡಿಲ್ಲವಾದರೂ, ಕೆಲವು ಅಂಶಗಳನ್ನು ಗುರುತಿಸಿದೆ. ಅದರಲ್ಲಿ ಮುಖ್ಯವಾಗಿ, ಪಕ್ಷಿಗಳ ಆವಾಸಸ್ಥಾನ ನಾಶ, ನಗರೀಕರಣ, ಕೃಷಿಭೂಮಿ ವಿಸ್ತರಣೆ, ಅರಣ್ಯ ನಾಶ, ಹೆದ್ದಾರಿ, ರೈಲುಮಾರ್ಗಗಳ ವಿಸ್ತರಣೆ, ಹೊಸ ರಸ್ತೆ ನಿರ್ಮಾಣದಂತಹ ಕಾರಣಗಳಿಂದ ಜಾಗತಿಕ ಮಟ್ಟದಲ್ಲಷ್ಟೇ ಅಲ್ಲ ಸ್ಥಳೀಯವಾಗಿಯೂ ಪಕ್ಷಿಗಳ ಆವಾಸಸ್ಥಾನಗಳು ನಾಶವಾಗುತ್ತಿವೆ. ಹವಾಗುಣ ಬದಲಾವಣೆಯಿಂದಾಗಿ, ಪಕ್ಷಿಗಳಿಗೆ ಲಭ್ಯವಾಗುವ ಆಹಾರದಲ್ಲಿ ವ್ಯತ್ಯಯವಾಗುತ್ತಿದ್ದು, ಹಕ್ಕಿಗಳ ವಲಸೆ ಮಾದರಿಯಲ್ಲಿಯೂ ಏರುಪೇರಾಗಿದೆ. ಜೊತೆಗೆ ಇದೇ ಕಾರಣವು ವಲಸೆ ಪಕ್ಷಿಗಳ ಸಂತಾನೋತ್ಪತ್ತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ.

ಭೂಬಿಸಿ ಏರಿಕೆ ಹಾಗೂ ಹವಾಮಾನ ವೈಪರೀತ್ಯವು ಪಕ್ಷಿಗಳ ಜೀವನಕ್ರಮಕ್ಕೆ ತೀವ್ರವಾದ ಹಾನಿಯುಂಟು ಮಾಡುತ್ತಿವೆ. ಕೀಟನಾಶಕಗಳ ಬಳಕೆಯಿಂದಾಗಿ, ಕೀಟಗಳನ್ನೇ ಅವಲಂಬಿಸಿ ಬದುಕುವ ಪಕ್ಷಿಪ್ರಭೇದಗಳಿಗೆ ನೈಸರ್ಗಿಕ ಆಹಾರದ ಅಭಾವವಾಗುತ್ತಿದೆ. ಇದೇ ಕೀಟನಾಶಕಗಳು ನದಿ, ಕೆರೆ ಕುಂಟೆಗಳಿಗೆ ಸೇರಿ, ಅವು ರಾಸಾಯನಿಕ ಮಾಲಿನ್ಯದ ಮಡುಗಳಾಗುತ್ತಿದ್ದು, ಜಲಚರ ಪಕ್ಷಿಗಳಿಗೆ ಮುಳುವಾಗಿವೆ. ದೇಶದ ಕೆಲವು ಭಾಗಗಳಲ್ಲಿ ಪಕ್ಷಿಗಳ ಬೇಟೆ ನಿರಂತರವಾಗಿ ನಡೆಯುತ್ತಿದೆ. ಜೊತೆಗೆ ವನ್ಯಪಕ್ಷಿಗಳನ್ನು ಸಾಕುವ ಉದ್ದೇಶಕ್ಕಾಗಿ ಹಿಡಿದು ಮಾರುವ ಪ್ರಕ್ರಿಯೆಯಿಂದಾಗಿ ಕೆಲವು ಪ್ರಭೇದಗಳು ವಿನಾಶದಂಚಿಗೆ ತಲುಪಿವೆ. ದೊಡ್ಡ ಕಟ್ಟಡಗಳಲ್ಲಿ ಅಳವಡಿಸುವ ಬೃಹತ್ ಗಾಜುಗಳು ನಿತ್ಯ ಸಾವಿರಾರು ಪಕ್ಷಿಗಳಿಗೆ ಅದರಲ್ಲೂ ವಲಸೆ ಪಕ್ಷಿಗಳಿಗೆ ಮಾರಕವಾಗಿವೆ.

ಹಕ್ಕಿಜ್ವರದಂತಹ ವೇಗವಾಗಿ ಹರಡುವ ರೋಗಗಳು ಹಲವು ಪಕ್ಷಿ ಪ್ರಭೇದಗಳ ವಿನಾಶಕ್ಕೆ ಕಾರಣವಾಗಿವೆ. ಪಕ್ಷಿಗಳ ಆವಾಸಸ್ಥಾನದ ಸೂಕ್ಷ್ಮಪ್ರದೇಶಗಳಲ್ಲಿ ಪರಿಸರ ಪ್ರವಾಸೋದ್ಯಮದ ಹೆಸರಿನಲ್ಲಿ ದಾಂದಲೆ ಮಾಡುವುದರಿಂದಾಗಿ ಮರಿಗಳಿಗೆ ಆಹಾರ ನೀಡುವ ಕ್ರಮದಲ್ಲಿ ವ್ಯತ್ಯಾಸವಾಗುತ್ತಿರುವುದು ಕೂಡ ಸಂತತಿ ಕಡಿಮೆಯಾಗಲು ಕಾರಣವಾಗುತ್ತಿದೆ. ಉದಾಹರಣೆಗೆ, ವಿಶ್ವಪ್ರಸಿದ್ಧ ಜೋಗವು ಬಹಳ ಅಪೂರ್ವವಾದ ಕಣಿವೆಯಾಗಿದ್ದು, ಈ ಕಣಿವೆಗೆ ಮಾತ್ರ ಸೀಮಿತವಾಗಿರುವ ಅನೇಕ ಪಕ್ಷಿ ಸಂತತಿಗಳಿವೆ.

ಪರಿಸರ ಪ್ರವಾಸೋದ್ಯಮದ ಹೆಸರಿನಲ್ಲಿ ಈಗ ಜೋಗದ ಕಣಿವೆಯಲ್ಲಿ ಸಾಹಸ ಕ್ರೀಡೆಯಾದ ಝಿಪ್ ಲೈನ್ ಅಳವಡಿಸಿದ್ದರಿಂದ, ಕಣಿವೆಯ ವಾಸಿಗಳಾದ ಗಿಡುಗ ಮತ್ತು ಅದರ ಆಹಾರವಾದ ಕಾಡುಪಾರಿವಾಳ, ಆಕಾಶಗುಬ್ಬಿ, ಬಾವಲಿಗಳ ನೆಲೆ ನಾಶವಾಗಿದೆ. ಜೋಗದ ಕಣಿವೆಗೆ ಅಡ್ಡಲಾಗಿ ಕೇಬಲ್ ಕಾರು ಅಳವಡಿಸಲು ಸರ್ಕಾರ ಮುಂದಾಗಿದ್ದು, ಈ ಕ್ರಮ ಇಲ್ಲಿನ ಅಪರೂಪದ ಪಕ್ಷಿಪ್ರಭೇದಗಳ ಅಳಿವಿಗೆ ಕಾರಣವಾಗಲಿದೆ. ಪಕ್ಷಿಗಳ ಮಾರ್ಗದಲ್ಲಿ ಅದರಲ್ಲೂ ವಲಸೆ ಪಕ್ಷಿಗಳ ಮಾರ್ಗದಲ್ಲಿ ಹೆಚ್ಚಾದ ಬೆಳಕಿನ ಮಾಲಿನ್ಯವು ಅವುಗಳ ದಿಕ್ಕುತಪ್ಪುವಂತೆ ಮಾಡುತ್ತಿದ್ದು, ಸಂತಾನೋತ್ಪತ್ತಿ ಗಮ್ಯವನ್ನು ತಲುಪಲು ಪಕ್ಷಿಗಳಿಗೆ ಸಾಧ್ಯವಾಗುತ್ತಿಲ್ಲ.

ಚಿಟ್ಟೆಗಿಂತ ಕೊಂಚ ಚಿಕ್ಕದಾದ ನಾಲ್ಕು ಜಾತಿಯ ಹೂಹಕ್ಕಿಗಳು ಮಲೆನಾಡಿನಲ್ಲಿವೆ. ದೊಡ್ಡ ಬೇಟೆ ಪಕ್ಷಿಗಳಿಂದ ಬಚಾವಾಗಿ ಉಳಿಯಲು ಈ ಚಿಕ್ಕ ಹಕ್ಕಿಗಳು ಜನವಸತಿ ಪ್ರದೇಶದ ಗಿಡಗಳೆಡೆಯಲ್ಲಿ ಜೇಡರಬಲೆ, ಹತ್ತಿ, ಮನುಷ್ಯರ ಕೂದಲು, ಒಣಗಿದ ಪಾಚಿ, ತೊಗಟೆ ಚೂರಿನಂತಹವನ್ನು ಬಳಸಿ ಚಿಕ್ಕ ಗಾತ್ರದ ಗೂಡನ್ನು ಕಟ್ಟುತ್ತವೆ. ಆದರೆ, ಇತ್ತೀಚಿನ ವಿದ್ಯಮಾನದಲ್ಲಿ ಈ ಚಿಕ್ಕ ಹಕ್ಕಿಗಳಿಗೆ ಗೂಡು ಕಟ್ಟುವ ಕಚ್ಚಾ ಸಾಮಗ್ರಿಗಳು ಲಭ್ಯವಾಗುತ್ತಿಲ್ಲ. ಅವು ಅನಿವಾರ್ಯವಾಗಿ ಮೆತ್ತನೆಯ ನೈಸರ್ಗಿಕ ವಸ್ತುಗಳ ಬದಲಿಗೆ ಪ್ಲಾಸ್ಟಿಕ್ ಚೂರುಗಳನ್ನು ಬಳಸಿ ಗೂಡು ಕಟ್ಟುತ್ತಿವೆ. ಈ ಗೂಡುಗಳಲ್ಲಿ ಮೊಟ್ಟೆಗಳು ನಿಲ್ಲದೇ ಜಾರಿ ಬಿದ್ದು ಒಡೆದು ಹೋಗುತ್ತಿದ್ದು, ಈ ಚಿಕ್ಕ ಹಕ್ಕಿಗಳು ತಮ್ಮ ಸಂತತಿಯನ್ನು ನಿಧಾನಕ್ಕೆ ಕಳೆದುಕೊಳ್ಳುತ್ತಿವೆ.

ಭತ್ತದ ಗದ್ದೆಗೆ ಬೆಂಕಿರೋಗದಂತಹ ರೋಗಗಳ ನಿವಾರಣೆಗಾಗಿ ಫಾಲಿಡಾಲ್ ಎಂಬ ವಿಷವನ್ನು ಈ ಹಿಂದೆ ಬಳಸಲು ಪ್ರಾರಂಭಿಸಿದ್ದರಿಂದ ಹಾಗೂ ಮಲೆನಾಡಿನಲ್ಲಿ ಅಡಿಕೆ, ಶುಂಠಿಯಂತಹ ವಾಣಿಜ್ಯ ಬೆಳೆಗಳಿಗೆ ವಿಪರೀತ ಬೆಲೆ ಬಂದದ್ದರಿಂದ ಭತ್ತ, ಕಬ್ಬು ಬೆಳೆಯುವುದನ್ನು ಬಿಟ್ಟ ಕಾರಣಕ್ಕೆ ಗೀಜಗಗಳು ಆಹಾರ ಹಾಗೂ ಗೂಡು ಕಟ್ಟುವ ಕಚ್ಚಾ ಸಾಮಗ್ರಿಗಳ ಅಭಾವಕ್ಕೆ ಸಿಲುಕಿ ಸ್ಥಳೀಯವಾಗಿ ವಿನಾಶಗೊಂಡವು. ಮನುಷ್ಯರ ಹೊರತಾಗಿ ಬಾಳಲಾರದ ಇನ್ನೊಂದು ಪುಟ್ಟ ಪಕ್ಷಿಯೆಂದರೆ ಅದು ಮನೆಗುಬ್ಬಿ. ಇಪ್ಪತ್ತೈದು ವರ್ಷಗಳಲ್ಲಿ ಅವುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಮೊಬೈಲ್ ಟವರ್‌ಗಳಿಂದ ಹೊರಸೂಸುವ ವಿಕಿರಣದ ಪ್ರಭಾವಕ್ಕೆ ಅವುಗಳ ಸಂತತಿ ಕಡಿಮೆಯಾಗಿದೆ ಎಂಬ ವಾದಕ್ಕೆ ಯಾವುದೇ ವೈಜ್ಞಾನಿಕ ಹಿನ್ನೆಲೆಯಿಲ್ಲದಿದ್ದರೂ ಆಧುನಿಕ ಮಾನವನ ಮನೆ ಕಟ್ಟುವ ವಿನ್ಯಾಸ ಬದಲಾಗಿದ್ದರಿಂದ, ಅವುಗಳ ನೆಲೆ ವ್ಯಾಪಕವಾಗಿ ನಾಶವಾಯಿತು.

ಕಾಡಿನ ಮರಗಳ ಕಾಂಡವನ್ನು ಕೊರೆಯುವ, ಪೀಡೆಕೀಟಗಳನ್ನು ಭಕ್ಷಿಸುವ ಅನೇಕ ಜಾತಿಯ ಮರಕುಟಿಕ ಹಕ್ಕಿಗಳು ತಮ್ಮ ವಂಶಾಭಿವೃದ್ಧಿಗಾಗಿ ಒಣಗಿದ ಮರದಲ್ಲಿ ಪೊಟರೆ ಕೊರೆದು, ಗೂಡು ಕಟ್ಟಿ ಮರಿ ಮಾಡುತ್ತವೆ. ಸಾಮಾನ್ಯರು ಹಾಗೂ ಅರಣ್ಯ ಇಲಾಖೆಯ ಲೆಕ್ಕದಲ್ಲಿ ಒಣಗಿದ ಮರಗಳು ನಿರುಪಯುಕ್ತವೆಂದು ಉರುವಲಿಗಾಗಿ ಕಡಿದು ಸಾಗಿಸುವ ಪ್ರಕ್ರಿಯೆಯಿಂದಾಗಿ ಮರಕುಟಿಕಗಳಿಗೆ ವಂಶಾಭಿವೃದ್ಧಿ ಮಾಡಲು ಸೂಕ್ತ ಒಣಗಿದ ಮರಗಳು ಕಾಡಿನಲ್ಲಿ ಲಭ್ಯವಿಲ್ಲ.

ಪಕ್ಷಿಗಳಿಲ್ಲದ ಪ್ರಪಂಚವನ್ನು ಊಹಿಸಿಕೊಳ್ಳುವುದು ಅಸಾಧ್ಯ. ಪ್ರಪಂಚದಲ್ಲಿ ಒಟ್ಟು ಹತ್ತು ಸಾವಿರಕ್ಕೂ ಹೆಚ್ಚು ಪ್ರಭೇದಗಳ 4 ಸಾವಿರ ಕೋಟಿಗೂ ಹೆಚ್ಚಿನ ಸಂಖ್ಯೆಯ ಪಕ್ಷಿಗಳಿವೆ ಎಂದು ಪಕ್ಷಿವಿಜ್ಞಾನಿಗಳು ಅಂದಾಜಿಸಿದ್ದಾರೆ. ಪರಾಗಸ್ಪರ್ಶ, ಬೀಜ ಪ್ರಸರಣ, ಪೀಡೆಕೀಟ ನಿಯಂತ್ರಣದಂತಹ ಹತ್ತಾರು ಬಗೆಯ ನೈಸರ್ಗಿಕ ಸೇವೆಗಳನ್ನು ನೀಡುವ ಹಕ್ಕಿಗಳ ಸಂಖ್ಯೆ ಕಡಿಮೆಯಾಗುತ್ತಿದೆಯೆಂದರೆ, ಅದು ಪಾರಿಸರಿಕ ಅಸಮತೋಲನದ ಅಪಾಯಕಾರಿ ದಿಕ್ಸೂಚಿ ಎಂದು ಹೇಳಬಹುದು.

ಚುರುಮುರಿ

ಮಂಡ್ಯ ಈಸ್ ಇಂಡ್ಯಾ!

• ಲಿಂಗರಾಜು ಡಿ.ಎಸ್.

ತುರೇಮಣೆ ಪಾರ್ಕಲ್ಲಿ ಹಳ್ಳೆಣ್ಣೆ ಮಕ ಮಾಡಿಕ್ಯಂದು ಕುಂತುದ್ರು. 'ಇದ್ಯಾಕ್ ಸಾ ಹಿಂಗೆ ಶಂಕೆ ಹಿಡಿದೋರ ಥರ ಕುಂತುದ್ದರಿ?' ಅಂತಂದೆ.

'ಮಂಡ್ಯೇದೋರ ಬ್ರ್ಯಾಂಡ್‌ಗೇ ಬೆಲೆ ಇಲ್ದಂಗಾಗೋತು ಕಲಾ!' ಅಂತ ಉಸೂರಂದ್ರು.

'ಏನಾತು?' ಅಂತಂದೆ.

'ನಾವು ಕಾಲಾದ ಕಾಲದಿಂದ ಹೋದಲ್ಲೆಲ್ಲಾ 'ಮಂಡ್ಯ ಈಸ್ ಇಂಡ್ಯಾ' ಅಂತ ಹೇಳಿಕಬತ್ತಿದ್ದೆವಲ್ಲೋ. ಈಗ ಇಂಡಿಯಾ ಹೆಸರು ಕೈಬುಟ್ಟು ಭಾರತ ಮಾಡ್ತರಂತೆ. ಇನ್ನು ನಾವು ಮಂಡ್ಯ ಈಸ್ ಭಾರತ ಅನ್ನಕ್ಕಾದದೇ?' ಅಂದ್ರು.

'ಹೆಸರಗೇನದೆ ಸಾ. ಇಂಗ್ಲೀಸಿನಗೆ ಇಂಡಿಯಾ ಆದರೆ ಹಿಂದಿ-ಕನ್ನಡದೇಲಿ ಭಾರತ ಆಯ್ತದೆ! ನಿಮ್ಮ ಮಕ ನೋಡಿದ್ರೆ ಹೆಸರು ತುರೇಮಣೆ ಅಂತ ಗೊತ್ತಾಯ್ತದಲ್ವಾ' ಅಂತ ಕಿಚಾಯಿಸಿದೆ.

'ಇನ್ನು ಮುಂದ್ಕೆ ಇಸ್ರೊ ಹೆಸರು ಬದಲಾಗಿ ಭಾರತ್ ರಿಸರ್ಚ್ ಆರ್ಗನೈಜೇಶನ್ ಅಂದರೆ ಬಸ್ರೋ ಆಯ್ತದೇನ್ರೋ!' ಅಂತು ಯಂಟಪ್ಪಣ್ಣ.

'ನೋಡಣ್ಣೈ, ಇಸ್ರೊಗೆ ನಾವೇನೂ ಲೇವಡಿ ಮಾಡಂಗುಲ್ಲ. ಅದು ಸೂರ್ಯನ ಮನೆ ಗೇಟು ಬಾಗಿಲುಗಂಟ ಹೋಗಿ ದೇಸದ ಮರ್ವಾದೆ ಹೆಚ್ಚಿಸ್ಯದೆ. ಈಗ ಬೇರೆ ಸುದ್ದಿ ಕೇಳಿಸ್ಕಳಿ, ತೆನೆ ಟೀಮು ಕಮಲ ಟೀಮು ಕೂಡಿಕೆ ಮಾಡಿಕ್ಯತಾವಂತೆ' ಅಂತಂದ ಚಂದ್ರು.

'ನೋಡ್ಲಾ, ರಾಜಕಾರಣದೇಲಿ ಯಾರೂ ಶತ್ರು-ಮಿತ್ರರಲ್ಲ. ಕೈ ಟೀಮು ಐದೊರ್ಸದ ಹಿಂದೆ 78 ಸೀಟು ತಗಂಡು ತೆನೆ ಟೀಮು ಜೊತೆಗೆ ಕಂಬ ಸುತ್ತಕೆ ಹೊಂಟರಲಿಲ್ಲವಾ? ರೈತರು ಮಳೆಬೆಳೆ ಇಲ್ದೆ ಬರಗೆಟ್ಟು 'ಬದುಕು ಸಾಕಾಗ್ಯದೆ ಶಿವನೇ' ಅಂತ ಉಸುರು ಹುಯ್ಯಿತಿರದು ಯಾರ ಕಿವಿಗೂ ತಲುಪ್ತನೇ ಇಲ್ಲ' ತುರೇಮಣೆ ದೊಡ್ಡ ಭಾಷಣ ಕೊಟ್ರು.

'ಜನಕ್ಕೆ ಒಳ್ಳೇದಾಗಬೇಕಾದ್ರೆ 'ನಾನು ಸಿಎಂ ಆಗ್ಬೇಕು' ಅಂತ ಕುಮಾರಣ್ಣ ಆರೋಗ್ಯ ಹದಗೆಟ್ಟು ಎದೆ ಚುಳ್ಳಂದ್ರೂ ನೀವಿಕ್ಯಂದು ಮೈತ್ರಿ ಮಾಡಿಕ್ಯತಿರದು!' ನಾವು ಕಾಫಿಯನ್ನ ಸೊರಕ್ ಅಂತ ಚಪ್ಪರಿಸಿ ಕುಡೀತಿದ್ರಿಂದ ಯಂಟಪ್ಪಣ್ಣನ ಮಾತಿಗೆ ಉತ್ತರ ಹೊಂಡಲಿಲ್ಲ.

ಸಂಗತ

3 ಪರೀಕ್ಷೆ ಮತ್ತು ಪರಿಣಾಮ

ಪರೀಕ್ಷಾ ವ್ಯವಸ್ಥೆಯಲ್ಲಿ ಬದಲಾವಣೆ ಜತೆಗೆ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಎದುರಿಸಲು ಸಮರ್ಥರಾಗುವ ಹಾಗೆ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವತ್ತಲೂ ಗಮನಹರಿಸಬೇಕಾಗಿದೆ

• ಡಾ. ಕೆ.ಎಸ್.ಚೈತ್ರಾ

ರಾಜ್ಯದಲ್ಲಿ ಇದೇ ಶೈಕ್ಷಣಿಕ ವರ್ಷದಿಂದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷಾ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಲು ಶಿಕ್ಷಣ ಇಲಾಖೆ ನಿರ್ಧರಿಸಿದೆ. ಪ್ರಸ್ತುತ ಪರೀಕ್ಷಾ ವ್ಯವಸ್ಥೆಯಲ್ಲಿದ್ದ ಒಂದು ವಾರ್ಷಿಕ ಮತ್ತು ಪೂರಕ ಪರೀಕ್ಷೆ ಅಥವಾ ಸಪ್ಲಿಮೆಂಟರಿಯ ಬದಲಾಗಿ, ವಾರ್ಷಿಕ ಪರೀಕ್ಷೆ ಒಂದು, ಎರಡು, ಮೂರು ಎಂದು ಮರುನಾಮಕರಣ ಮಾಡಲಾಗಿದೆ.

ಪ್ರತಿ ವಿದ್ಯಾರ್ಥಿಯ ಕಲಿಯುವ ವೇಗ ಮತ್ತು ವಿಧಾನ ಬೇರೆಯಾಗಿರುತ್ತದೆ. ಈ ರೀತಿ ಮೂರು ಪರೀಕ್ಷೆಗಳನ್ನು ನಡೆಸುವುದರಿಂದ ಅವರ ವೇಗಕ್ಕೆ ಸರಿಯಾಗಿ ಕಲಿಯುವಂತೆ ಮಾಡುವ ಮತ್ತು ಸಮಯದ ಮಿತಿಯಿಂದ ಉಂಟಾಗುವ ಒತ್ತಡ ಕಡಿಮೆ ಮಾಡುವ ಉದ್ದೇಶವನ್ನು ಇದು ಹೊಂದಿದೆ ಎಂದು ಇಲಾಖೆ ತಿಳಿಸಿದೆ. ವಿದ್ಯಾರ್ಥಿಗಳು ಮತ್ತು ಪೋಷಕರ ದೃಷ್ಟಿಯಿಂದ, ಬೇರೆ ಬೇರೆ ಹಂತಗಳಲ್ಲಿ ವರ್ಷಕ್ಕೆ ಮೂರು ಪರೀಕ್ಷೆ ನಡೆಸುವ ಈ ತೀರ್ಮಾನ ಸೂಕ್ತವಾದದ್ದು.

ಶಾಲೆಗೆ ಹೋಗುವ ಯಾವುದೇ ವಿದ್ಯಾರ್ಥಿಗೂ ಪರೀಕ್ಷೆ ಎಂದರೆ ಬಹು ದೊಡ್ಡ ಸವಾಲು. ವರ್ಷವಿಡೀ ಓದಿ, ಕಲಿತಿದ್ದನ್ನು ಎರಡು- ಮೂರು ಗಂಟೆಗಳ ಅವಧಿಯಲ್ಲಿ ನೆನಪಿಟ್ಟು ಹಾಳೆಗಿಳಿಸುವುದು, ಅದರ ಮೌಲ್ಯಮಾಪನದ ಮೇಲೆ ಅಂಕವನ್ನು ನಿರ್ಧರಿಸುವುದು ಪರೀಕ್ಷೆಯ ಕುರಿತ ಹೆದರಿಕೆ, ಒತ್ತಡವನ್ನು ಹೆಚ್ಚಿಸುತ್ತದೆ. ಒಂಬತ್ತನೇ ತರಗತಿಯವರೆಗೆ ಕಡ್ಡಾಯ ತೇರ್ಗಡೆ ಜಾರಿಯಲ್ಲಿದೆ. ಆದರೆ ಹತ್ತನೇ ತರಗತಿ ನಂತರ ಉತ್ತಮ ಕಾಲೇಜಿಗೆ ಪ್ರವೇಶ ಸಿಗಬೇಕೆಂದಾದಾಗ ಮತ್ತು ಪಿಯುಸಿ ನಂತರ ವೃತ್ತಿಪರ ಕೋರ್ಸ್, ಉನ್ನತ ಶಿಕ್ಷಣವನ್ನು ಆಯ್ಕೆ ಮಾಡಿಕೊಳ್ಳುವಾಗ ಒಂದೊಂದು ಅಂಕಕ್ಕೂ ಪರದಾಡುವ ಪರಿಸ್ಥಿತಿ ಇದೆ. ಹೀಗಾಗಿ, ಈ ಪರೀಕ್ಷೆಯ ಭಯ, ಪೋಷಕರ ಅತಿಯಾದ ನಿರೀಕ್ಷೆ, ಒಂದು ಪರೀಕ್ಷೆ ಹಾಳಾದರೆ ಜೀವನ ವ್ಯರ್ಥ ಎನ್ನುವ ಮನೋಭಾವ ಹದಿಹರೆಯದ ವಿದ್ಯಾರ್ಥಿಗಳಲ್ಲಿ ತೀವ್ರವಾದ ಮಾನಸಿಕ ಒತ್ತಡಕ್ಕೆ ಪ್ರಮುಖ ಕಾರಣ.

ಸಪ್ಲಿಮೆಂಟರಿ ಪರೀಕ್ಷೆಗಳು ಇದ್ದರೂ ಆ ಹೆಸರೇ ವಿದ್ಯಾರ್ಥಿಗಳಿಗೆ ಕೀಳರಿಮೆಯನ್ನು ಉಂಟು ಮಾಡುತ್ತದೆ. ಒಂದೊಮ್ಮೆ ತೇರ್ಗಡೆಯಾಗಿದ್ದರೂ ತಾವು ಬಯಸಿದಷ್ಟು ಅಂಕಗಳು ಬಾರದೇ ಇದ್ದಲ್ಲಿ ಮತ್ತೆ ಪ್ರಯತ್ನ ಮಾಡಲು ಬಹಳಷ್ಟು ಕಾಯಬೇಕು. ತಾವು ಓದಿದ್ದಕ್ಕೆ ಸರಿಯಾದ ಅಂಕಗಳು ಸಿಗದ ಅತೃಪ್ತ ಮನಸ್ಸಿನಿಂದಲೇ ಸಿಕ್ಕ ಕಾಲೇಜು ಮತ್ತು ಕೋರ್ಸಿಗೆ ವಿದ್ಯಾರ್ಥಿಗಳು ಅನಿವಾರ್ಯವಾಗಿ ಸೇರಬೇಕಿತ್ತು. ಈಗ ಮೊದಲ ಕಡ್ಡಾಯ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ದೊರೆತರೆ, ಮತ್ತೆರಡು ಅವಕಾಶಗಳು ಸಿಗುವುದರಿಂದ ವಿದ್ಯಾರ್ಥಿಗಳಿಗೆ ಕಷ್ಟಪಟ್ಟು ಓದಲು, ಉತ್ತಮ ಅಂಕ ಗಳಿಸಲು ಸಹಕಾರಿ. ಮೊದಲ ಪ್ರಯತ್ನ ಸರಿಯಾಗದಿದ್ದರೆ ಮತ್ತೊಂದರಲ್ಲಿ ಮಾಡಬಹುದು ಎಂಬ ಭರವಸೆ ಇರುತ್ತದೆ. ಹೀಗೆ ಪರೀಕ್ಷೆಯ ಬಗ್ಗೆ ಭಯ ತೊಲಗಿಸಿ, ಫಲಿತಾಂಶ ಉತ್ತಮಗೊಳಿಸಲು ಅವಕಾಶ ನೀಡುವ, ಆತ್ಮವಿಶ್ವಾಸ ಮೂಡಿಸುವ ಈ ಪರಿಷ್ಕೃತ ವ್ಯವಸ್ಥೆಯನ್ನು ಇಲಾಖೆ 'ವಿದ್ಯಾರ್ಥಿಸ್ನೇಹಿ' ಎಂದು ಕರೆದಿದ್ದು ಸೂಕ್ತವಾಗಿದೆ.

ಆದರೆ ಇದೇ ಸಮಯದಲ್ಲಿ ಗಮನಿಸಬೇಕಾದ ಇನ್ನಿತರ ಅಂಶಗಳೂ ಇವೆ. ಹೊಸ ವ್ಯವಸ್ಥೆಯಲ್ಲಿ, ಮೊದಲ ಕಡ್ಡಾಯ ಪರೀಕ್ಷೆ ಮಾರ್ಚ್‌ನಲ್ಲಿ ಆರಂಭವಾದರೆ, ಉಳಿದೆರಡು ಐಚ್ಛಿಕ ಪರೀಕ್ಷೆಗಳು ಮೇ ಮತ್ತು ಜುಲೈನಲ್ಲಿ ನಡೆಯಲಿವೆ. ಮಾರ್ಚ್‌ನಿಂದ ಆಗಸ್ಟ್‌ವರೆಗೆ ಪರೀಕ್ಷೆ ಮತ್ತು ಫಲಿತಾಂಶಗಳ ಕಾಲ. ಆರು ತಿಂಗಳ ಕಾಲ ಪರೀಕ್ಷೆಯನ್ನೇ ಮಾಡುತ್ತಿದ್ದರೆ ಮಕ್ಕಳಿಗೆ ಪಾಠವನ್ನು ಯಾವಾಗ ಮಾಡುವುದು ಎನ್ನುವ ಪ್ರಶ್ನೆ ಶಿಕ್ಷಕರನ್ನು ಕಾಡುತ್ತಿದೆ. ಸಮಯಕ್ಕೆ ಸರಿಯಾಗಿ ಪಠ್ಯಪುಸ್ತಕಗಳು ಲಭ್ಯವಾಗದೇ ಇರುವುದರ ಜತೆಗೆ ಶಿಕ್ಷಕರ ಕೊರತೆಯೂ ರಾಜ್ಯದಲ್ಲಿ ಬಹಳಷ್ಟು ಶಾಲೆಗಳಲ್ಲಿದೆ. ಹೀಗಿರುವಾಗ ವರ್ಷವಿಡೀ ಪಾಠ ಮಾಡಿದರೂ ಪಠ್ಯಕ್ರಮವನ್ನು ಮುಗಿಸುವುದು ಕಷ್ಟ. ಅದರ ನಡುವೆ ಆರು ತಿಂಗಳ ಕಾಲ ಈ ಚಟುವಟಿಕೆಗಳಲ್ಲಿ ಶಿಕ್ಷಕರು ವ್ಯಸ್ತರಾದರೆ ಪಾಠ ನಡೆಯುವುದು ಹೇಗೆ?



ಪರೀಕ್ಷೆಯನ್ನು ನಡೆಸುವುದು ಸುಲಭವಾದ ಮಾತಲ್ಲ. ಅದರಲ್ಲೂ ನಿರ್ಣಾಯಕವಾದ ಪರೀಕ್ಷೆಗಳನ್ನು ಕಟ್ಟುನಿಟ್ಟಾಗಿ ಶಿಸ್ತುಬದ್ಧವಾಗಿ ನಡೆಸಬೇಕು. ಅವುಗಳಿಗೆ ಅಗತ್ಯ ವ್ಯವಸ್ಥೆ, ಖರ್ಚುವೆಚ್ಚದ ಬಗ್ಗೆ ಯೋಚಿಸುವುದೂ ಮುಖ್ಯ. ಹಾಗೆಯೇ ಮೌಲ್ಯಮಾಪನದ ಗುಣಮಟ್ಟವನ್ನು ಕಾಯ್ದುಕೊಳ್ಳುವುದೂ ದೊಡ್ಡ ಹೊಣೆಯೇ ಸರಿ.

ಮಕ್ಕಳಿಗೆ ಪರೀಕ್ಷೆ, ಫಲಿತಾಂಶದ ಕುರಿತು ಅನಗತ್ಯ ಒತ್ತಡ ಸೃಷ್ಟಿಸಬಾರದು ಎನ್ನುವುದೇನೋ ಸರಿ. ಆದರೆ ಕಡ್ಡಾಯ ತೇರ್ಗಡೆ, ಮೂರು ಪರೀಕ್ಷೆಯಂತಹ ಕ್ರಮಗಳಿಂದಾಗಿ ಶಿಕ್ಷಣದ ಗುಣಮಟ್ಟ ಕುಸಿದರೆ ಎನ್ನುವ ಆತಂಕವೂ ಜನರನ್ನು ಕಾಡುತ್ತಿದೆ. ಮೊದಲ ಪರೀಕ್ಷೆ ಕಡ್ಡಾಯ, ಉಳಿದೆರಡು ಐಚ್ಛಿಕ ಸರಿ. ಆದರೂ ಎಷ್ಟೇ ಅಂಕ ತೆಗೆದರೂ ಜಗತ್ತು ತೀರಾ ಸ್ಪರ್ಧಾತ್ಮಕವಾಗಿರುವ ಸಂದರ್ಭದಲ್ಲಿ, ಮೂರು ಪರೀಕ್ಷೆಗಳಿರುವಾಗ, ಎಲ್ಲವನ್ನೂ ಬರೆದು ಇನ್ನಷ್ಟು ಅಂಕಗಳನ್ನು ಪಡೆಯಬೇಕೆಂಬ ಒತ್ತಡ ಮಕ್ಕಳ ಮೇಲೆ ಹೆಚ್ಚುವ ಸಾಧ್ಯತೆ ಇದೆ. ಪೋಷಕರೂ ಮಕ್ಕಳಿಂದ ಮತ್ತಷ್ಟನ್ನು ನಿರೀಕ್ಷಿಸಬಹುದು.

ಶಿಕ್ಷಣ ತಜ್ಞರ ಪ್ರಕಾರ, ಮಕ್ಕಳಿಗೆ ಪರೀಕ್ಷೆಯ ಕುರಿತು ಸ್ವಲ್ಪಮಟ್ಟಿಗೆ ಒತ್ತಡ ಬೇಕು. ಹಾಗಿದ್ದಾಗ ಮಾತ್ರ ಅವರು ಮನಸ್ಸಿಟ್ಟು ಕಷ್ಟಪಟ್ಟು ಓದುತ್ತಾರೆ. ಈ ರೀತಿಯಾಗಿ ಮೂರು ಪರೀಕ್ಷೆಗಳಿದ್ದಾಗ, ಇದಲ್ಲದಿದ್ದರೆ ಅದು, ಆಮೇಲೆ ಓದೋಣ ಎಂದು ಮುಂದೂಡುವ, ಉದಾಸೀನ ಮಾಡುವ ಪ್ರವೃತ್ತಿಯನ್ನೂ ಅವರಲ್ಲಿ ಕಾಣಬಹುದು. ಹೀಗಾಗಿ, ಪರೀಕ್ಷಾ ವ್ಯವಸ್ಥೆಯಲ್ಲಿ ಬದಲಾವಣೆ ಜತೆ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಎದುರಿಸಲು ಸಮರ್ಥರಾಗುವ ಹಾಗೆ ಶಿಕ್ಷಣ ವ್ಯವಸ್ಥೆ ಮತ್ತು ಶಿಕ್ಷಕರನ್ನು ಬಲಪಡಿಸುವ ಕಡೆಗೂ ಇಲಾಖೆ ಗಮನಹರಿಸುವುದು ಒಳ್ಳೆಯದು.

ವಾಚಕರ ವಾಣಿ

ಶ್ರಮಿಕರಿಗಾಗಿ ಹೃದಯ ಮಿಡಿಯುವುದೇ?

ಕಲಬುರಗಿ, ಯಾದಗಿರಿ, ರಾಯಚೂರಿನಂತಹ ಊರುಗಳಿಂದ ತುತ್ತಿನ ಚೀಲ ತುಂಬಿಸಿಕೊಳ್ಳಲು ಬೆಂಗಳೂರಿಗೆ ಗುಳೆ ಹೋಗುವ ಶ್ರಮಿಕ ವರ್ಗ, ರೈಲಿನಲ್ಲಿ ಸಾಮಾನ್ಯ ಬೋಗಿಗಳ ಸಂಖ್ಯೆ ಕಡಿಮೆ ಇರುವುದರಿಂದ ಕಷ್ಟಪಡುವಂತೆ ಆಗಿದೆ. ಸ್ಥಳಾಭಾವದ ಕಾರಣದಿಂದ ವಿಧಿ ಇಲ್ಲದೆ, ದಂಡ ಕಟ್ಟಿದರೂ ಚಿಂತೆ ಇಲ್ಲ ಎಂದು ಕಾಯ್ದಿರಿಸಿದ ಬೋಗಿಯಲ್ಲಿ ನಿಂತುಕೊಂಡೇ ಅವರು ಬೆಂಗಳೂರು ತಲುಪುತ್ತಾರೆ. ಈ ಕುರಿತು ಬಹಳಷ್ಟು ಪತ್ರಿಕಾ ವರದಿಗಳು ಬಂದಿವೆ. ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊಗಳು ಹರಿದಾಡಿವೆ. ಆದರೆ, ರೈಲ್ವೆ ಮಂಡಳಿ ಮಾತ್ರ ಗಾಢ ನಿದ್ರೆಯಲ್ಲಿ ಇರುವಂತಿದೆ.

ತಿಂಗಳಿಗಾಗುವಷ್ಟು ಜೋಳ, ಸಜ್ಜೆಯಂತಹ ಧಾನ್ಯಗಳೊಂದಿಗೆ ನಾಲ್ಕಾರು ಜನರ ಕುಟುಂಬ ರೈಲೇರುವುದು ಸಾಹಸವೇ ಸೈ. ಬರೀ ಸಾಮಾನ್ಯ ಬೋಗಿಗಳಿರುವ, ಹಗಲಿನಲ್ಲಿ ಕಲಬುರಗಿ- ಬೆಂಗಳೂರು ಹೀಗೆ ಎರಡೂ ನಿಲ್ದಾಣಗಳಿಂದ ಏಕಕಾಲಕ್ಕೆ ಫಾಸ್ಟ್ ಪ್ಯಾಸೆಂಜರ್ ರೈಲುಗಳ ಓಡಾಟ ಆರಂಭವಾದರೆ, ಬದುಕನ್ನು ಸವೆಸಲು ಬೆಂಗಳೂರಿಗೆ ನಿರಂತರವಾಗಿ ಓಡಾಡುವ ಇಂತಹ ನೂರಾರು ಶ್ರಮಿಕರಿಗೆ ಸಹಾಯವಾಗುತ್ತದೆ. ಅಧಿಕಾರದಲ್ಲಿರುವ ಜನಪ್ರತಿನಿಧಿಗಳ ಒಂದಷ್ಟು ಮಾನವೀಯ ಹೃದಯಗಳು ಮಿಡಿದರೆ ಈ ರೈಲಿನ ಓಡಾಟ ಅಸಾಧ್ಯವೇನಲ್ಲ.

ವೆಂಕಟೇಶ ಮುದಗಲ್, ಕಲಬುರಗಿ

ನಿನ್ನೆಯೇ ನೀಡಿದ್ದರೆ...

ಖಾಸಗಿ ಸಾರಿಗೆ ಮುಷ್ಕರ
ಅಂತ್ಯವಾಯಿತು ಅರ್ಧ ದಿನಕ್ಕೆ,
ಬೇಕಿತ್ತೆ ಇಷ್ಟೊಂದು
ಸಾರ್ವಜನಿಕ ಅಡಚಣೆ?
ಇಂದಿನ ಭರವಸೆ
ನಿನ್ನೆಯೇ ನೀಡಿದ್ದರೆ
ಮುಷ್ಕರ ತಡೆಯಬಹುದಿತ್ತೇನೊ
ಎಂಬುದೇ ಯೋಚನೆ!

ಮಹಾಂತೇಶ ಮಾಗನೂರ
ಬೆಂಗಳೂರು

ಉಳಿವಿಗಾಗಿ... ಅಸ್ತಿತ್ವಕ್ಕಾಗಿ...

ಪಕ್ಷದ ಉಳಿವಿಗಾಗಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳಲು ಚಿಂತನೆ ನಡೆದಿದೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರು ಬೆಂಗಳೂರಿನಲ್ಲಿ ಭಾನುವಾರ ನಡೆದ ಪಕ್ಷದ ಕಾರ್ಯಕರ್ತರ ಸಮಾವೇಶದಲ್ಲಿ ಘೋಷಿಸುವುದರೊಂದಿಗೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಮೈತ್ರಿ ಅಧಿಕೃತವಾಗಿದೆ. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬರೀ 19 ಸ್ಥಾನಗಳನ್ನು ಪಡೆದ ಜೆಡಿಎಸ್ ತೀವ್ರ ಮುಖಭಂಗ ಅನುಭವಿಸಿದ್ದರೂ ಪಕ್ಷಕ್ಕೆ ಬಲ ತುಂಬಲು ನಾನಾ ರೀತಿಯ ಕಸರತ್ತುಗಳನ್ನು ನಡೆಸಲಾಗುತ್ತಿದೆ. ಜಾತ್ಯತೀತ ಜನತಾದಳದ ಇತಿಹಾಸ ಹಲವಾರು ಏಳುಬೀಳುಗಳಿಂದ ಕೂಡಿದೆ.

ದೇಶದ ಅನೇಕ ರಾಜಕೀಯ ಪಕ್ಷಗಳಿಗೆ ಅದರಲ್ಲೂ ವಿಶೇಷವಾಗಿ ಪ್ರಾದೇಶಿಕ ಪಕ್ಷಗಳಿಗೆ ಇಂದು ರಾಜಕೀಯ ಅಸ್ತಿತ್ವದ ಪ್ರಶ್ನೆ ಕಾಡುತ್ತಿದೆ. ಹೀಗಾಗಿ, ತತ್ವ, ಸಿದ್ಧಾಂತ ಮರೆಯಾಗುತ್ತಿವೆ. ಉಳಿವಿಗಾಗಿ ಏನು ಬೇಕಾದರೂ ಮಾಡುವ ಹಂತವನ್ನು ಪಕ್ಷಗಳು ತಲುಪಿವೆ. ಎಐಎಡಿಎಂಕೆ, ಡಿಎಂಕೆ, ಟಿಎಂಸಿಯಂತಹ ಪ್ರಬಲ ಪ್ರಾಂತೀಯ ಪಕ್ಷಗಳು ಸ್ವಂತ ಬಲದಿಂದ ಅಧಿಕಾರಕ್ಕೆ ಬಂದಿದ್ದರೆ, ಮತ್ತೆ ಕೆಲವು ಪಕ್ಷಗಳು ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳ ಮೈತ್ರಿಕೂಟ ಸೇರಿವೆ. ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಏನು ಬೇಕಾದರೂ ಸಂಭವಿಸಬಹುದು. ಈ ದಿಸೆಯಲ್ಲಿ ಜೆಡಿಎಸ್ ನಡೆ ತಪ್ಪು ಎಂದು ಹೇಳಲಾಗದು. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ...' ಅನ್ನುವ ಹಾಗೆ ಎಲ್ಲಾ ಪಕ್ಷಗಳು ಮಾಡುವುದು ತಮ್ಮ ಉಳಿವಿಗಾಗಿ ಎಂದು ಈಗ ಹೇಳಬೇಕಾಗಿದೆ.

ಕೆ.ವಿ.ವಾಸು, ಮೈಸೂರು

ಖಾಸಗಿ ದರ್ಶನಕ್ಕೆ ತಕರಾರಿರದು

'ವಿಜ್ಞಾನಕ್ಕೆ ಗೊತ್ತಿಲ್ಲದ ಸಂಗತಿಗಳೇ ಸೃಷ್ಟಿಯಲ್ಲಿ ಇಲ್ಲ ಎಂದು ಭ್ರಮಿಸಿ ವಿಜ್ಞಾನಿಗಳ ಧಾರ್ಮಿಕ ವಿಶ್ವಾಸ, ಶ್ರದ್ಧೆಯನ್ನು ಮೌಢ್ಯ ಎಂದು ಟೀಕಿಸಲಾಗುತ್ತಿದೆ' ಎಂದು ಎಸ್. ಸೂರ್ಯಪ್ರಕಾಶ ಪಂಡಿತ್ ಅವರು, ವಿಜ್ಞಾನಿಗಳ ತಿರುಪತಿ ದರ್ಶನವನ್ನು ವಿರೋಧಿಸಿದ್ದ ವೈಜ್ಞಾನಿಕ ಮನೋವೃತ್ತಿಯ ಪ್ರತಿಪಾದಕರನ್ನು ತಮ್ಮ ಲೇಖನದಲ್ಲಿ (ಪ್ರ.ವಾ., ಸೆ. 6) ದೂರಿರುವುದು ಒಪ್ಪುವಂಥದ್ದಲ್ಲ. ಇಸ್ರೊ ಅಧ್ಯಕ್ಷರು ದೇಶದ ಪ್ರತಿಷ್ಠಿತ ವಿಜ್ಞಾನ ಸಂಸ್ಥೆಯ ಪ್ರತಿನಿಧಿಯಾಗಿ ಹೀಗೆ ಗುರುತಿಸಿಕೊಂಡ ಬಗ್ಗೆ ಮಾತ್ರ ಆಕ್ಷೇಪವಿತ್ತೇ ವಿನಾ ಅವರು ಖಾಸಗಿಯಾಗಿ ತಿರುಪತಿ ದರ್ಶನ ಮಾಡಿದ್ದರೆ ತಕರಾರು ಇರುತ್ತಿರಲಿಲ್ಲ, ಅಲ್ಲವೇ? ಮಿಗಿಲಾಗಿ, ವಿಜ್ಞಾನದ ವಿವರಣೆಗಳು 'ಸ್ಥಿರವಲ್ಲ'. ಇಂದಿನ ಸತ್ಯ ನಾಳೆ ಬದಲಾಗಬಹುದು ಇಲ್ಲವೇ ಬದಲಾವಣೆಗೆ ಸದಾ ತೆರೆದುಕೊಂಡಿರುತ್ತದೆ. ಈ ದೃಷ್ಟಿಯಲ್ಲಿ ವಿಜ್ಞಾನವೂ ಸದಾ 'ಕ್ರಿಯಾತ್ಮಕ'ವಾಗಿರುತ್ತದೆ ಹಾಗೂ ಇದರ ವಿವರಣೆಗಳು ಸಾರ್ವತ್ರಿಕ ಕೂಡ. ಈ ದೃಷ್ಟಿಯಲ್ಲಿ ವಿಜ್ಞಾನಕ್ಕೆ ಹೆಚ್ಚು ತಿಳಿದಿಲ್ಲ ಎಂಬ 'ನಂಬಿಕೆ'ಯೇ ವಿಜ್ಞಾನವನ್ನು ಮತ್ತಷ್ಟು ಮಗದಷ್ಟು ಕ್ರಿಯಾತ್ಮಕವಾಗಿಸುತ್ತದೆ.

ಡಾ. ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಆತ್ಮಹತ್ಯೆಯಿಂದ ಇನ್ನಷ್ಟು ಸಮಸ್ಯೆ ಸೃಷ್ಟಿ

'ಭರವಸೆಯ ಬೆಳಕು ನೀಡೋಣ' ಎಂಬ ಲೇಖನದಲ್ಲಿ ಡಾ. ಕೆ.ಆರ್.ಶ್ರೀಧರ್ ಅವರು ಪ್ರಸ್ತುತ ಸಮಾಜದಲ್ಲಿ ಆತ್ಮಹತ್ಯೆ ತಡೆಯ ಅಗತ್ಯವನ್ನು ಅಂಕಿ ಅಂಶ ಸಮೇತ ಸೊಗಸಾಗಿ ವಿಶ್ಲೇಷಣೆ ಮಾಡಿದ್ದಾರೆ (ಸಂಗತ, ಸೆ. 9). ಯುವಕರೇ ಹೆಚ್ಚಾಗಿ ಆತ್ಮಹತ್ಯೆಗೆ ಮುಂದಾಗುತ್ತಿರುವುದೇಕೆ ಎಂಬುದಕ್ಕೆ ಪೂರಕವಾದ ಕಾರಣಗಳನ್ನು ಸೋದಾಹರಣವಾಗಿ ವಿವೇಚಿಸಿದ್ದಾರೆ. ಒಮ್ಮೆ ಹೋದ ಜೀವ ಮರಳಿ ಬಾರದೆಂಬುದು ಗೊತ್ತಿದ್ದರೂ ವಿನಾಕಾರಣ ತಮ್ಮ ಅಮೂಲ್ಯ ಜೀವವನ್ನು ತಾವೇ ನಾಶ ಮಾಡಿಕೊಳ್ಳುವ ಕೃತ್ಯಕ್ಕೆ ಕೈ ಹಾಕುವ ಯುವಕರಿಗೆ ಹಿರಿಯರು ಕೊಡುವ ಉತ್ತಮವಾದ ಸಲಹೆಯಷ್ಟೇ ಈ ಪಿಡುಗನ್ನು ತಡೆಯಲು ಇರುವ ಪ್ರಬಲ ಮಾರ್ಗ.

ಆತ್ಮಹತ್ಯೆ ಮಾಡಿಕೊಳ್ಳುವ ವ್ಯಕ್ತಿ ಆ ಕುಟುಂಬದಲ್ಲಿ ಹೆಚ್ಚೆಚ್ಚು ಸಮಸ್ಯೆಗಳನ್ನು ಸೃಷ್ಟಿಸಿ ಹೋಗುತ್ತಾನೆಯೇ ವಿನಾ ಮತ್ತಿನ್ನೇನೂ ಆಗುವುದಿಲ್ಲ. ಇಂದು ಮಕ್ಕಳ ಮನಸ್ಸನ್ನು ಅರಿತುಕೊಂಡು ಪಾಲಕರು ಸೂಕ್ತ ಮಾರ್ಗದರ್ಶನ ನೀಡುವ ಅಗತ್ಯ ಇದೆ. 'ಜೀವ ಅಮೂಲ್ಯ ಜೀವನವೂ ಮುಖ್ಯ' ಎಂಬುದನ್ನು ಯುವಕರು ಅರಿತುಕೊಂಡು ನಡೆಯಬೇಕು. ಈಸಬೇಕು ಇದ್ದು ಜಯಿಸಬೇಕು ಎಂಬ ದಾಸರ ಕೀರ್ತನೆಯ ಮಹತ್ವವನ್ನು ಅರಿಯಬೇಕು.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಬಡತನ ತೋರಿಸಿಕೊಳ್ಳಲು ಅವಮಾನವೇ?’

ಪ್ರಜಾವಾಣಿ ವಾರ್ತೆ

‘ಹದಿನೆಂಟನೇ ಶತಮಾನ. ಜೀವನೋಪಾಯಕ್ಕಾಗಿ ಯೂರೋಪ್‌ನಿಂದ ರಷ್ಯಾಕ್ಕೆ ಬಂದಿದ್ದ ಆಕೆ ಕೆಲವೇ ವರ್ಷಗಳಲ್ಲಿ ರಷ್ಯಾದ ಮಹಾರಾಣಿಯಾದಳು. ರಷ್ಯಾ ದೊರೆ 3ನೇ ಪೀಟರ್ ಪತ್ನಿಯಾಗಿದ್ದ ಆಕೆ, ಒಂದು ಹಂತದಲ್ಲಿ ಗಂಡನನ್ನು ಅಧಿಕಾರದಿಂದ ಕೆಳಗಿಳಿಸಿ ತಾನೇ ರಾಜ್ಯಭಾರ ನಡೆಸಿದಳು. ರಷ್ಯಾ ಸಾಮ್ರಾಜ್ಯವನ್ನು ಮುನ್ನಡೆಸಿದಳು, ಸಾಮ್ರಾಜ್ಯವನ್ನು ವಿಸ್ತರಿಸಿದಳು. ರಷ್ಯಾದ ಮಂದಿಗೆ ಆಕೆಯೆಂದರೆ ಬಹಳ ಗೌರವ. ಸಮಾಜದಲ್ಲಿ ಹತ್ತಾರು ಸುಧಾರಣೆ, ಸಾಮ್ರಾಜ್ಯ ವಿಸ್ತರಣೆ... ಇದಕ್ಕಾಗಿಯೇ ಅವಳನ್ನು ‘ಕ್ಯಾಥರೀನ್ ದಿ ಗ್ರೇಟ್’ ಎಂದು ಗುರುತಿಸಲಾಗುತ್ತದೆ.

‘ಆಕೆಗೆ ತನ್ನ ಜನರನ್ನು ನೋಡುವ ಹಂಬಲ. ಅದಕ್ಕಾಗಿ ಆಕೆ ಆಗಾಗ್ಗೆ ನಗರ ಸಂಚಾರ ಮಾಡುತ್ತಿದ್ದಳು. ಆ ನಗರ ಸಂಚಾರಕ್ಕೂ ಮುನ್ನ, ಸಂಚಾರ ನಡೆಯುವ ಹಾದಿಯನ್ನೆಲ್ಲಾ ಸಿಂಗರಿಸಲಾಗುತ್ತಿತ್ತು. ಜನರು ತಮ್ಮಲ್ಲಿರುವ ಅತಿಒಳ್ಳೆಯ ಬಟ್ಟೆಯನ್ನು ತೊಟ್ಟು, ಹಾದಿಯ ಇಕ್ಕೆಲದಲ್ಲಿ ನಿಲ್ಲಬೇಕಿತ್ತು ಮತ್ತು ಆಕೆ ಬರುವಾಗ ತಾವು ಅತ್ಯಂತ ಸಂತೋಷದಿಂದ ಇದ್ದೇವೆ ಎಂದು ತೋರಿಸಬೇಕಿತ್ತು. ಜನರು ತಮ್ಮ ಕಷ್ಟವನ್ನು ಮರೆಮಾಚುತ್ತಿದ್ದರು. ತಾವು ಸಂತೋಷವಾಗಿ ಇದ್ದೇವೆ ಎಂದು ತೋರಿಸುತ್ತಿದ್ದರು. ಪ್ರಧಾನಿಯ ಆಜ್ಞೆಯಾದ ಕಾರಣ ಜನರು ಹಾಗೇ ಮಾಡುತ್ತಿದ್ದರು, ರಾಣಿ ಸಂತೋಷದಿಂದ ಅರಮನೆಗೆ ವಾಪಸಾಗುತ್ತಿದ್ದಳು... ರಾಣಿ ಕ್ಯಾಥರೀನ್‌ಳ ಸಾಧನೆಗಳನ್ನು ಹೇಳುವಾಗ, ಈ ನಗರ ಸಂಚಾರ ವಿಚಾರವನ್ನೂ ನೆನಪಿಸಿಕೊಳ್ಳಲಾಗುತ್ತದೆ.’

ಕ್ಯಾಥರೀನ್ ಕುರಿತು ನ್ಯಾಷನಲ್ ಜಿಯಾಗ್ರಫಿಕ್ ಸಿದ್ಧಪಡಿಸಿದ್ದ ವ್ಯಕ್ತಿಚಿತ್ರದಲ್ಲಿರುವ ವಿವರಗಳು ಇವು.

ಈಗ ದೆಹಲಿಗೆ ಬರೋಣ. ಜಿ20 ಶೃಂಗಸಭೆಯ ಕಾರಣಕ್ಕೆ ದೆಹಲಿಯನ್ನು ಸಿಂಗರಿಸಲಾಗಿತ್ತು. ಹೀಗೆ ಸಿಂಗರಿಸುವಾಗ ದೆಹಲಿಯ ವಿವಿಧ ಭಾಗಗಳಲ್ಲಿ ಇರುವ ಕೊಳೆಗೇರಿಗಳನ್ನು ತೆರವು ಮಾಡಲಾಯಿತು. ಜಿ20 ಶೃಂಗಸಭೆಯ ವಿದೇಶಿ ಗಣ್ಯರು ಉಳಿಯಲಿದ್ದ ಹೋಟೆಲ್‌ಗಳು ಮತ್ತು ಶೃಂಗಸಭೆ ನಡೆದ ‘ಭಾರತ ಮಂಟಪ’ ಸಭಾಂಗಣ ಸಂಕೀರ್ಣದ ಹಾದಿಯಲ್ಲಿರುವ ಹಾಗೂ ಸುತ್ತಮುತ್ತಲಿನ ಎಲ್ಲಾ ಕೊಳೆಗೇರಿಗಳನ್ನೂ ತೆರವು ಮಾಡಲಾಗಿತ್ತು. ಹೀಗೆ ನಗರದ ‘ಸೌಂದರ್ಯೀಕರಣ’ದ ಶ್ರೇಯವನ್ನು ದೆಹಲಿಯ ಎಎಪಿ ಸರ್ಕಾರ ಮತ್ತು ಕೇಂದ್ರದ ಬಿಜೆಪಿ ಸರ್ಕಾರ ತಮಗೆ ತಾವೇ ನೀಡಿಕೊಂಡವು. ‘ಸೌಂದರ್ಯೀಕರಣಕ್ಕೆ ಕೇಂದ್ರ ಸರ್ಕಾರ ಒಂದು ಪೈಸೆಯನ್ನೂ ನೀಡಲಿಲ್ಲ. ಎಲ್ಲಾ ನಾವೇ ಮಾಡಿದೆವು’ ಎಂದು ದೆಹಲಿ ಸಚಿವ ಸೌರವ್ ಭಾರದ್ವಾಜ್ ಹೇಳಿಕೊಂಡರು.

ಸೌಂದರ್ಯೀಕರಣದ ಭಾಗವಾಗಿ ದೆಹಲಿಯ ಅತ್ಯಂತ ದೊಡ್ಡ ಕೊಳೆಗೇರಿಗಳಾದ ಜನತಾ ಕ್ಯಾಂಪ್, ಕೂಲಿ ಕ್ಯಾಂಪ್‌ಗಳನ್ನು ತೆರವು ಮಾಡಲಾಯಿತು. ಜನತಾ ಕ್ಯಾಂಪ್ ಅಂತೂ ‘ಭಾರತ ಮಂಟಪ’ದಿಂದ ಕೇವಲ 280 ಮೀಟರ್‌ನಷ್ಟು ದೂರದಲ್ಲಿತ್ತು. ಶೃಂಗಸಭೆ ಆರಂಭಕ್ಕೂ ವಾರಗಳ ಮೊದಲಷ್ಟೇ ಜನತಾ ಕ್ಯಾಂಪನ್ನು ನೆಲಸಮ ಮಾಡಲಾಯಿತು. ಇದರ ಮಧ್ಯೆಯೇ ತಮ್ಮನ್ನು ಮರೆಮಾಚಿದ್ದರ ಬಗ್ಗೆ, ತಮ್ಮ ನೆಲೆಯನ್ನು ನೆಲಸಮ ಮಾಡಿದ್ದರ ಬಗ್ಗೆ ದೆಹಲಿಯ ಕೊಳೆಗೇರಿ ನಿವಾಸಿಗಳು ತೀವ್ರ ಅಸಮಾಧಾನ ಹೊರಹಾಕುತ್ತಲೇ ಇದ್ದರು. ‘ಒಬ್ಬ ಬಡವ, ಕೇವಲ ಬಡವನಷ್ಟೇನಾ? ಅವನು ಮನುಷ್ಯನಲ್ಲವೇ? ಆ ಬಡವ ಕಸವೇ ಅಥವಾ ಪ್ರಾಣಿಯೇ’ ತಮ್ಮ ಮನೆ ನೆಲಸಮವಾದುದರ ಬಗ್ಗೆ ಕೂಲಿ ಕ್ಯಾಂಪ್‌ನ ಮುಕೇಶ್ ಹೊರಹಾಕಿದ ಆಕ್ರೋಶವಿದು. ‘ಬೀದೀಲಿ ನಾಯಿ ಸತ್ತರೆ, ಸರ್ಕಾರಕ್ಕೆ ಏನಾದರೂ ಆಗುತ್ತದೆಯೇ? ಬಡವನಿಗೆ ತೊಂದರೆಯಾದರೆ, ಯಾರಿಗೂ ಏನಾಗುವುದಿಲ್ಲ. ತೊಂದರೆಯಾಗುವುದು ಬಡವನಿಗೆ ಮಾತ್ರ’ ಎಂದು ಮುಕೇಶ್ ಹೇಳುವ ಮಾತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಲೇ ಇದೆ.

ಸರ್ಕಾರದ ಅಂದಾಜಿನ ಪ್ರಕಾರ, ದೆಹಲಿಯಲ್ಲಿ 1,700ಕ್ಕೂ ಹೆಚ್ಚು ಕೊಳೆಗೇರಿಗಳಿವೆ. ದೆಹಲಿ ವಿಧಾನಸಭೆಗೆ 2020ರಲ್ಲಿ ಚುನಾವಣೆ ನಡೆದಾಗ, ‘ನಾವು ಅಧಿಕಾರಕ್ಕೆ ಬಂದರೆ ಈ ಎಲ್ಲಾ ಕೊಳೆಗೇರಿ ನಿವಾಸಿಗಳಿಗೆ ಹಕ್ಕುಪತ್ರ ನೀಡುತ್ತೇವೆ. ಕೊಳೆಗೇರಿ ನಿರ್ಮಾಣಗಳನ್ನು ಸಕ್ರಮಗೊಳಿಸುತ್ತೇವೆ’ ಎಂದು ಬಿಜೆಪಿ ಮತ್ತು ಎಎಪಿ ಎರಡೂ ಘೋಷಿಸಿದ್ದವು. ಈ ವಿಚಾರವನ್ನು ಪ್ರಣಾಳಿಕೆಗಳಲ್ಲೂ ಸೇರಿಸಿದ್ದವು. ಎಎಪಿ ಅಧಿಕಾರಕ್ಕೆ ಬಂದಿತು. ಬಿಜೆಪಿ ಅಧಿಕಾರಕ್ಕೆ ಬರದಿದ್ದರೂ, ದೆಹಲಿ ನಗರ ಪಾಲಿಕೆ ಬಿಜೆಪಿ ತೆಕ್ಕೆಯಲ್ಲೇ ಇತ್ತು. ಎರಡೂ ಪಕ್ಷಗಳು ಅಧಿಕಾರದಲ್ಲಿದ್ದರೂ ತಮ್ಮ ಚುನಾವಣಾ ಘೋಷಣೆಗಳನ್ನು ಅನುಷ್ಠಾನಕ್ಕೆ ತರಲಿಲ್ಲ. ಈಗ ಜಿ20 ಶೃಂಗಸಭೆಗಾಗಿ ದೆಹಲಿಯನ್ನು ಸಿಂಗರಿಸಲು ಕೊಳೆಗೇರಿಗಳನ್ನು ತೆರವು ಮಾಡಿದವು, ಪರದೆ ಹೊದೆಸಿ ಕೊಳೆಗೇರಿಗಳನ್ನು ಮರೆಮಾಚಿದವು. ದೆಹಲಿಯ ಮೇಲ್ಸೇತುವೆಗಳ ಅಡಿಯಲ್ಲಿ ನೆಲೆ ಕಂಡುಕೊಂಡಿದ್ದ ನಿರ್ವಸತಿಕರನ್ನು 15 ದಿನಗಳ ಮಟ್ಟಿಗೆ ನಗರದಿಂದ ಹೊರಹೋಗುವಂತೆ ಸೂಚಿಸಿದವು.

ಆನಂತರ, ಜಿ20 ವಿದೇಶಿ ಗಣ್ಯರು ಉಳಿಯಲಿದ್ದ ತಾರಾ ಹೋಟೆಲ್‌ಗಳಿದ್ದ ಏರೋಸಿಟಿಯಿಂದ ಭಾರತ ಮಂಟಪಕ್ಕೆ ಬರುವ ಹಾದಿಯಲ್ಲಿನ ವಸಂತ್‌ಕುಂಜ್ ಮತ್ತು ವಸಂತ ವಿಹಾರ ಜಂಕ್ಷನ್‌ನಲ್ಲಿರುವ ಕೊಳೆಗೇರಿಗೆ 20 ಅಡಿ ಎತ್ತರದ ಪರದೆಯನ್ನು ಹೊದೆಸಲಾಯಿತು. ಜಿ20 ಗಣ್ಯರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸ್ವಾಗತಿಸುವ ಬರಹ-ಚಿತ್ರಗಳಿರುವ ದೊಡ್ಡ ದೊಡ್ಡ ಬ್ಯಾನರ್‌ಗಳನ್ನು ಆ ಹಸಿರು ಪರದೆಗಳ ಮೇಲೆ ಹಾಕಲಾಯಿತು. ಪರದೆಯನ್ನು ದಾಟಿ ಬರಬೇಡಿ ಎಂದು ಜನರಿಗೆ ತಾಕೀತು ಮಾಡಲಾಯಿತು. ಗೋಡೆಗಳ ಮೇಲೆ ಚಿತ್ತಾರಗಳನ್ನು ಬಿಡಿಸಲಾಯಿತು. ಜಿ20 ಗಣ್ಯರು ಎರಡು ದಿನವೂ ಅದೇ ರಸ್ತೆಗಳಲ್ಲಿ ಓಡಾಡಿ ದೆಹಲಿಯ ಸೌಂದರ್ಯವನ್ನು ಕಣ್ತುಂಬಿಕೊಂಡರು. ‘ಈ ಸೌಂದರ್ಯವನ್ನು ಕಣ್ತುಂಬಿಕೊಳ್ಳಲು ಖುಷಿಯಾಗುತ್ತಿದೆ. ಇದು ಈಗ ಸೆಲ್ಫಿ ಕೇಂದ್ರವಾಗಿದೆ. ನನಗೆ ಹೆಮ್ಮೆಯಾಗುತ್ತಿದೆ’ ಎಂದು ಸೌಂದರ್ಯೀಕರಣದ ಬಗ್ಗೆ ಕೇಂದ್ರ ಸಚಿವೆ ಮೀನಾಕ್ಷಿ ಲೇಖಿ ಖುಷಿಪಟ್ಟರು. ಆ ವಿಡಿಯೊ ಸಹ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಪಿಐಬಿ, ಪಿಐಬಿ ಫ್ಯಾಕ್ಟ್‌ಚೆಕ್

> ‘ಮನೆಗೆ ನೆಂಟರು ಬರುತ್ತಾರೆ ಎಂದಾಗ, ಮನೆಯ ಕೊಳಕನ್ನೆಲ್ಲಾ ತೊಳೆಯುವುದಿಲ್ಲವೇ? ಇದೂ ಹಾಗೇ’. ದೆಹಲಿಯಲ್ಲಿ ನಡೆದ ಜಿ20 ಶೃಂಗಸಭೆಗಾಗಿ ನಗರದ ಸೌಂದರ್ಯೀಕರಣಕ್ಕಾಗಿ ಕೊಳೆಗೇರಿಗಳನ್ನು ನೆಲಸಮ ಮಾಡಿದ್ದು ಮತ್ತು ಕೊಳೆಗೇರಿಗಳಿಗೆ ಪರದೆ ಹೊದಿಸಿ ಮರೆಮಾಚಲಾದ ಸರ್ಕಾರದ ಕ್ರಮವನ್ನು ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಸಮರ್ಥಿಸಿಕೊಂಡ ಬಗೆ ಇದು. ‘ಬಡತನವನ್ನು, ಬಡವರನ್ನು ತೋರಿಸಿಕೊಳ್ಳಲು ಅವಮಾನವೇ? ಹಾಗಿದ್ದಲ್ಲಿ ನಮಗೆಲ್ಲಾ ಪುನರ್ವಸತಿ ಕಲ್ಪಿಸಿಬಿಡಿ’: ದೆಹಲಿಯನ್ನು ಸುಂದರಗೊಳಿಸುವ ಕ್ರಮದ ಫಲವಾಗಿ ತನ್ನ ಜೋಪಡಿ ಕಳೆದುಕೊಂಡ ಜನತಾ ಕ್ಯಾಂಪ್‌ನ ಬೀರಾ ಸಿಂಗ್‌ನ ಮಾತಿದು. ಸೌಂದರ್ಯದ ನೆಪದಲ್ಲಿ ಕೊಳೆಗೇರಿಗಳನ್ನು ಮರೆಮಾಚುವ ಕೆಲಸವನ್ನು ಕಾಂಗ್ರೆಸ್, ಬಿಜೆಪಿ, ಎಎಪಿ ಎಲ್ಲವೂ ಮಾಡಿವೆ

ಬಡವರನ್ನು ಮುಚ್ಚಿಡುವ ಅಲಂಕಾರ!

- 2010ರಲ್ಲಿ ದೆಹಲಿಯಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟ ನಡೆದಿತ್ತು. ಕ್ರೀಡಾಕೂಟ ನಡೆದ ಸ್ಥಳದ ಸುತ್ತಮುತ್ತ ಇದ್ದ ಕೊಳೆಗೇರಿಗಳ ಸುಮಾರು 2 ಲಕ್ಷ ಜನರನ್ನು ಒಕ್ಕಲೆಬ್ಬಿಸಲಾಗಿತ್ತು. ಒತ್ತಾಯಪೂರ್ವಕವಾಗಿ ಬಡವರನ್ನು ಒಕ್ಕಲೆಬ್ಬಿಸುವ ವೇಳೆ ಸುಮಾರು 18 ಮಂದಿ ಮೃತಪಟ್ಟಿದ್ದರು. ಆಗ ಕೇಂದ್ರದಲ್ಲಿ ಯುಪಿಎ ಸರ್ಕಾರವಿತ್ತು. ದೆಹಲಿಯಲ್ಲಿ ಕಾಂಗ್ರೆಸ್ ಸರ್ಕಾರವಿತ್ತು
- 2014ರ ಸೆಪ್ಟೆಂಬರ್‌ನಲ್ಲಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಗುಜರಾತ್‌ಗೆ ಭೇಟಿ ನೀಡಿದ್ದರು. ಈ ವೇಳೆ ದಂಡಿ ಸೇತುವೆಯಿಂದ ನವಾ ವಾದಜ್ ಪ್ರದೇಶದವರೆಗೆ ಕೊಳೆಗೇರಿಗಳಿಗೆ ಪರದೆಗಳನ್ನು ಹಾಕಲಾಗಿತ್ತು
- ಪ್ರವಾಸಿ ಭಾರತೀಯ ದಿನ ಮತ್ತು ವೈಬ್ರೆಂಟ್ ಗುಜರಾತ್ ಶೃಂಗಸಭೆಯು 2015ರಲ್ಲಿ ಗುಜರಾತ್‌ನಲ್ಲಿ ನಡೆದಿತ್ತು. ವಿದೇಶಿ ಗಣ್ಯರು ಸಾಗುವ ಮುಖ್ಯ ದಾರಿಗಳ ಸಮೀಪದ ಕೊಳೆಗೇರಿಗಳನ್ನು ಮುಚ್ಚಿಡಲು ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳ ಜಾಹೀರಾತುಗಳನ್ನು, ವಿವಿಧ ಭಾಷೆಗಳಲ್ಲಿ ಇರುವ ಸ್ವಾಗತ ಫ್ಲೆಕ್ಸ್‌ಗಳನ್ನು ಹಾಕಲಾಗಿತ್ತು. 2017ರಲ್ಲಿಯೂ ವೈಬ್ರೆಂಟ್ ಗುಜರಾತ್ ಶೃಂಗಸಭೆ ನಡೆದಿತ್ತು. ಈ ವೇಳೆ 3,000 ಜನ ವಾಸಿಸುವ ಸರಾನಿಯಾವಾಸ್ ಕೊಳೆಗೇರಿಯು ಹೊರಗೆ ಕಾಣದಂತೆ ಮಾಡಲಾಗಿತ್ತು
- ಜಪಾನ್ ಪ್ರಧಾನಿಯಾಗಿದ್ದ ಶಿಂಜೊ ಅಬೆ ಹಾಗೂ ಅವರ ಪತ್ನಿ ಭಾರತ ಭೇಟಿಗಾಗಿ 2017ರಲ್ಲಿ ಗುಜರಾತ್‌ನ ಅಹಮದಾಬಾದ್ ಹಾಗೂ ಗಾಂಧಿನಗರಕ್ಕೆ ಬಂದಿದ್ದರು. ಈ ವೇಳೆ ನಗರದಾದ್ಯಂತ ಇರುವ ಕೊಳೆಗೇರಿಗಳಿಗೆ ಹಸಿರು ಪರದೆಯನ್ನು ಹಾಕಲಾಗಿತ್ತು
- 2020ರಲ್ಲಿ ಗುಜರಾತ್‌ನಲ್ಲಿ ‘ನಮಸ್ತೆ ಟ್ರಂಪ್’ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ವೇಳೆ ಟ್ರಂಪ್ ಅವರು ಸಂಚರಿಸುವ ರಸ್ತೆಯುದ್ದಕ್ಕೂ ಕೊಳೆಗೇರಿಗಳನ್ನು ಮುಚ್ಚಿಡುವ ಸಲುವಾಗಿ 6 ಅಡಿ ಎತ್ತರ ಮತ್ತು 1,640 ಅಡಿ ಉದ್ದದ ಗೋಡೆಯನ್ನು ನಿರ್ಮಿಸಲಾಗಿತ್ತು. ಈ ವೇಳೆಯಲ್ಲಿ ಪ್ರಧಾನಿ ಮೋದಿ ಹಾಗೂ ಟ್ರಂಪ್ ಅವರು ರೋಡ್‌ಶೋವನ್ನು ನಡೆಸಿದ್ದರು
- 2022ರ ಡಿಸೆಂಬರ್ 13ರಿಂದ 16ರವರೆಗೆ ಮುಂಬೈನಲ್ಲಿ ಜಿ20 ಸಭೆ ನಡೆದಿದೆ. ಈ ವೇಳೆ ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇಯಲ್ಲಿ ಇರುವ ಕೊಳೆಗೇರಿಗಳಿಗೆ ಬಿಳಿ ಪರದೆ ಹಾಗೂ ಬ್ಯಾರಿಕೇಡ್‌ಗಳನ್ನು ಬೃಹನ್‌ಮುಂಬೈ ಮುನಿಸಿಪಲ್ ಕಾರ್ಪೊರೇಷನ್ (ಬಿಎಂಸಿ) ಹಾಕಿತ್ತು
- 2023ರ ಮಾರ್ಚ್‌ನಲ್ಲಿ ವಿಶಾಖಪಟ್ಟಣದಲ್ಲಿ ಜಿ20 ಸಭೆ ನಡೆದಿತ್ತು. ಈ ವೇಳೆ ವಿಶಾಖಪಟ್ಟಣದ ವಿಮಾನ ನಿಲ್ದಾಣದಿಂದ ನಗರವನ್ನು ಪ್ರವೇಶಿಸುವವರೆಗೂ ರಸ್ತೆಗಳ ಪಕ್ಕದಲ್ಲಿ ಹಸಿರು ಪರದೆ ಎಳೆಯಲಾಗಿತ್ತು. ಈ ರಸ್ತೆಯುದ್ದಕ್ಕೂ ಅಲ್ಲಲ್ಲಿ ಕೊಳೆಗೇರಿಗಳು ಇವೆ

ಮೋದಿಗಾಗಿಯೂ ಪರದೆ

ಬ್ರಿಟನ್ ಪ್ರಧಾನಿಯಾಗಿದ್ದ ಬೋರಿಸ್ ಜಾನ್ಸನ್ ಅವರು 2022ರ ಏಪ್ರಿಲ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು. ಆಗ ಸಬರಮತಿ ಆಶ್ರಮಕ್ಕೂ ಭೇಟಿ ನೀಡಿದ್ದರು. ಈ ವೇಳೆಯಲ್ಲಿ ಅಹಮದಾಬಾದ್‌ನಿಂದ ಆಶ್ರಮದವರೆಗಿನ ರಸ್ತೆಯುದ್ದಕ್ಕೂ ಬಿಳಿ ಪರದೆ ಹಾಕುವುದರ ಮೂಲಕ ಕೊಳೆಗೇರಿಗಳನ್ನು ಮುಚ್ಚಿಡಲಾಗಿತ್ತು. ಇದೇ ಸಂದರ್ಭದಲ್ಲಿ, ಕೊಳೆಗೇರಿಗಳಿಗೆ ಅಡ್ಡಲಾಗಿ ಹಾಕಲಾಗಿದ್ದ ಬಿಳಿ ಪರದೆಯನ್ನು ಎತ್ತಿ ಕೆಲವು ಮಕ್ಕಳು ರಸ್ತೆಗೆ ಮುಖಮಾಡಿ ಕುಳಿತಿದ್ದ ಚಿತ್ರವೊಂದನ್ನು ಬಹಿರಂಗವಾಗಿತ್ತು. ‘ಇದು ಮೋದಿ ಅವರ ನವಭಾರತ. ಜಾನ್ಸನ್‌ಗಾಗಿ ಕೊಳೆಗೇರಿಯನ್ನು ಮರೆಮಾಚಲಾಗಿದೆ’ ಎಂದೂ ಜರೆಯಲಾಯಿತು. ಆದರೆ, ಇದು ತಿರುಚಲಾದ ಮಾಹಿತಿಯಾಗಿತ್ತು.

ಜಾನ್ಸನ್ ಬಂದಾಗ ಕೊಳೆಗೇರಿಗೆ ಪರದೆ ಹೊದಿಸಲಾಗಿತ್ತಾದರೂ, ಹಂಚಿಕೊಳ್ಳಲಾಗಿದ್ದ ಚಿತ್ರಕ್ಕೂ ಆ ಸುದ್ದಿಗೂ ಸಂಬಂಧವಿರಲಿಲ್ಲ. ಈ ಚಿತ್ರ ತೆಗೆದದ್ದು 2021ರ ಮಾರ್ಚ್‌ನಲ್ಲಿ. ಸ್ವಾತಂತ್ರ್ಯದ ಅಮೃತ ಮಹೋತ್ಸವಕ್ಕೆ ಸಬರಮತಿ ಆಶ್ರಮದಿಂದ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದರು. ಈ ವೇಳೆ ಆಶ್ರಮಕ್ಕೆ ಸಾಗುವ ರಸ್ತೆ ಬದಿಗಳಲ್ಲಿ ಇರುವ ಕೊಳೆಗೇರಿಗಳನ್ನು ಮುಚ್ಚಿಡಲು ಬಿಳಿ ಪರದೆಗಳನ್ನು ಹಾಕಲಾಗಿತ್ತು! ಈ ಬಗ್ಗೆ ‘ದಿ ಕ್ವಿಂಟ್’ ಸೇರಿದಂತೆ ಹಲವು ಮಾಧ್ಯಮ ಸಂಸ್ಥೆಗಳು ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. ಜೊತೆಗೆ ಅಹಮದಾಬಾದ್ ಮಿರರ್ ಕೂಡ ವರದಿ ಪ್ರಕಟಿಸಿದೆ.

ಉಪೇಂದ್ರ ಜನ್ಮದಿನಕ್ಕೆ ‘UI’ ಟೀಸರ್

ಚಂದನವನದ ‘ರಿಯಲ್ ಸ್ಟಾರ್’ ಉಪೇಂದ್ರ ತಮ್ಮ ನಿರ್ದೇಶನದ ಹೊಸ ಚಿತ್ರ ‘UI’ಯ ಟೀಸರ್ ಬಿಡುಗಡೆ ದಿನಾಂಕವನ್ನು ಪ್ರಕಟಿಸಿದ್ದಾರೆ. ಉಪೇಂದ್ರ ಜನ್ಮದಿನದಂದೇ (ಸೆ.18) ಮಧ್ಯಾಹ್ನ 3 ಗಂಟೆಗೆ ‘UI’ ಟೀಸರ್ ರಿಲೀಸ್ ಆಗಲಿದೆ.

ಬೆಂಗಳೂರಿನ ಊರ್ವಶಿ ಚಿತ್ರಮಂದಿರದಲ್ಲಿ ಟೀಸರ್ ಬಿಡುಗಡೆ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಅಭಿಮಾನಿಗಳ ಸಮ್ಮುಖದಲ್ಲಿ ಉಪೇಂದ್ರ ಅವರು ಜನ್ಮದಿನ ಹಾಗೂ ಟೀಸರ್ ಸಂಭ್ರಮವನ್ನು ಆಚರಿಸಲಿದ್ದಾರೆ. ಟೀಸರ್ ಬಿಡುಗಡೆ ಘೋಷಣೆಯನ್ನು ವಿಭಿನ್ನವಾದ ಪ್ರಚಾರದ ಮೂಲಕ ಚಿತ್ರತಂಡ ಮಾಡಿದೆ. ಈಗಾಗಲೇ ಚಿತ್ರೀಕರಣ ಪೂರ್ಣಗೊಳಿಸಿ, ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ತಂಡ ತೊಡಗಿಸಿಕೊಂಡಿದೆ. ಐದು ಭಾಷೆಗಳಲ್ಲಿ ಚಿತ್ರ ತೆರೆಗೆ ಬರುತ್ತಿದ್ದು, ಈ ವರ್ಷದ ಅಂತ್ಯಕ್ಕೆ ಚಿತ್ರ ಬಿಡುಗಡೆಯಾಗುವ ಸಾಧ್ಯತೆ ಇದೆ. ಚಿತ್ರದಲ್ಲಿ ಹೆಚ್ಚಿನ ಗ್ರಾಫಿಕ್ಸ್ ಬಳಕೆ ಮಾಡಲಾಗಿದ್ದು, ಮತ್ತೊಮ್ಮೆ ನಿರ್ದೇಶನ ಮತ್ತು ನಟನೆಯಲ್ಲಿ ತಮ್ಮ ಕೈಚಳಕ ತೋರಿಸಲು ರಿಯಲ್ ಸ್ಟಾರ್ ಸಜ್ಜಾಗಿದ್ದಾರೆ.

ಲಹರಿ ಫಿಲಂಸ್ ಹಾಗೂ ವೀನಸ್ ಎಂಟರ್‌ಟೈನರ್ಸ್ ಲಾಂಛನದಲ್ಲಿ ಜಿ.ಮನೋಹರನ್ ಹಾಗೂ ಕೆ.ಪಿ.ಶ್ರೀಕಾಂತ್ ಈ ಚಿತ್ರವನ್ನು ಜಂಟಿಯಾಗಿ ನಿರ್ಮಾಣ ಮಾಡಿದ್ದಾರೆ.

ಉಪೇಂದ್ರ

ಬಿಡುಗಡೆಗೆ ಸಜ್ಜಾಗುತ್ತಿದೆ ಕಾಲಾಪತ್ಥರ್

ವಿಕ್ಕಿ ವರುಣ್ ನಿರ್ದೇಶಿಸಿ ನಾಯಕನಾಗಿ ನಟಿಸಿರುವ ‘ಕಾಲಾಪತ್ಥರ್’ ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದೆ. ಚಿತ್ರದ ಪ್ರಚಾರ ಆರಂಭಿಸಿರುವ ತಂಡ, ಆರಂಭದಲ್ಲಿ ‘ಸೌಂಡ್ಸ್ ಆಫ್ ಕಾಲಾಪತ್ಥರ್’ ಹೆಸರಿನಲ್ಲಿ ಚಿತ್ರದ ಎಲ್ಲ ಹಾಡುಗಳನ್ನು ಪರಿಚಯಿಸಿದೆ.

ಭುವನ್ ಮೂವೀಸ್ ಲಾಂಛನದಲ್ಲಿ ಭುವನ್ ಸುರೇಶ್ ಹಾಗೂ ನಾಗರಾಜ್ ಬಿಲ್ಲಿನಕೋಟೆ ಈ ಚಿತ್ರವನ್ನು ನಿರ್ಮಿಸಿದ್ದಾರೆ. ನಟಿ ಧನ್ಯ ರಾಮ್‌ಕುಮಾರ್ ಈ ಚಿತ್ರದಲ್ಲಿ ವಿಕ್ಕಿಗೆ ಜೋಡಿಯಾಗಿದ್ದು, ಹಳ್ಳಿ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. ಅನೂಪ್ ಸೀಳಿನ್ ಸಂಗೀತ ನೀಡಿರುವ ಈ ಚಿತ್ರದ ಐದು ಹಾಡುಗಳು ‘ಸೌಂಡ್ಸ್ ಆಫ್ ಕಾಲಾಪತ್ಥರ್’ ಗುಚ್ಛದಲ್ಲಿವೆ.

‘ನಿರ್ದೇಶನ ನನ್ನ ಕನಸು. ಸೂರಿ ಅವರ ಬಳಿ ಹತ್ತು ವರ್ಷ ಕೆಲಸ ಮಾಡಿರುವ ಅನುಭವದಿಂದ ಈ ಚಿತ್ರದ ನಿರ್ದೇಶನ ಸುಲಭವಾಯಿತು. ನಿರ್ದೇಶನ ಹಾಗೂ ನಟನೆ ಎರಡು ಒಟ್ಟಿಗೆ ಮಾಡುವುದು ಕಷ್ಟ. ಆದರೆ ಚಿತ್ರತಂಡದ ಸಹಕಾರದಿಂದ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ. ಶೀರ್ಷಿಕೆಯೇ ಚಿತ್ರದ ಕಥೆ ಹೇಳುತ್ತದೆ’ ಎನ್ನುತ್ತಾರೆ ವಿಕ್ಕಿ ವರುಣ್. ಹಾಡುಗಳನ್ನು ವಿ.ನಾಗೇಂದ್ರ ಪ್ರಸಾದ್ ಹಾಗೂ ಪ್ರಮೋದ್ ಮರವಂತೆ ರಚಿಸಿದ್ದಾರೆ.

ಧನ್ಯ ರಾಮ್‌ಕುಮಾರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಮುಸ್ಲಿಂ ಹುಡುಗನ ಹಣೆಯ ಮೇಲೆ ಹಿಂದೂ ಧಾರ್ಮಿಕ ಸಂಕೇತದ ‘ಜೈಶ್ರೀರಾಮ್’ ಮಂತ್ರವನ್ನು ಆರ್‌ಎಸ್‌ಎಸ್ ಜನರು ಕಾದ ಕಬ್ಬಿಣದಿಂದ ಕೊರೆದಿದ್ದಾರೆ. ಇದರಿಂದ ಹುಡುಗ ಮಾನಸಿಕ ಅಸ್ವಸ್ಥನಾಗಿದ್ದಾನೆ’ ಎಂಬ ಬರಹದೊಂದಿಗೆ ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ವಿಡಿಯೊದಲ್ಲಿ ಬಾಲಕನ ತಾಯಿಯು ಮಾತನಾಡುತ್ತಿರುವ, ಮನೆಯ ಮುಂದೆ ಜನರು ಸೇರಿರುವ ದೃಶ್ಯಗಳಿವೆ. ‘ಉತ್ತರ ಪ್ರದೇಶ– ‘ಜೈ ಭೋಲೇನಾಥ್’ ಎಂದು ಮುಸ್ಲಿಂ ಹುಡುಗ ‘ಶಾಬಾದ್’ನ ಮೇಲೆ ಕಾದ ಕಬ್ಬಿಣದ ರಾಡ್‌ನಿಂದ ಕೊರೆಯಲಾಗಿದೆ. ಸನಾತನಿಗಳು ಎಷ್ಟು ವಿಚಲಿತರಾಗಿದ್ದಾರೆ ಎಂದರೆ ಅವರೀಗ ಮಾನಸಿಕ ಅಸ್ವಸ್ಥ ಹುಡುಗನ ವಿರುದ್ಧ ಕೊಳಕು ತಂತ್ರಗಳನ್ನು ಹೂಡುತ್ತಿದ್ದಾರೆ. ಆದರೆ ಪೊಲೀಸರು ಮಾತ್ರ, ಇದು ಕೃತ್ಯ ಎಸಗಿದವರ ತಪ್ಪಲ್ಲ. ಆದರೆ, ಈ ವಿಡಿಯೊವನ್ನು ಹಂಚಿಕೊಂಡವರದ್ದು ತಪ್ಪು ಎನ್ನುತ್ತಾರೆ’ ಎಂದೂ ಕೆಲವರು ಬರೆದುಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿವಿಧ ಹಿಂದಿ ಭಾಷಿಕ ಪತ್ರಿಕೆಗಳಲ್ಲಿ ಸೆ. 4, 5ರ ಹೊತ್ತಿಗೆ ಮುಸ್ಲಿಂ ಯುವಕನ ತಲೆಯ ಮೇಲೆ ಬರೆದಿರುವ ಬರಹದ ಕುರಿತು ಸುದ್ದಿಗಳನ್ನು ಪ್ರಕಟ ಮಾಡಲಾಗಿದೆ. ಈ ಘಟನೆ ನಡೆದದ್ದು ಉತ್ತರ ಪ್ರದೇಶದ ಬರೇಲಿಯಲ್ಲಿ. ಈ ವಿಡಿಯೊವನ್ನು ಪತ್ರಕರ್ತರೊಬ್ಬರು ಸೆ.4ರಂದು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದರು. ಈ ಪೋಸ್ಟ್‌ಗೆ ಬರೇಲಿ ಪೊಲೀಸರು ಪ್ರತಿಕ್ರಿಯಿಸಿದ್ದಾರೆ. ‘ಈ ಪ್ರಕರಣದ ಕುರಿತಾಗಿ ತನಿಖೆ ಪ್ರಗತಿಯಲ್ಲಿದೆ. ಶಾಬಾದ್ ಖಾನ್ ಎಂಬುವರನ್ನು ಐದು ದಿನಗಳ ಹಿಂದೆ ಬಂಧಿಸಲಾಗಿದೆ. ಶಾಬಾದ್, ಮುಸ್ಲಿಂ ಯುವಕನ ಸಂಬಂಧಿ. ಮಾರ್ಕರ್ ಪೆನ್‌ನಿಂದ ಬರಹವನ್ನು ಬರೆಯಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ. ‘ಆಗಸ್ಟ್ 31ರ ಹೊತ್ತಿಗೆ ಈ ಘಟನೆ ನಡೆದಿದೆ. ಇದನ್ನು ತಮಾಷೆಗಾಗಿ ಮಾಡಲಾಗಿತ್ತು. ಸಂತ್ರಸ್ತ ಯುವಕನ ಹೆಸರು ದಾನಿಷ್ ಮತ್ತು ಈತನ ಕುಟುಂಬದವರು ದೂರು ನೀಡಲು ಬಂದಿದ್ದರು. ಆದರೆ, ಈತನ ತಾಯಿ ದೂರು ನೀಡಲು ನಿರಾಕರಿಸಿದರು’ ಎಂದು ಹತ್ತಿರದ ಠಾಣಾಧಿಕಾರಿ ತಿಳಿಸಿದರು. ಆದ್ದರಿಂದ, ಸಂತ್ರಸ್ತನ ಹೆಸರು ಶಾಬಾದ್ ಅಲ್ಲ. ಜೊತೆಗೆ, ಬರಹವನ್ನು ದಾನಿಷ್‌ನ ತಲೆಯ ಮೇಲೆ ಬರೆದದ್ದು ಮುಸ್ಲಿಂ ಯುವಕನೇ ಎಂದು ಬೂಮ್‌ಲೈವ್ ಹಾಗೂ ನ್ಯೂಸ್‌ಚೆಕ್ಕರ್ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.

ಗುಂಡಣ್ಣ



ಪ್ರಯತ್ನ ಸಣ್ಣದಾದರೂ ಫಲಿತ ದೊಡ್ಡದು

ನುಡಿ ಬೆಳಗು

ಪಿ. ಚಂದ್ರಿಕಾ

ತಾಯಿಯೊಬ್ಬಳಿಗೆ ವಿಪರೀತ ಕಾಯಿಲೆ. ಮನೆಯಲ್ಲಿದ್ದದ್ದು ಶಾಲೆಗೆ ಹೋಗುತ್ತಿದ್ದ ಒಂದು ಪುಟ್ಟ ಮಗು ಮಾತ್ರ. ಕಾಯಿಲೆಯ ನಡುವೆಯೇ ತಾಯಿ ತನ್ನೆಲ್ಲಾ ಕೆಲಸವನ್ನು ಮಾಡುತ್ತಿದ್ದಳಾದರೂ ಹೊಳೆಯಿಂದ ನೀರು ತರುವುದು ಆಯಾಸದಿಂದಾಗಿ ಆಗುತ್ತಲೇ ಇರಲಿಲ್ಲ. ಇದನ್ನು ಆ ಹುಡುಗ ಗಮನಿಸುತ್ತಲೇ ಇದ್ದ. ಅವನಿಗೆ ತನ್ನ ತಾಯಿಗೆ ತಾನೇನಾದರೂ ಸಹಾಯ ಮಾಡಬೇಕು ಎನ್ನಿಸುತ್ತಿತ್ತು. ಆದರೆ ಏನು ಮಾಡಲಿ ಎನ್ನುವುದೇ ಯೋಚನೆ ಆಗಿತ್ತು.

ಒಮ್ಮೆ ಹೊಳೆಯಿಂದ ಕಾಲುವೆ ತೆಗೆದು ಗದ್ದೆಗೆ ನೀರು ಕಟ್ಟುತ್ತಿದ್ದುದನ್ನು ನೋಡಿದ ಹುಡುಗ, ಸೀದಾ ಮನೆಗೆ ಬಂದು ಸಲಿಕೆಯನ್ನು ತೆಗೆದುಕೊಂಡು ಹೊರಟ. ಊರ ಜನ ಅವನನ್ನು ‘ಎಲ್ಲಿಗೆ ಹೋಗುತ್ತಿರುವೆ’ ಎಂದು ಕೇಳಿದರು. ಅದಕ್ಕವನು ‘ನನ್ನ ತಾಯಿಗೆ ಹೊಳೆಗೆ ಹೋಗಿ ನೀರನ್ನು ತರಲು ಆಗುವುದಿಲ್ಲ. ಅದಕ್ಕೆ ಹೊಳೆಯನ್ನೇ ಮನೆಯ ಬಳಿ ತರುತ್ತೇನೆ’ ಎಂದ.

‘ಅಯ್ಯೋ ಹುಚ್ಚಪ್ಪ ಅದೆಲ್ಲಾದರೂ ಸಾಧ್ಯವಾ? ಹೊಳೆಯು ದಿಕ್ಕನ್ನು ಬದಲಿಸಿ ನಿನ್ನ ಮನೆಯ ವರೆಗೂ ಬರುತ್ತದಾ’ ಎಂದರು. ಹುಡುಗ ಹಟ ಬಿಡಲಿಲ್ಲ. ತನ್ನ ಪುಟ್ಟ ಕೈಗಳಿಂದ ಹೊಳೆಯಿಂದ ಮನೆಯ ವರೆಗೂ ಒಂದು ಗೆರೆಯನ್ನು ಎಳೆದ. ಆಡಿಕೊಂಡ ಜನ ಗಂಭೀರರಾದರು. ತನ್ನ ಪುಟ್ಟ ಕೈಗಳಿಂದ ಮನೆಯ ವರೆಗೂ ಕಾಲುವೆ ತೋಡಲು ಆರಂಭಿಸಿದ. ಆಗ ಜನರಿಗೆ ‘ಈ ಪುಟ್ಟ ಹುಡುಗನೇ ಇಷ್ಟು ಪ್ರಯತ್ನ ಪಡುವಾಗ ನಾವ್ಯಾಕೆ ಸುಮ್ಮನೆ ಕೂರಬೇಕು? ನಾವೂ ಈ ಪ್ರಯತ್ನದಲ್ಲಿ ಭಾಗಿಯಾದರೆ ನಮ್ಮ ಮನೆಯ ಹೆಣ್ಣುಮಕ್ಕಳೂ ಆರಾಮಾಗಿರಬಹುದಲ್ಲಾ’ ಎಂದೆನ್ನಿಸಿತು.

ಒಬ್ಬೊಬ್ಬರೇ ಆ ಹುಡುಗನ ಜೊತೆ ಕೈ ಜೋಡಿಸುತ್ತಾ ಬಂದರು. ಪೈಪು, ಮೋಟಾರು ಹೀಗೆ ತಮಗೆ ಕೈಲಾದದ್ದನ್ನೆಲ್ಲಾ ತಂದು ಹೊಳೆಯಿಂದ ಮನೆಯ ಬಾಗಿಲಿಗೆ ನೀರು ಬರುವಂತೆ ಮಾಡಿದರು. ಪುಟ್ಟ ಹುಡುಗನ ಅಂತಃಕರಣದ ಸಂಕಲ್ಪದಿಂದ ಇಡೀ ಊರಿಗೇ ನೀರಿನ ವ್ಯವಸ್ಥೆಯಾಯಿತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಸೆಪ್ಟೆಂಬರ್ 12, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ತ್ರಯೋದಶಿ ಗಂ. 26-22 ನಕ್ಷತ್ರ: ಆಶ್ಲೇಷ ಗಂ. 23-01 ಯೋಗ: ಶಿವ ಗಂ. 25-11 ಕರಣ: ಗರ ಗಂ. 13-07, ಸಿಂಹ ಮಾಸದ 26 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 4. ರಾಹುಕಾಲ : ಮಧ್ಯಾಹ್ನ 03-00 – 04-30, ಸೂರ್ಯೋದಯ : 06-23 ಸೂರ್ಯಾಸ್ತ : 06-31 , ಮುಸ್ಲಿಂ ದಿನಾಂಕ : 26 ಸಫರ್, ದಿನ ವಿಶೇಷ : ಸಂವತ್ಸರಿ (ಚತುರ್ಥಿಪಕ್ಷ-ಜೈನ್) (ಪಂಚಮಿಪಕ್ಷ-ಜೈನ್), ಕೈಲಾಸ ಯಾತ್ರಾ ಮೂರನೇ ದಿನ
ಅದೃಷ್ಟ ಸಂಖ್ಯೆ : 8, 10

ಮೇಷ: ಕೈಗೂಂಡ ಕಾರ್ಯ ಸಫಲವಾಗಲಿದೆ. ಆಹಾರದಲ್ಲಿ ಪಥ್ಯ ಮಾಡುವುದರಿಂದ ಆರೋಗ್ಯದಲ್ಲಿ ಸುಧಾರಣೆ. ಮಗಳಿಗೆ ಉತ್ತಮ ಉದ್ಯೋಗ ದೊರೆತು ಸಂತಸ. ಪಾಲುದಾರರ ಮಾತಿನಲ್ಲಿ ವಿಶ್ವಾಸವಿಡಬಹುದು.

ವೃಷಭ: ದುಂದುವೆಚ್ಚ ಮಾಡುವ ಸಂದರ್ಭದಲ್ಲಿ ಹೆಚ್ಚಿನ ಆಲೋಚನೆ ಮಗಳ ಮದುವೆಯ ಖರ್ಚಿನ ಬಗ್ಗೆ ಇರಲಿ. ವಿಷ್ಣುಸಹಸ್ರ ನಾಮದ ಪಠಣೆಯಿಂದ ಮನಸ್ಸಿಗೆ ನೆಮ್ಮದಿ ಸಿಗುವುದು. ಸಕ್ರಿಯತೆ ಹಾಗೂ ಕಾರ್ಯಮಗ್ನತೆ ಇರಲಿದೆ.

ಮಿಥುನ: ಕಷ್ಟ-ಸುಖಗಳಿಗೆ ನೆರವಾಗುವ ಮನೋಭಾವ ಬೆಳೆಸಿಕೊಳ್ಳಿ. ಧಾರ್ಮಿಕ ಸಭೆ ಸಮಾರಂಭದ ಮುಂದಾಳತ್ವ ವಹಿಸಿಕೊಳ್ಳಲು ಹಿಂಜರಿಕೆ ಬೇಡ. ವಿದೇಶದಿಂದ ಸ್ನೇಹಿತರ ಆಗಮನ ಅತ್ಯಂತ ಸಂತೋಷ ತರಲಿದೆ.

ಕರ್ಕಾಟಕ: ಕೊಟ್ಟ ಮಾತನ್ನು ಉಳಿಸಿ ಕೊಳ್ಳುವ ಮಾರ್ಗದಲ್ಲಿ ಪ್ರತಿ ಹೆಜ್ಜೆ ಇರಲಿ. ಕೆಲಸದತ್ತ ಹೆಚ್ಚಿನ ಗಮನ ಹರಿಸಿ ಮತ್ತು ದಿನಕ್ಕಿಂತ ಹೆಚ್ಚಿನ ಸಮಯ ನೀಡಿ. ರಾಜಕೀಯ ವ್ಯಕ್ತಿಗಳ ಜತೆಗಿನ ವ್ಯವಹಾರದಲ್ಲಿ ಅತ್ಯಂತ ಲಾಭ ಹೊಂದುವಿರಿ.

ಸಿಂಹ: ಪಾಲುಗಾರರಲ್ಲಿ ಮುಖಾಮುಖಿ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುವುದು ಒಳ್ಳೆಯದು. ಸರ್ಕಾರಿ ಕಚೇರಿಗಳಿಗೆ ಅಲೆದಾಟ ಹೆಚ್ಚಾಗಿ ಹಣದ ಖರ್ಚಿಗೆ ಕಾರಣವಾದೀತು. ರಾಜಕೀಯ ಭವಿಷ್ಯಕ್ಕೆ ಮೋಡಕವಿದಂತೆ ಆಗುತ್ತದೆ.

ಕನ್ಯಾ: ನಾಯಕತ್ವದ ಗುಣಗಳನ್ನು ಪ್ರದರ್ಶಿಸಲು ಉತ್ತಮವಾದ ವೇದಿಕೆ ಸಿಗಲಿದೆ. ನಿರುದ್ಯೋಗಿಗಳಿಗೆ ಅನಿರೀಕ್ಷಿತವಾಗಿ ಲೆಕ್ಕ ಪತ್ರಗಳ ಜವಾಬ್ದಾರಿ ನೋಡುವ ಉದ್ಯೋಗ ಪ್ರಾಪ್ತಿ. ಇದರಿಂದಾಗಿ ದೇಹಾಲಸ್ಯ ನೀಗುವುದು.

ತುಲಾ: ಸುತ್ತಮುತ್ತಲಿನವರ ಬಗ್ಗೆ ನೀವು ಮೌನದಿಂದಿರುವುದು ವ್ಯಕ್ತಿತ್ವಕ್ಕೆ ಶೋಭೆ ತರುವುದು. ಮಗನ ಮೇಲಿನ ನಂಬಿಕೆಯು ಕಡಿಮೆಯಾಗುವ ಪ್ರಸಂಗ ನಡೆಯಬಹುದು. ಕೆಲಸದ ಕಾರಣವಾಗಿ ಕಿರು ಸಂಚಾರದ ಯೋಗವಿದೆ.

ವೃಶ್ಚಿಕ: ವ್ಯಾಪಾರ ವ್ಯವಹಾರಗಳಲ್ಲಿ ತುಸು ಚೇತರಿಕೆ ಕಂಡುಬಂದು ಮುಂದುವರಿಯಲು ಸಹಾಯ. ಕಂಟ್ರಾಕ್ಟರುಗಳು ಮತ್ತು ಬಿಲ್ಡರ್ಸರುಗಳಿಗೆ ಅನುಕೂಲಕರ ದಿನ. ವಾದವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ಧನು: ಮಹಿಳೆಯರಿಗೆ ಉಪಯೋಗಕ್ಕೆ ಬಾರದ ವಿಚಾರದ ಬಗೆಗಿನ ಚಿಂತನೆಯು ಆರೋಗ್ಯವನ್ನು ಹಾಳು ಮಾಡುತ್ತದೆ. ತಂದೆ ತಾಯಿಯವರ ತೀರ್ಥಯಾತ್ರೆಗಳಿಗಾಗಿ ಹಣ ಒಳ್ಳೆಯ ರೀತಿಯಲ್ಲಿ ವಿನಿಯೋಗ ಆಗುವುದು.

ಮಕರ: ನೂತನ ಅಧಿಕಾರಿಗಳ ಆಗಮನದಿಂದ ಕಚೇರಿಯಲ್ಲಿ ಹೆಚ್ಚಿನ ಕೆಲಸಗಳು ತೋರಿಬರಲಿದೆ. ಹಣ್ಣು-ಹೂವಿನ ಮಾರಾಟಮಾಡುವವರಿಗೆ ಅಧಿಕ ಲಾಭದ ನಿರೀಕ್ಷೆ ಸರಿಯಲ್ಲ. ಧನಾಗಮನ ಹೆಚ್ಚಿದ್ದರೂ ವೆಚ್ಚವಾಗಲಿದೆ.

ಕುಂಭ: ಅಭಿರುಚಿಗೆ ತಕ್ಕಂಥ ಮನಸ್ಥಿತಿಯನ್ನು ಹೊಂದಿದ ವ್ಯಕ್ತಿಗಳೊಂದಿಗೆ ವ್ಯವಹರಿಸುವುದು ಹೆಚ್ಚು ಸೂಕ್ತ. ಒಂಟಿತನ ಹೋಗಲಾಡಿಸಿಕೊಳ್ಳಲು ಹೊಸ ಹೊಸ ಕೆಲಸಗಳತ್ತ ಮನಸ್ಸು ಹರಿಸುವ ಪ್ರಯತ್ನವನ್ನು ಮಾಡಿ.

ಮೀನ: ಯಾವುದೇ ಸಂಕೋಚವಿಲ್ಲದೆ ನೂತನ ಕಾರ್ಯಭಾರವನ್ನು ಹೆಗಲಿಗೇರಿಸಿಕೊಳ್ಳಿ. ಏಕೆಂದರೆ ನಂಬುಗೆ ಮತ್ತು ವಿಶ್ವಾಸದಿಂದಾಗಿ ಈ ಅವಕಾಶಗಳು ನಿಮ್ಮದಾಗಲಿದೆ. ಸಂಜೆ ನಿಮ್ಮ ಸ್ನೇಹಿತರ ಜೊತೆ ಕಾಲ ಕಳೆಯುವಿರಿ.

ಪದಬಂಧ 5439 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಈ ಅನುಭವಿ ಸಂಸಾರ ಬಂಧನಕ್ಕೆ ಒಳಗಾದವನು! (2)
3. ಇದು ಸದುಪಯೋಗವಂತೂ ಅಲ್ಲವೇ ಅಲ್ಲ! (5)
5. ಗುರಾಯಿಸದಿರಿ! ಇದು ಭಾರವಿಲ್ಲ! (3)
7. ಅಂತರಂಗದ ಸಾಕ್ಷಿಯಿದು (4)
9. ಮರಗಿಡಗಳ ಗುಂಪು (2)
11. ಹಬ್ಬಹರಿದಿನಗಳಲ್ಲಿ ಅಲಂಕರಣಕ್ಕಾಗಿ ಕಟ್ಟುವ ಮಾಲೆ (3)
12. ನಾವೆಲ್ಲರೂ ಹತ್ತುವ ದೋಣಿ ಉಲ್ಟಾ ಆಗಿಬಿಟ್ಟಿದೆ (2)
13. ವರನಿಗೆ ಕೇಳಿಸಿದ ಮಧುರವಾದ ಧ್ವನಿ (4)
14. ಲಾಲನೆ ಮಾಡುತ್ತಿರುವ ಸ್ತ್ರೀ! (3)
17. ಕೊನೆಗೆ ಮಣೆಯಿಟ್ಟರೆ ಹುಚ್ಚು ಕಂಡೀತೇ? (5)
18. ಪುಸ್ತಕದ ಹಾಳೆಯ ಒಂದು ಮಗ್ಗುಲು (2)

ಮೇಲಿಂದ ಕೆಳಕ್ಕೆ
2. ಗ್ರಹ ಬಡಿದಿರುವ ಪ್ರತಿಮೆ! (3)
3. ಈ ಹಣವಿದ್ದರೆ ಮಾತ್ರ ದೊಡ್ಡಪ್ಪ! (2)
4. ಹೋದೆಯಾ ಪಿಶಾಚಿ ಅಂದಾಗ ಪ್ರತ್ಯಕ್ಷವಾಗಿರುವ ಕಿಟಕಿ! (3)
6. ರಜದಲ್ಲಿ ಆಚರಿಸಿಕೊಂಡಿರುವ ಬೆಳ್ಳಿ ಹಬ್ಬ (5)
7. ಇದು ಸಾಯುವ ಸಮಯ ಕಣ್ರೆ! (5)
8. ಒಗ್ಗರಣೆಗೆ ಹಾಕುವ ಕಾಳು (3)
10. ಪುಕ್ಕ ಹಿಡಿದಿದ್ದಾನಲ್ಲಾ ಈ ಅಂಜುಬುರುಕ! (3)
13. ಹಸುವಿನ ಮರಿ ಬಗ್ಗೆ ಈ ಹೊಟ್ಟೆಕಿಚ್ಚು! (3)
15. ಒನಪು ತೋರಿದಾಗ ಬಂದಿರುವ ಸ್ಮರಣೆ (3)
16. ಜಾಗರಣೆ ಮಾಡಿರುವ ಬುದ್ಧಿವಂತೆ! (2)



5438ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಗಂತುಕ 3.ಪರಿಹಾರ 5.ಸರತಿ 6.ಹವನ 8.ಲೋಲಕ 9.ಸನ್ನಿತ್ರ 10.ಚುಂಬನ 11.ಕಣಜ 12.ಕಡಿಮೆ 14.ವಕ್ತಾರ 16.ಕಡವರ 17.ನಟ್ಟಿರುಳು

ಮೇಲಿಂದ ಕೆಳಕ್ಕೆ:
1.ಆಗ್ರಹ 2.ಕಸ 3.ಪತಿ 4.ರಸಿಕ 7.ನಕ್ಷತ್ರಪುಂಜ 8.ಲೋಹಚುಂಬಕ 11.ಕನಕ 13.ಮೆದುಳು 14.ವರ 15.ರನ

ಸುಡೊಕು 5825

		5		8		4		
	8		7		5		1	9
7		1		6		2		
							3	2
3	6		5		7	8		
		8					4	7
		7		5		1		3
5			9		8		2	4
2		3					8	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5824 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,819
ಇಂದಿನ ಅಂತ್ಯ	19,996
▲	177
ದಿನದ ಗರಿಷ್ಠ	20,008

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹500

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1740(1720)
ಸೋಯಾ (ರಿಫೈನ್ಡ್)	₹885(900)
ಸೂರ್ಯಕಾಂತಿ (ರಿಫೈನ್ಡ್)	₹895(905)
ಪಾಮೋಲಿನ್	₹822(832)

ಮುದ್ರಮನೆ ಕಾಫಿ

(50 ಕೆಜಿಗೆ)	
ಎಪಿ	₹12400
ಎಸಿ	₹6860
ಆರ್‌ಪಿ	₹10100
ಆರ್‌ಸಿ	₹5830

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)	
ತಿಪಟೂರು	₹7500-8300
ತುರುವೇಕೆರೆ	₹8200-8200

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹144.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹126

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹305-551
ದ್ವಿತಳಿ (ಬಿ.ವಿ)	₹335-672

ಎಸ್‌ಐಪಿ: ದಾಖಲೆಯ ಹೂಡಿಕೆ

ಮುಂಬೈ (ಪಿಟಿಐ): ಆಗಸ್ಟ್ ತಿಂಗಳಲ್ಲಿ ಹೂಡಿಕೆದಾರರು ಮ್ಯೂಚುವಲ್ ಫಂಡ್ ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ದಾಖಲೆಯ ₹15,813 ಕೋಟಿ ಹೂಡಿಕೆ ಮಾಡಿದ್ದಾರೆ. ಆಗಸ್ಟ್‌ನಲ್ಲಿ ಸಾಲಪತ್ರ ಆಧಾರಿತ (ಡೆಟ್) ಯೋಜನೆಗಳಿಂದ ನಿವ್ವಳ ₹25,872 ಕೋಟಿಯನ್ನು ಹಿಂಪಡೆದಿದ್ದಾರೆ.

ಜುಲೈ ತಿಂಗಳಲ್ಲಿ ಹೂಡಿಕೆದಾರರು ₹15,244 ಕೋಟಿಯನ್ನು ಎಸ್‌ಐಪಿ ಮೂಲಕ ತೊಡಗಿಸಿದ್ದು ಅದುವರೆಗಿನ ದಾಖಲೆಯಾಗಿತ್ತು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟದ (ಎಎಂಎಫ್‌ಐ) ಮುಖ್ಯ ಕಾರ್ಯನಿರ್ವಾಹಕ ಎನ್.ಎಸ್. ವೆಂಕಟೇಶ್ ತಿಳಿಸಿದ್ದಾರೆ.

ಆಗಸ್ಟ್‌ನಲ್ಲಿ ಹೂಡಿಕೆದಾರರು ದಾಖಲೆಯ 35 ಲಕ್ಷ ಹೊಸ ಎಸ್‌ಐಪಿಗಳನ್ನು ಆರಂಭಿಸಿದ್ದಾರೆ. ಸಣ್ಣ ಹೂಡಿಕೆದಾರರು ಬಂಡವಾಳ ಮಾರುಕಟ್ಟೆಯಲ್ಲಿ ಹಣ ತೊಡಗಿಸುವುದನ್ನು ಮುಂದುವರಿಸಲಿದ್ದಾರೆ ಎಂಬುದನ್ನು ಎಸ್‌ಐಪಿ ಹರಿವು ಸೂಚಿಸುತ್ತಿದೆ ಎಂದು ವೆಂಕಟೇಶ್ ಹೇಳಿದ್ದಾರೆ.

ಆಗಸ್ಟ್‌ನಲ್ಲಿ ಒಟ್ಟು 19.58 ಲಕ್ಷ ಎಸ್‌ಐಪಿ ಹೂಡಿಕೆಗಳು ಸ್ಥಗಿತಗೊಂಡಿವೆ ಅಥವಾ ಅವಧಿ ಪೂರ್ಣಗೊಳಿಸಿವೆ. ಇದು ಕೂಡ ಒಂದು ದಾಖಲೆ. ಜುಲೈ ತಿಂಗಳಲ್ಲಿ ಈ ಸಂಖ್ಯೆ 17 ಲಕ್ಷ ಆಗಿತ್ತು ಎಂದು ಅವರು ಹೇಳಿದ್ದಾರೆ.

ದೇಶದ ಮ್ಯೂಚುವಲ್ ಫಂಡ್ ಉದ್ದಿಮೆಯು ನಿರ್ವಹಣೆ ಮಾಡುತ್ತಿರುವ ಸಂಪತ್ತಿನ ಒಟ್ಟು ಮೊತ್ತವು ಆಗಸ್ಟ್ ಅಂತ್ಯಕ್ಕೆ ₹46.93 ಲಕ್ಷ ಕೋಟಿಗೆ ತಲುಪಿದೆ. ಎಸ್‌ಐಪಿ ಮೂಲಕ ಹೂಡಿಕೆದಾರರು ನಿಶ್ಚಿತ ಮೊತ್ತವನ್ನು ಪ್ರತಿ ತಿಂಗಳು ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸಬಹುದು.

ಆಗಸ್ಟ್‌ನಲ್ಲಿ ಚಿನ್ನದ ವಿನಿಮಯ ವಹಿವಾಟು ನಿಧಿಗಳು (ಇಟಿಎಫ್) ₹1,000 ಕೋಟಿಗಿಂತ ಹೆಚ್ಚಿನ ಹೂಡಿಕೆಯನ್ನು ಸೆಳೆದಿವೆ. ಇದಕ್ಕೆ ಕಾರಣ ಚಿನ್ನದ ಬೆಲೆಯಲ್ಲಿ ಆಗಿರುವ ತುಸು ಇಳಿಕೆ ಎಂದು ವೆಂಕಟೇಶ್ ಅಭಿಪ್ರಾಯಪಟ್ಟಿದ್ದಾರೆ.

ಮುಂಗಾರು ಹಂಗಾಮು ಅವಧಿ: ಕೃಷಿ ಸಚಿವಾಲಯ ಮಾಹಿತಿ

ಇಳಿಕೆ ಕಂಡ ಬೇಳೆಕಾಳು ಬಿತ್ತನೆ

ನವದೆಹಲಿ (ಪಿಟಿಐ): ಮುಂಗಾರು ಮಳೆ ವಾಡಿಕೆಗಿಂತ ಕಡಿಮೆ ಪ್ರಮಾಣದಲ್ಲಿ ಸುರಿದ ಪರಿಣಾಮವಾಗಿ ಪ್ರಸಕ್ತ ಹಂಗಾಮಿನಲ್ಲಿ ಸೆಪ್ಟೆಂಬರ್ 8ರವರೆಗೆ ಬೇಳೆಕಾಳುಗಳ ಬಿತ್ತನೆಯು ಕರ್ನಾಟಕ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ಇಳಿಕೆ ಕಂಡಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈವರೆಗೆ ದೇಶದಲ್ಲಿ ಬೇಳೆಕಾಳು ಬಿತ್ತನೆಯು ಶೇ 8.58ರಷ್ಟು ಇಳಿಕೆ ಆಗಿದ್ದು, ಒಟ್ಟು 119.91 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಿದೆ ಎಂದು ಕೃಷಿ ಸಚಿವಾಲಯ ಮಾಹಿತಿ ನೀಡಿದೆ.

ಕರ್ನಾಟಕದಲ್ಲಿ ಕಳೆದ ವರ್ಷ 20.07 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೇಳೆಕಾಳು ಬಿತ್ತನೆ ನಡೆದಿತ್ತು. ಈ ವರ್ಷ ಈವರೆಗೆ 16.70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ಆಗಿದೆ.

ಮಧ್ಯಪ್ರದೇಶದಲ್ಲಿ ಬಿತ್ತನೆಯು 23.44 ಲಕ್ಷ ಹೆಕ್ಟೇರ್‌ನಿಂದ 19.72 ಲಕ್ಷ ಹೆಕ್ಟೇರ್‌ಗೆ ಇಳಿಕೆ ಕಂಡಿದೆ.

ಮಹಾರಾಷ್ಟ್ರದಲ್ಲಿ ಬೇಳೆಕಾಳು ಬಿತ್ತನೆ 18.89 ಲಕ್ಷ ಹೆಕ್ಟೇರ್‌ನಿಂದ 16.15 ಲಕ್ಷ ಹೆಕ್ಟೇರ್‌ಗೆ ಇಳಿಕೆಯಾಗಿದೆ. ಆದರೆ, ರಾಜಸ್ಥಾನದಲ್ಲಿ ಬೇಳೆಕಾಳು ಬಿತ್ತನೆಯು 33.99 ಲಕ್ಷ ಹೆಕ್ಟೇರ್‌ನಿಂದ 35.30 ಲಕ್ಷ ಹೆಕ್ಟೇರ್‌ಗೆ ಏರಿಕೆ ಕಂಡಿದೆ.

ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮುಂಗಾರು ಬೆಳೆಗಳ ಬಿತ್ತನೆ ಕಾರ್ಯ ನಡೆಯುತ್ತದೆ. ಭತ್ತವು ಮುಂಗಾರಿನ ಪ್ರಮುಖ ಬೆಳೆಯಾಗಿದ್ದು, ಬೇಳೆಕಾಳು, ಎಣ್ಣೆಕಾಳುಗಳು, ಹತ್ತಿ ಮತ್ತು ಕಬ್ಬು ಸಹ ಬೆಳೆಯಲಾಗುತ್ತದೆ. ಹುರುಳಿ ಬಿತ್ತನೆ 13.68 ಲಕ್ಷ ಹೆಕ್ಟೇರ್‌ನಿಂದ 31 ಸಾವಿರ ಹೆಕ್ಟೇರ್‌ಗೆ ಇಳಿಕೆಯಾಗಿದೆ. ಮುಂಗಾರು ಬೆಳೆಗಳ ಒಟ್ಟು ಬಿತ್ತನೆಯು ಸೆಪ್ಟೆಂಬರ್ 8ರ ಅಂತ್ಯಕ್ಕೆ 1,088.50 ಲಕ್ಷ ಹೆಕ್ಟೇರ್‌ನಷ್ಟು ಆಗಿದೆ. ಹಿಂದಿನ ವರ್ಷದ ಮುಂಗಾರು ಅವಧಿಯಲ್ಲಿ 1,088.02 ಲಕ್ಷ ಹೆಕ್ಟೇರ್‌ನಷ್ಟು ಬಿತ್ತನೆ ಆಗಿತ್ತು.



ಪ್ರಯಾಣಿಕ ವಾಹನ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಯುಟಿಲಿಟಿ ವಾಹನಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಪ್ರಯಾಣಿಕ ವಾಹನಗಳ ಸಗಟು ಮಾರಾಟವು ಆಗಸ್ಟ್‌ನಲ್ಲಿ ಶೇಕಡ 9ರಷ್ಟು ಏರಿಕೆ ಕಂಡಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟವು (ಎಸ್‌ಐಎಎಂ) ಸೋಮವಾರ ತಿಳಿಸಿದೆ.

2022ರ ಆಗಸ್ಟ್‌ನಲ್ಲಿ 3.28 ಲಕ್ಷ ವಾಹನಗಳು ಮಾರಾಟ ಆಗಿದ್ದವು. ಮಾರಾಟದ ಸಂಖ್ಯೆಯು 2023ರ ಆಗಸ್ಟ್‌ನಲ್ಲಿ 3.59 ಲಕ್ಷಕ್ಕೆ ಏರಿಕೆ ಕಂಡಿದೆ. ಯುಟಿಲಿಟಿ ವಾಹನಗಳ ಮಾರಾಟ ಶೇ 34ರಷ್ಟು ಹೆಚ್ಚಾಗಿದೆ.

ಆದರೆ, ಪ್ರಯಾಣಿಕ ಕಾರು ಮಾರಾಟ ಶೇ 10ರಷ್ಟು ಇಳಿಕೆ ಕಂಡು 1.20 ಲಕ್ಷಕ್ಕೆ ತಲುಪಿದೆ. 2022ರ ಆಗಸ್ಟ್‌ನಲ್ಲಿ 1.33 ಲಕ್ಷ ಪ್ರಯಾಣಿಕ ಕಾರುಗಳ ಮಾರಾಟ ಆಗಿತ್ತು ಎಂದು ಒಕ್ಕೂಟದ ಅಧ್ಯಕ್ಷ ವಿನೋದ್ ಅಗರ್ವಾಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ್ವಿಚಕ್ರ ವಾಹನ ಮಾರಾಟವು ಕಳೆದ ವರ್ಷದ ಆಗಸ್ಟ್‌ಗೆ ಸಮನಾಗಿದೆ. ಆದರೆ, ವಾಣಿಜ್ಯ ವಾಹನಗಳ ಮಾರಾಟದಲ್ಲಿ ಉತ್ತಮ ಬೆಳವಣಿಗೆ ಕಂಡುಬಂದಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಆಗಸ್ಟ್ ತಿಂಗಳ ಮಾರಾಟದ ಪ್ರಗತಿ ಆಧರಿಸಿ, ಮುಂಬರುವ ಹಬ್ಬದ ಋತುವಿನಲ್ಲಿ ಬೇಡಿಕೆ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಹೊಂದಲಾಗಿದೆ. ಆರ್ಥಿಕ ಬೆಳವಣಿಗೆಯ ಕುರಿತು ಸಕಾರಾತ್ಮಕ ಮುನ್ನೋಟ ಮತ್ತು ಮುಂಗಾರು ಚೇತರಿಸಿಕೊಳ್ಳುವ ಸೂಚನೆಯಿಂದಾಗಿ ಬೇಡಿಕೆ ಬರುವ ನಿರೀಕ್ಷೆ ಮಾಡಿರುವುದಾಗಿ ಅವರು ತಿಳಿಸಿದ್ದಾರೆ.

ಪ್ರಯಾಣಿಕ ವಾಹನ ವಿಭಾಗದಲ್ಲಿ ಮಾರುತಿ ಸುಜುಕಿ ಇಂಡಿಯಾದ ಮಾರಾಟ ಶೇ 16ರಷ್ಟು ಏರಿಕೆ ಕಂಡಿದೆ. ಹುಂಡೈ ಮೋಟರ್ ಇಂಡಿಯಾದ ಮಾರಾಟವು 49,510ರಿಂದ 53,830ಕ್ಕೆ ಏರಿಕೆಯಾಗಿದೆ ಎಂದು ಒಕ್ಕೂಟವು ಹೇಳಿದೆ.

‘ಬಾಹ್ಯಾಕಾಶ: ಎಫ್‌ಡಿಐ ನಿಯಮ ಸಡಿಲಿಕೆ ಚಿಂತನೆ’

ನವದೆಹಲಿ (ಪಿಟಿಐ): ಬಾಹ್ಯಾಕಾಶ ವಲಯದಲ್ಲಿ ವಿದೇಶಿ ಹೂಡಿಕೆದಾರರನ್ನು ಆಕರ್ಷಿಸುವ ಉದ್ದೇಶದಿಂದ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ನಿಯಮ ಸಡಿಲಿಸುವ ಆಲೋಚನೆಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ (ಡಿಪಿಐಐಟಿ) ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಹೇಳಿದ್ದಾರೆ.

ಭಾರತದಲ್ಲಿ ಹೂಡಿಕೆ ಮಾಡಲು ಸೌದಿ ಅರೇಬಿಯಾದ ಕಂಪನಿಗಳಿಗೆ ಹೆಚ್ಚಿನ ಅವಕಾಶ ಇದೆ. ವಿಮಾನಯಾನ, ಔಷಧ, ನವೀಕರಿಸಬಲ್ಲ ಇಂಧನ, ಆಹಾರ ಸಂಸ್ಕರಣೆ ಮತ್ತು ಕೃಷಿ ಸಂಬಂಧಿತ ತಂತ್ರಜ್ಞಾನ ವಲಯಗಳಲ್ಲಿ ಹೂಡಿಕೆಗೆ ಅವಕಾಶ ಇದೆ ಎಂದಿದ್ದಾರೆ.

2022-23ರಲ್ಲಿ ₹4.38 ಲಕ್ಷ ಕೋಟಿ ಮೌಲ್ಯದ ದ್ವಿಪಕ್ಷೀಯ ವಹಿವಾಟು ನಡೆದಿದೆ. 2021-22ರಲ್ಲಿ ₹73,040 ಕೋಟಿ ಮೌಲ್ಯದ ದ್ವಿಪಕ್ಷೀಯ ವಹಿವಾಟು ನಡೆದಿತ್ತು.

20 ಸಾವಿರ ದಾಟಿದ ನಿಫ್ಟಿ

ಮುಂಬೈ (ಪಿಟಿಐ): ರಾಷ್ಟ್ರೀಯ ಷೇರುಪೇಟೆ (ಎನ್‌ಎಸ್‌ಇ) ಸಂವೇದಿ ಸೂಚ್ಯಂಕ ನಿಫ್ಟಿ ಇದೇ ಮೊದಲ ಬಾರಿಗೆ 20 ಸಾವಿರದ ಗಡಿ ದಾಟಿದೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಮತ್ತೆ 67 ಸಾವಿರದ ಗಡಿ ದಾಟಿದೆ.

ದೇಶಿ ಹೂಡಿಕೆದಾರರು ಷೇರುಗಳ ಖರೀದಿಯಲ್ಲಿ ಹೆಚ್ಚು ಆಸಕ್ತಿ ತೋರಿಸಿದ್ದು ಸೂಚ್ಯಂಕಗಳ ಏರಿಕೆಗೆ ನೆರವಾಗಿ ಬಂದಿದೆ.

ಜಿ20 ಗುಂಪಿನ ಸಭೆಯ ಯಶಸ್ಸು ಹಾಗೂ ರಿಲಯನ್ಸ್, ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳ ಖರೀದಿ ಭರಾಟೆಯು ಕೂಡ ಸೂಚ್ಯಂಕಗಳ ಏರಿಕೆಗೆ ಇಂಬು ನೀಡಿದವು ಎಂದು ವರ್ತಕರು ಹೇಳಿದ್ದಾರೆ.

ಸೋಮವಾರದ ವಹಿವಾಟಿನ ಅಂತ್ಯಕ್ಕೆ ಸೆನ್ಸೆಕ್ಸ್ 528 ಅಂಶ ಏರಿಕೆ ಕಂಡು, 67,127ಕ್ಕೆ ತಲುಪಿದೆ. ದಿನದ ವಹಿವಾಟಿನ ನಡುವಿನಲ್ಲಿ ನಿಫ್ಟಿ 20,008ರವರೆಗೆ ತಲುಪಿತ್ತು. ದಿನದ ವಹಿವಾಟಿನ ಕೊನೆಯಲ್ಲಿ 19,996 ಅಂಶಗಳಿಗೆ ತಲುಪಿತು.

‘ಜಾಗತಿಕ ಮಟ್ಟದಲ್ಲಿ ಆರ್ಥಿಕ ಪರಿಸ್ಥಿತಿ ಸ್ಥಿರವಾಗಿಲ್ಲ. ಹೀಗಿರುವಾಗ, ಬಾಹ್ಯಾಕಾಶ ಯೋಜನೆಗಳಲ್ಲಿನ ಸಾಧನೆ ಮತ್ತು ವಿದೇಶಾಂಗ ವ್ಯವಹಾರಗಳಲ್ಲಿ ರಾಜತಾಂತ್ರಿಕ ಮಟ್ಟದಲ್ಲಿನ ಸಾಧನೆಯು ಭಾರತದ ಷೇರುಪೇಟೆಗಳಲ್ಲಿ ತೇಜಿ ವಹಿವಾಟಿಗೆ ನೆರವಾಗಿವೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸಿಇಒ ಧೀರಜ್ ರೆಲ್ಲಿ ಹೇಳಿದ್ದಾರೆ.

‘ರಿಸ್ಕ್ ಕಡಿಮೆ ಮಾಡಿಕೊಳ್ಳಿ’

‘ನಿಫ್ಟಿ ಈ ಹಣಕಾಸು ವರ್ಷದಲ್ಲಿ ಶೇ 13ಕ್ಕಿಂತ ಹೆಚ್ಚು ಜಿಗಿತ ಕಂಡಿದೆ. ಈ ಬಾರಿ ಸ್ಮಾಲ್ ಕ್ಯಾಪ್ ಹಾಗೂ ಮಿಡ್ ಕ್ಯಾಪ್ ವಲಯದ ಷೇರುಗಳು ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡಿವೆ. ಈ ಸಂದರ್ಭದಲ್ಲಿ ಹೂಡಿಕೆದಾರರು ತಮ್ಮ ರಿಸ್ಕ್ ಪ್ರಮಾಣವನ್ನು ತುಸು ತಗ್ಗಿಸಿಕೊಳ್ಳುವುದು ವಿವೇಕಯುತ ಎಂಬುದು ನಮ್ಮ ಭಾವನೆ’ ಎಂದು ಎಕ್ಸಿಸ್ ಸೆಕ್ಯುರಿಟೀಸ್‌ನ ಸಿಇಒ ಪ್ರಣವ್ ಹರಿದಾಸನ್ ಹೇಳಿದ್ದಾರೆ.

ಹೂಡಿಕೆದಾರರು ಭಾರಿ ಏರಿಕೆ ಕಂಡಿರುವ ಷೇರುಗಳಿಂದ ಲಾರ್ಜ್ ಕ್ಯಾಪ್ ವಲಯದ ಷೇರುಗಳ ಕಡೆಗೆ ಮುಖ ಮಾಡಬಹುದು. ಸ್ಮಾಲ್ ಕ್ಯಾಪ್ ಹಾಗೂ ಮಿಡ್ ಕ್ಯಾಪ್ ವಲಯದ ಷೇರುಗಳ ವಿಚಾರವಾಗಿ ಹೂಡಿಕೆದಾರರು, ನಿರಂತರವಾಗಿ ಸಂಪತ್ತು ಸೃಷ್ಟಿಸಿರುವ ಕಂಪನಿಗಳಲ್ಲಿ ಹಣ ತೊಡಗಿಸುವುದು ಒಳಿತು ಎಂದು ಅವರು ಹೇಳಿದ್ದಾರೆ.

ಟಿ2: ಇಂದಿನಿಂದ ಅಂತರರಾಷ್ಟ್ರೀಯ ವಿಮಾನ ಹಾರಾಟ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರಲ್ಲಿ ಮಂಗಳವಾರದಿಂದ (ಸೆಪ್ಟೆಂಬರ್12) ಅಂತರರಾಷ್ಟ್ರೀಯ ವಿಮಾನಗಳ ಸಂಚಾರ ಆರಂಭವಾಗಲಿದೆ.

ಆಗಸ್ಟ್ 31ರಿಂದಲೇ ಇಲ್ಲಿಂದ ಅಂತರರಾಷ್ಟ್ರೀಯ ವಿಮಾನ ಸಂಚಾರ ಆರಂಭವಾಗಬೇಕಿತ್ತು. ಆದರೆ, ಕಾರಣಾಂತರಗಳಿಂದ ಕೊನೆಯ ಕ್ಷಣದಲ್ಲಿ ಸಂಚಾರ ಆರಂಭಿಸುವುದನ್ನು ಮುಂದೂಡಲಾಗಿತ್ತು.

ಏರ್ ಏಷ್ಯಾ, ಏರ್ ಇಂಡಿಯಾ, ಸ್ಟಾರ್ ಏರ್ ಹಾಗೂ ವಿಸ್ತಾರ ವಿಮಾನಯಾನ ಸಂಸ್ಥೆಗಳ ದೇಶಿ ವಿಮಾನಗಳು ಕೂಡ ಇಲ್ಲಿಂದ ಸಂಚರಿಸಲಿವೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಮುಂಬೈ ಧಾರಣೆ

ಶೇಂಗಾ

11-9-2023

ಜಾವಾ 70/80(ಹೊಸ)	12700-12800
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1750(1730)
ಒಂದು ವಾರದ ಡೆಲಿವರಿ	1745(1725)
ಸೋಯಾ ಕಚ್ಚಾ	833(848)
ಪಾಮ್ ವಾರದ ಡೆಲಿವರಿ	820(830)
ಸೂರ್ಯಕಾಂತಿ ಎಣ್ಣೆ ಕಚ್ಚಾ	830(835)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 58,000(58,800)
ಬೆಳ್ಳಿ ಕೆ.ಜಿ 71,400(70,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಶಿವಮೊಗ್ಗ		ಬೆಟ್ಟೆ	33899-43599
ಕುಮಟಾ		ಬೆಟ್ಟೆ	48633-52300	ಬಿಳಿಗೋಟು	25001-36409
ಚಿಪ್ಪು	31899-34909	ಗೊರಬಲು	17001-36899	ಚಾಲಿ	37509-42305
ಕೋಕ	20199-33619	ರಾಶಿ	42499-50599	ಕೆಂಪುಗೋಟು	32869-37499
ಹಳೆಚಾಲಿ	39899-41339	ಸರಕು	54769-81596	ರಾಶಿ	46099-49999
ಹೊಸಚಾಲಿ	37899-41019	ಸಿದ್ದಾಪುರ		ಯಲ್ಲಾಪುರ	
ಸಾಗರ		ಬಿಳಿಗೋಟು	32299-35399	ಬಿಳಿಗೋಟು	26899-36050
ಬಿಳಿಗೋಟು	17211-33989	ಕೋಕ	29099-34299	ಕೋಕ	24212-31899
ಕೋಕ	20290-33989	ಚಾಲಿ	38009-40639	ಚಾಲಿ	38151-418888
ಚಾಲಿ	34390-39099	ಕೆಂಪುಗೋಟು	33699-34189	ಕೆಂಪುಗೋಟು	26899-35605
ಕೆಂಪುಗೋಟು	29129-37155	ರಾಶಿ	45069-49099	ರಾಶಿ	48280-52899
ರಾಶಿ	33269-49999	ತಟ್ಟಿಬೆಟ್ಟೆ	38699-45099	ತಟ್ಟಿಬೆಟ್ಟೆ	37699-46810
ಸಿಪ್ಪೆಗೋಟು	11569-22899	ಶಿರಸಿ		ಆಪಿ	56200-59779

ರಿಲಯನ್ಸ್ ರಿಟೇಲ್‌ನಲ್ಲಿ ಕೆಕೆಆರ್ ₹2,069 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್‌ನಲ್ಲಿ ಜಾಗತಿಕ ಹೂಡಿಕೆ ಸಂಸ್ಥೆ ಕೆಕೆಆರ್ ಷೇರುಪಾಲನ್ನು ಶೇ 1.42ಕ್ಕೆ ಹೆಚ್ಚಿಸಿಕೊಳ್ಳಲು ₹2,069 ಕೋಟಿ ಹೂಡಿಕೆ ಮಾಡಲಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಸೋಮವಾರ ಹೇಳಿದೆ.

ಸದ್ಯ ಕೆಕೆಆರ್, ರಿಲಯನ್ಸ್ ರಿಟೇಲ್‌ನಲ್ಲಿ ಶೇ 1.17ರಷ್ಟು ಷೇರುಪಾಲನ್ನು ಹೊಂದಿದೆ.

ಈ ಹೂಡಿಕೆ ಒಪ್ಪಂದದಿಂದಾಗಿ ಈಕ್ವಿಟಿ ಮೌಲ್ಯದ ಲೆಕ್ಕದಲ್ಲಿ ದೇಶದ ಮುಂಚೂಣಿ ನಾಲ್ಕು ಕಂಪನಿಗಳಲ್ಲಿ ರಿಲಯನ್ಸ್ ರಿಟೇಲ್ ಸೇರಿಕೊಳ್ಳಲಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಷೇರುಪೇಟೆಗೆ ಮಾಹಿತಿ ನೀಡಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307

ಬೇಕಾಗಿದ್ದಾರೆ. SSLC, PUC, DEGREE ಯುವಕ ಯುವತಿಯರು ಬೇಕಾಗಿದ್ದಾರೆ.15,500/- ರಿಂದ 35,000/- Ph. 8861041526, 9945721526

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕೂಡಲೇ ಬೇಕಾಗಿದ್ದಾರೆ: 7th 8th 10th ಪಿಯುಸಿ, ಐಟಿಐ, ಡಿಪ್ಲೋಮ ಯಾವುದೇ ಪದವಿ ಪಾಸ್/ಫೇಲ್ ಹುದ್ದೆಗೆ ಕೂಡಲೇ ನೇರನೇಮಕಾತಿಗಾಗಿ ಕರೆಮಾಡಿ. 8884997575, 8884553030

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Drivers

ಆಟೋ ಚಾಲಕರು ಬೇಕಾಗಿದ್ದಾರೆ ಇಲೆಕ್ಟ್ರಿಕ್ ಆಟೋ ಬಾಡಿಗೆಗೆ ಲಭ್ಯವಿದೆ (ಬ್ಯಾಟರಿ ವೆಚ್ಚ ಕಂಪನಿ ಬರಿಸುತ್ತದೆ) ಪಾರ್ಟ್ ಟೈಮ್ /ಫುಲ್ ಟೈಮ್ ಹಾಗು ನೈಟ್ ಶಿಫ್ಟ್ ಲಭ್ಯವಿದೆ ಆಕರ್ಷಕ ಸಂಬಳ 20000/- ವರೆಗು ಪಡೆಯಿರಿ ಕೂಡಲೇ ಸೇರಿಕೊಳ್ಳೋವವರಿಗೆ ಆಕರ್ಷಕ ಬೋನಸ್ ನೀಡಲಾಗುಹುದು ಆಸಕ್ತಿ ಉಳ್ಳವರು ಮಿಸ್ ಕಾಲ್ ನೀಡಿ - 08068960971

ಭವಿಷ್ಯ

Astrology

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967

ಪ್ರವಾಸ

Travel

09.10.2023 13 ದಿನಗಳು ಚಾರ್ ಧಾಮ್‌ಯಾತ್ರೆ ವಿಮಾನದಲ್ಲಿ ಬೆಂಗಳೂರು ದೆಹಲಿ ಬೆಂಗಳೂರು. 2X2 ಬಸ್ಸಿನಲ್ಲಿ ಹರಿದ್ವಾರ್,ಯಮನೋತ್ರಿ ಗಂಗೋತ್ರಿ,ಕೇದಾರನಾಥ್ ಬದರಿನಾಥ್. ಹೆಲಿಕಾಪ್ಟರ್ ಮೂಲಕ ಕೇದಾರನಾಥ್ ದರ್ಶನ (ಘಾಟ ಕೇದಾರನಾಥ್) ಇಬ್ಬರಿಗೆ ಒಂದು ರೂಮ್ ವಸತಿ ದಕ್ಷಿಣಭಾರತ ಶೈಲಿಯ ಅಡುಗೆ ಪ್ರತಿ ಸೀಟಿಗೆ 62500 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ತತ್ವಮಸಿ ಟೂರ್ಸ್ 9480158233 7795787484

24.10.2023 ಗುಜರಾತ್, ಮಧ್ಯಪ್ರದೇಶ್ 25.10.2023 ನೇಪಾಳ,ಮುಕ್ತಿನಾಥ, ಕಾಶಿ, ಕೊಲ್ಕತ್ತಾ,ಭುವನೇಶ್ವರ್ 25.10.2023 ದೆಹಲಿ,ಅಮೃತ್ಸರ್, ವೈಷ್ಣೋದೇವಿ, ಹರಿದ್ವಾರ್,ಅಯೋಧ್ಯಾ, ಕಾಶಿ,ಗಯಾ, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಪ್ರಜಾವಾಣಿ

ಹೆಸರು ಬದಲಾವಣೆಗಾಗಿ

BOOK YOUR NAME CHANGE AD IN PRAJAVANI ALL KARNATAKA ALL DAYS

CHANGE OF NAME @ 50/-* Per Word

*conditions apply

For More Details Contact:
9731810277 | 9901641752
9845114560 | 9886213331
080- 45557160 | 163 | 164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಕಿಮ್–ಪುಟಿನ್ ಭೇಟಿ ಶೀಘ್ರ

ಸೋಲ್(ಎ.ಪಿ): ಉತ್ತರ ಕೊರಿಯಾದ ಅಧ್ಯಕ್ಷ ಕಿಮ್ ಜಾಂಗ್ ಉನ್ ಅವರು ಶೀಘ್ರದಲ್ಲಿಯೇ ರಷ್ಯಾಗೆ ಭೇಟಿ ನೀಡಲಿದ್ದು, ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಚರ್ಚೆ ನಡೆಸಲಿದ್ದಾರೆ. ರಷ್ಯಾ ಮತ್ತು ಉತ್ತರ ಕೊರಿಯಾ ಭೇಟಿಯನ್ನು ದೃಢಪಡಿಸಿವೆ.

ಈಗ ನಡೆದಿರುವ ಉಕ್ರೇನ್ ಜೊತೆಗಿನ ಯುದ್ಧದಲ್ಲಿ ರಷ್ಯಾಗೆ ಹೆಚ್ಚಿನ ಶಸ್ತ್ರಾಸ್ತ್ರ ಬಲ ನೀಡಬಹುದು ಎಂದು ಹೇಳಲಾಗಿದೆ. ರಷ್ಯಾದ ಅಧಿಕೃತ ವೆಬ್‌ಸೈಟ್‌ನಲ್ಲಿ ಈ ಕುರಿತು ಸಂಕ್ಷಿಪ್ತ ಮಾಹಿತಿ ಪೋಸ್ಟ್ ಮಾಡಲಾಗಿದೆ. ಪುಟಿನ್ ಅವರ ಆಹ್ವಾನದ ಮೇರೆಗೆ ಕಿಮ್ ‘ಬರುವ ದಿನಗಳಲ್ಲಿ’ ಭೇಟಿ ನೀಡುತ್ತಿದ್ದಾರೆ ಎಂದು ತಿಳಿಸಲಾಗಿದೆ.

ಯುಎಸ್ ಓಪನ್: ಭಾರತ ಮೂಲದ ವ್ಯಕ್ತಿ ವಿರುದ್ಧ ಕ್ರಿಮಿನಲ್ ಪ್ರಕರಣ

ನ್ಯೂಯಾರ್ಕ್ (ಪಿಟಿಐ): ಕಳೆದ ವಾರ ಪ್ರತಿಷ್ಠಿತ ಯುಎಸ್ ಓಪನ್ ಟೂರ್ನಿ ವೇಳೆ ಪಳೆಯುಳಿಕೆ ಇಂಧನ ಬಳಕೆ ನಿಲ್ಲಿಸುವಂತೆ ಆಗ್ರಹಿಸಿ ಕ್ರೀಡಾಂಗಣದ ಒಳಗೆ ನುಗ್ಗಿ ಟೆನಿಸ್ ಆಟಕ್ಕೆ ಅಡ್ಡಿಪಡಿಸಿದ್ದ ಭಾರತೀಯ ಮೂಲದ 50 ವರ್ಷದ ವ್ಯಕ್ತಿ ಸಯಾಕ್ ಮುಖ್ಯೋಪಾಧ್ಯಾಯ ಸೇರಿದಂತೆ ಇಬ್ಬರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ದೋಣಿ ಮುಗುಚಿ 28 ಮಂದಿ ಸಾವು

ಅಬುಜಾ, ನೈಜಿರಿಯಾ (ಎ.ಪಿ): ನೈಜಿರಿಯಾದ ಉತ್ತರ ಕೇಂದ್ರ ಭಾಗದಲ್ಲಿ ಭಾನುವಾರ ಪ್ರಯಾಣಿಕರ ದೋಣಿ ಮುಗುಚಿದ್ದು, ಕನಿಷ್ಠ 28 ಮಂದಿ ಸತ್ತಿದ್ದಾರೆ. ಮಕ್ಕಳು ಸೇರಿ ಹಲವರು ನಾಪತ್ತೆಯಾಗಿದ್ದಾರೆ. ದೋಣಿಯಲ್ಲಿ 100ಕ್ಕೂ ಹೆಚ್ಚು ಜನರಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊಕ್ವಾ ಜಿಲ್ಲೆಯ ನೈಜೆರ್‌ನಲ್ಲಿ ಅವಘಡ ಸಂಭವಿಸಿದೆ. ರಾಷ್ಟ್ರೀಯ ತುರ್ತು ನಿರ್ವಹಣಾ ಸಂಸ್ಥೆಯ ಮುಖ್ಯಸ್ಥ ಜೈನಬ್ ಸುಲೈಮಾನ್ ಪ್ರಕಾರ, 24 ಶವಗಳನ್ನು ಹೊರ ತೆಗೆಯಲಾಗಿದೆ. 30 ಜನರನ್ನು ರಕ್ಷಿಸಲಾಗಿದೆ.

ಮೊರೊಕ್ಕೊ ಭೂಕಂಪನ: ಮೃತರ ಸಂಖ್ಯೆ 2,681

ಇಂಗ್ಹಾಲ್/ರಾಬಟ್, ಮೊರೊಕ್ಕೊ (ರಾಯಿಟರ್ಸ್/ಎಎಫ್‌ಪಿ): ಮೊರೊಕ್ಕೊದಲ್ಲಿ ಸಂಭವಿಸಿದ್ದ ಭೂಕಂಪದಲ್ಲಿ ಮೃತಪಟ್ಟವರ ಸಂಖ್ಯೆ 2,681ಕ್ಕೆ ಏರಿದೆ. ಒಟ್ಟು 2,501 ಜನರು ಗಾಯಗೊಂಡಿದ್ದಾರೆ ಎಂದು ಗೃಹ ಸಚಿವಾಲಯ ಸೋಮವಾರ ಪ್ರಕಟಿಸಿದೆ.

ಭೂಕಂಪದ ತೀವ್ರತೆ ಹೆಚ್ಚಾಗಿದ್ದ ಮಾರುಕೇಶ್ ನಗರ ಸೇರಿದಂತೆ ವಿವಿಧೆಡೆ ಅವಶೇಷಗಳಡಿ ಸಿಲುಕಿ, ಬದುಕುಳಿದವರ ರಕ್ಷಣೆಗೆ ಶೋಧ ಕಾರ್ಯ ನಡೆದಿದೆ. ಸ್ಪೇನ್, ಬ್ರಿಟನ್, ಕತಾರ್‌ನಿಂದ ಆಗಮಿಸಿರುವ ರಕ್ಷಣಾ ತಂಡಗಳು ಶೋಧ ಕಾರ್ಯಕ್ಕೆ ಕೈಜೋಡಿಸಿವೆ.

ರಿಕ್ಟರ್ ಮಾಪಕದಲ್ಲಿ ದಾಖಲಾಗಿದ್ದ 6.8ರಷ್ಟು ತೀವ್ರತೆಯ ಭೂಕಂಪ ಶುಕ್ರವಾರ ರಾತ್ರಿ ಸಂಭವಿಸಿತ್ತು. ಆ ಬಳಿಕ ಸಂತ್ರಸ್ತರು ರಸ್ತೆಗಳಲ್ಲಿಯೇ ರಾತ್ರಿಗಳನ್ನು ಕಳೆದಿದ್ದಾರೆ. ಬಹುತೇಕ ಮನೆಗಳು ಜಖಂಗೊಂಡಿವೆ. ವಾಸಕ್ಕೆ ಯೋಗ್ಯವಲ್ಲದ ಸ್ಥಿತಿಗೆ ತಲುಪಿವೆ.

ನಾಪತ್ತೆಯಾದವರ ಸಂಖ್ಯೆಯನ್ನು ಸರ್ಕಾರ ಪ್ರಕಟಿಸಿಲ್ಲ. ಮಣ್ಣು, ಇಟ್ಟಿಗೆ ಬಳಸಿ ನಿರ್ಮಿಸಿದ್ದ ಮನೆಗಳು ಭೂಕಂಪದಿಂದ ಕುಸಿದಿವೆ. ರಕ್ಷಣಾ ತಂಡಗಳು ಹೋಗಲಾಗದ ಸ್ಥಿತಿ ಇದೆ. ರಸ್ತೆಗಳಲ್ಲಿ ಕಲ್ಲು, ಮಣ್ಣು ತುಂಬಿದೆ. ಸಂಚರಿಸಲು ಆಗದ ಸ್ಥಿತಿ ಇದೆ.

ರಕ್ಷಣಾ ಕಾರ್ಯವು ಮಂದಗತಿಯಲ್ಲಿದೆ. ರಕ್ಷಣಾ ತಂಡಗಳು ನಮ್ಮ ನೆರವಿಗೆ ಬಂದಿಲ್ಲ ಎಂದು ಬಹುತೇಕ ಕಡೆ ಸಂತ್ರಸ್ತರು ಆರೋಪಿಸಿದ್ದಾರೆ.

2 ಸಾವಿರ ಜನರ ಸಾವು (ಕೈರೊ ವರದಿ): ಉತ್ತರ ಆಫ್ರಿಕಾ ರಾಷ್ಟ್ರ ಲಿಬಿಯಾದ ಪೂರ್ವ ಭಾಗದಲ್ಲಿ ವಾರಾಂತ್ಯದಲ್ಲಿ ಅಬ್ಬರಿಸಿದ ಡೇನಿಯಲ್ ಚಂಡಮಾರುತದಿಂದ ಉಂಟಾದ ಪ್ರವಾಹದಲ್ಲಿ 2 ಸಾವಿರಕ್ಕೂ ಹೆಚ್ಚು ಜನರು ಸಾವಿಗೀಡಾಗಿದ್ದು, ಸಾವಿರಾರು ಮಂದಿ ಕಣ್ಮರೆಯಾಗಿದ್ದಾರೆ ಎಂದು ಪೂರ್ವ ಲಿಬಿಯಾದ ಪ್ರಧಾನಿ ಒಸಾಮಾ ಹಮದ್ ಹೇಳಿದ್ದಾರೆ.

ಭೂಕಂಪನ ಪೀಡಿತ ಮೊರೊಕ್ಕೊದ ಮಾರುಕೇಶ್‌ನಲ್ಲಿ ಅವಶೇಷಗಳಡಿ ಸಿಲುಕಿ ಬದುಕುಳಿದವರ ಪತ್ತೆ ಕಾರ್ಯದಲ್ಲಿ ತೊಡಗಿರುವ ರಕ್ಷಣಾ ಸಿಬ್ಬಂದಿ –ಎಎಫ್‌ಪಿ ಚಿತ್ರ

ಅಮೆರಿಕದಲ್ಲಿ ನಡೆದಿದ್ದ ಉಗ್ರರ ದಾಳಿ; ಅಗಲಿದವರಿಗೆ ಪುಷ್ಪನಮನ

9/11 ಕೃತ್ಯಕ್ಕೆ 22 ವರ್ಷ: ವಿವಿಧೆಡೆ ಸ್ಮರಣೆ

ನ್ಯೂಯಾರ್ಕ್ (ಎ.ಪಿ/ಪಿಟಿಐ): ಅಮೆರಿಕದ ನೆಲದಲ್ಲಿ ನಡೆದಿದ್ದ ಆಘಾತಕಾರಿ ಭಯೋತ್ಪಾದನಾ ದಾಳಿಗೆ ಈಗ 22 ವರ್ಷ. ಇಲ್ಲಿನ ‘ವರ್ಲ್ಡ್ ಟ್ರೇಡ್ ಸೆಂಟರ್’ನ ಜೋಡಿ ಕಟ್ಟಡಕ್ಕೆ ವಿಮಾನ ಡಿಕ್ಕಿ ಹೊಡೆಸಿ ಉಗ್ರರು ನಡೆಸಿದ್ದ ಕೃತ್ಯ 9/11 ಎಂದೇ ಇತಿಹಾಸದಲ್ಲಿ ದಾಖಲಾಗಿದೆ.

ಕಟ್ಟಡ ನೆಲಸಮಗೊಂಡ ಸ್ಥಳವು ಸೇರಿದಂತೆ ಅಮೆರಿಕದ ವಿವಿಧೆಡೆ ಅಲಾಸ್ಕಾದಿಂದ ಪೆನಿಸಿಲ್ವೇನಿಯಾವರೆಗೆ ವಿವಿಧೆಡೆ ಜನರು ಗುಂಪುಗೂಡಿ ಉಗ್ರರ ದಾಳಿ ಕೃತ್ಯದಲ್ಲಿ ಅಸುನೀಗಿದವರಿಗೆ ಸಂತಾಪ ಸೂಚಿಸಿದರು. ದುಃಸ್ವಪ್ನವಾಗಿರುವ ಕರಾಳ ಘಟನೆ ಮತ್ತೊಮ್ಮೆ ಅಮೆರಿಕದ ಜನರನ್ನು ಕಾಡಿತು.

ಅಧ್ಯಕ್ಷ ಜೋ ಬೈಡನ್ ಸೇನಾನೆಲೆ ಆಂಕರೇಜ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಭಾರತ ಮತ್ತು ವಿಯೆಟ್ನಾಂ ಪ್ರವಾಸದ ಬಳಿಕ ವಾಷಿಂಗ್ಟನ್ ಡಿ.ಸಿಗೆ ಮರಳುವ ಮಾರ್ಗದಲ್ಲಿ ಬೈಡನ್ ಆಂಕರೇಜ್ ಸೇನಾ ನೆಲೆಗೆ ಭೇಟಿ ನೀಡಿದ್ದರು. ಅಪಹರಿಸಿದ್ದ 2 ವಿಮಾನಗಳನ್ನು ಬಳಸಿ ಜೋಡಿ ಕಟ್ಟಡಗಳಿಗೆ ಡಿಕ್ಕಿ ಹೊಡೆಸಿ ಭಯೋತ್ಪಾದಕರು ಕೃತ್ಯ ಎಸಗಿದ್ದರು. ಈ ದುರಂತದಲ್ಲಿ ಸುಮಾರು 3,000 ಜನರು ಸತ್ತಿದ್ದರು. ಈ ಕೃತ್ಯವು ಅಮೆರಿಕದ ವಿದೇಶಾಂಗ ನೀತಿಯ ಆಮೂಲಾಗ್ರ ಬದಲಾವಣೆಗೂ ಕಾರಣವಾಯಿತು.

‘ಆ ಕೃತ್ಯದ ಬಳಿಕ ಅಮೆರಿಕನ್ನರಲ್ಲಿ ನಾವು ಒಂದು ರಾಷ್ಟ್ರ. ನಾವೆಲ್ಲರೂ ಒಂದೇ. ಹಾಗೆ ಇರಬೇಕು ಎಂಬ ಭಾವನೆ ದಟ್ಟವಾಗಿದೆ. ಎಲ್ಲ ಕಡೆ ಒಟ್ಟುಗೂಡಿದ್ದೇವೆ. ಇದನ್ನೇ ನಾವು ಮಾಡಬೇಕಿರುವುದು’ ಎಂದು ವರ್ಜಿನಿಯಾದ ಅಗ್ನಿಶಾಮಕ ಸೇವೆಯ ಅಧಿಕಾರಿ ಎಡ್ಡೀ ಫರ್ಗ್ಯುಸನ್ ಹೇಳಿದರು.

ವರ್ಜಿನಿಯಾವು ಪೆಂಟಗನ್‌ನಿಂದ 160 ಕಿ.ಮೀ, ನ್ಯೂಯಾರ್ಕ್‌ನಿಂದ ಸುಮಾರು 500 ಕಿ.ಮೀ ದೂರವಿದೆ. ಆದರೆ, 9/11 ಕೃತ್ಯವನ್ನು ಕುರಿತಂತೆ ಎಲ್ಲ ಕಡೆಯು ಒಂದೇ ಭಾವನೆ ಬೇರೂರಿದೆ. ಕುಸಿದ ಜೋಡಿ ಕಟ್ಟಡದ ಕಬ್ಬಿಣದ ಅವಶೇಷ ಬಳಸಿ ವಿವಿಧೆಡೆ ಸ್ಥಳೀಯವಾಗಿ ಸ್ಮಾರಕಗಳನ್ನು ನಿರ್ಮಾಣ ಮಾಡಲಾಗಿದೆ.

ನ್ಯೂಯಾರ್ಕ್‌ನಲ್ಲಿ ಜೋಡಿ ಕಟ್ಟಡ ನೆಲಸಮಗೊಂಡಿದ್ದ ಸ್ಥಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷೆ ಕಮಲಾಹ್ಯಾರಿಸ್ ಭಾಗವಹಿಸಿದ್ದರು. ರಾಜಕಾರಣಿಗಳಿಗೆ ಬದಲಾಗಿ ಘಟನೆಯಲ್ಲಿ ಅಸುನೀಗಿದ್ದವರ ಸಂಬಂಧಿಕರಿಗೆ ವೇದಿಕೆ ಬಿಡಲಾಗಿತ್ತು. ಮೃತರ ಹೆಸರು ಓದುವ ಮೂಲಕ ದುರಂತ ಘಟಿಸಿ 22 ವರ್ಷಗಳ ನಂತರವೂ ಅವರನ್ನು ಸ್ಮರಿಸಲಾಯಿತು. ಸಂಬಂಧಿಕರು, ಸಭಿಕರ ಕಣ್ಣಾಲಿಗಳು ತುಂಬಿದ್ದವು.

ಕೃತ್ಯದಲ್ಲಿ ಜೋಸೆಫ್ ಗಿಯಾಕೊನ್ ಮೃತಪಟ್ಟಿದ್ದು, ಇವರ ಸಹೋದರ ಜೇಮ್ಸ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ‘ಅಗಲಿದವರ ಹೆಸರನ್ನು ಗಟ್ಟಿಯಾಗಿ ಹೇಳಿದರೆ, ಅವರ ನೆನಪು ಮಾಸುವುದಿಲ್ಲ’ ಎಂದು ಜೇಮ್ಸ್ ಹೇಳಿದರು.

ಜನಾಂಗೀಯ ತಾರತಮ್ಯ ತಡೆಗೆ ನಿರ್ಣಯ ಮಂಡನೆ (ವಾಷಿಂಗ್ಟನ್ ವರದಿ): 9/11 ಭಯೋತ್ಪಾದಕ ದಾಳಿಯ ನಂತರ ಅಮೆರಿಕದಾದ್ಯಂತ ಅರಬ್, ಮುಸ್ಲಿಂ, ದಕ್ಷಿಣ ಏಷ್ಯಾ ಮತ್ತು ಸಿಖ್ ಸಮುದಾಯಗಳು ಎದುರಿಸುತ್ತಿರುವ ದ್ವೇಷ, ವರ್ಣಭೇದ ನೀತಿ ತಡೆಗಟ್ಟಲು ಭಾರತೀಯ ಮೂಲದ ಅಮೆರಿಕ ಸಂಸದೆ ಪ್ರಮೀಳಾ ಜಯಪಾಲ್ ಸೇರಿ ಹಲವು ಮಂದಿ ಸಂಸದರ ಗುಂಪು ಸಂಸತ್ತಿನ ಕೆಳಮನೆಯಲ್ಲಿ ನಿರ್ಣಯ ಮಂಡಿಸಿದೆ.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಅಧಿಕಾರಿಗಳ ವಿರುದ್ಧ ತನಿಖೆ

‘ಸರ್ಕಾರದ ಪೂರ್ವಾನುಮತಿ ಬೇಡ’

ಪ್ರಜಾವಾಣಿ ವಾರ್ತೆ

ನವದೆಹಲಿ: ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಪ್ರಕರಣ ದಾಖಲಾಗುವ ಜಂಟಿ ಕಾರ್ಯದರ್ಶಿ ಹಾಗೂ ಅದಕ್ಕಿಂತ ಮೇಲಿನ ಶ್ರೇಣಿಯ ಅಧಿಕಾರಿಗಳ ವಿರುದ್ಧ ತನಿಖೆ ಹಾಗೂ ಪ್ರಾಸಿಕ್ಯೂಷನ್‌ಗೆ ಸಿಬಿಐ, ಕೇಂದ್ರ ಸರ್ಕಾರದಿಂದ ಪೂರ್ವಾನುಮತಿ ಪಡೆಯುವ ಅಗತ್ಯವಿಲ್ಲ ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಸೋಮವಾರ ಮಹತ್ವದ ತೀರ್ಪು ನೀಡಿದೆ.

ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ನೇತೃತ್ವದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಎ.ಎಸ್. ಓಕಾ, ವಿಕ್ರಮ್ ನಾಥ್ ಹಾಗೂ ಜೆ.ಕೆ. ಮಹೇಶ್ವರಿ ಅವರಿದ್ದ ಪೀಠವು, ಈ ಕುರಿತು ಒಮ್ಮತದ ತೀರ್ಪು ಪ್ರಕಟಿಸಿದೆ.

ದೆಹಲಿ ವಿಶೇಷ ಪೊಲೀಸ್ ಕಾಯ್ದೆಯ (ಡಿಎಸ್‌ಪಿಇ) ಸೆಕ್ಷನ್ 6ಎ ಅನ್ವಯ ಜಂಟಿ ಕಾರ್ಯದರ್ಶಿ ಹಾಗೂ ಅವರ ಮೇಲಿನ ದರ್ಜೆಯ ಅಧಿಕಾರಿಗಳ ವಿರುದ್ಧದ ತನಿಖೆಗೆ ಕೇಂದ್ರದಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯ ಎಂದು ಹೇಳುತ್ತದೆ.

ಆದರೆ, 2014ರ ಸುಬ್ರಮಣಿಯನ್ ಸ್ವಾಮಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ‘ಈ ಸೆಕ್ಷನ್ ಭ್ರಷ್ಟರನ್ನು ರಕ್ಷಿಸುವ ಪ್ರವೃತ್ತಿಗೆ ಉತ್ತೇಜನ ನೀಡುತ್ತದೆ’ ಎಂದು ಹೇಳಿ ರದ್ದುಪಡಿಸಿತ್ತು.

ಡಿಎಸ್‌ಪಿಇ ಕಾಯ್ದೆಯ ಈ ಸೆಕ್ಷನ್‌ನನ್ನು ತಮ್ಮ ಮೇಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ತನಿಖೆಗೆ ಸರ್ಕಾರದಿಂದ ಅನುಮತಿ ಪಡೆದಿಲ್ಲವೆಂದು ವಿನಾಯಿತಿ ಪಡೆದಿದ್ದ ಅಧಿಕಾರಿಗಳಿಗೆ ನ್ಯಾಯಾಲಯದ ಆದೇಶ ಅನ್ವಯಿಸಲಿದೆ. 2003ರ ಸೆಪ್ಟೆಂಬರ್‌ರಿಂದ ದಾಖಲಾಗಿರುವ ಪ್ರಕರಣಗಳಿಗೆ ಇದು ಪೂರ್ವಾನ್ವಯವಾಗಲಿದೆ ಎಂದು ಪೀಠ ಹೇಳಿದೆ.

ಸೇವಾ ನಿಯಂತ್ರಣ ಪ್ರಶ್ನಿಸಿದ್ದ ಪಿಐಎಲ್ ವಜಾ

ನವದೆಹಲಿ (ಪಿಟಿಐ): ಲೆಫ್ಟಿನೆಂಟ್ ಗವರ್ನರ್ ಅವರಿಗೆ ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣದ ಅಧಿಕಾರ ನೀಡುವುದನ್ನು ಪ್ರಶ್ನಿಸಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್, ಸೋಮವಾರ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು, ‘ತಿದ್ದುಪಡಿ ಕಾನೂನು ಪ್ರಶ್ನಿಸಿ ದೆಹಲಿ ಸರ್ಕಾರವು ನ್ಯಾಯಾಲಯದಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿದೆ. ಹಾಗಾಗಿ, ಹೊಸದಾಗಿ ಅರ್ಜಿ ಸ್ವೀಕರಿಸುವುದಿಲ್ಲ’ ಎಂದು ಹೇಳಿತು.

ಈ ಆದೇಶವು ವಿಚಾರಣೆಗೆ ಬಾಕಿ ಇರುವ ದೆಹಲಿ ಸರ್ಕಾರದ ಅರ್ಜಿಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದೂ ಸ್ಪಷ್ಟಪಡಿಸಿತು.

ವಕೀಲ ಮುಕೇಶ್ ಕುಮಾರ್ ಎಂಬುವರು ಸ್ವಯಂ ಪ್ರೇರಿತವಾಗಿ ಈ ಅರ್ಜಿ ಸಲ್ಲಿಸಿದ್ದರು.

ಆಗಸ್ಟ್ 25ರಂದು ಸುಪ್ರೀಂ ಕೋರ್ಟ್‌ನ ಅನುಮತಿ ಮೇರೆಗೆ ದೆಹಲಿ ಸರ್ಕಾರವು ತಿದ್ದುಪಡಿ ಅರ್ಜಿ ಸಲ್ಲಿಸಿದೆ.

ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರ ಸರ್ಕಾರವು ಮೇ 19ರಂದು ಸುಗ್ರೀವಾಜ್ಞೆ ಹೊರಡಿಸಿತ್ತು. ಬಳಿಕ ಇತ್ತೀಚೆಗೆ ಮುಕ್ತಾಯಗೊಂಡ ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ರಾಷ್ಟ್ರ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (ತಿದ್ದುಪಡಿ) ಮಸೂದೆಯನ್ನು ಉಭಯ ಸದನಗಳಲ್ಲಿ ಮಂಡಿಸಿ ಅಂಗೀಕಾರ ಪಡೆದಿದೆ. ಇದಕ್ಕೆ ರಾಷ್ಟ್ರಪತಿ ಅವರು ಅಂಕಿತ ಹಾಕಿದ್ದು, ಕಾನೂನು ಸ್ವರೂಪ ಪಡೆದಿದೆ.

ಶ್ರಾವಣ ಸಂಭ್ರಮ

ಸೂರತ್ ಬಳಿಯ ಸಿದ್ಧಕುಟೀರ ಮಹಾದೇವ ದೇಗುಲಕ್ಕೆ ಅಭಿಷೇಕ ಮಾಡಲು ತಾಪಿ ನದಿಯ ಪವಿತ್ರಜಲವನ್ನು ಭಕ್ತರು ಮೆರವಣಿಗೆಯಲ್ಲಿ ಕೊಂಡೊಯ್ದರು. –ಪಿಟಿಐ ಚಿತ್ರ

ದಲಿತ ಐಎಎಸ್ ಅಧಿಕಾರಿಗೆ ಕಿರುಕುಳ

₹13,000 ಕೋಟಿ ಭ್ರಷ್ಟಾಚಾರ ಹಗರಣ ● ಕೇಂದ್ರದ ಮೇಲೆ ಕಾಂಗ್ರೆಸ್ ಆರೋಪ

ನವದೆಹಲಿ(ಪಿಟಿಐ) : ಜಮ್ಮು ಮತ್ತು ಕಾಶ್ಮೀರದ ಬಹುಕೋಟಿ ಜಲ ಜೀವನ್ ಮಿಷನ್ ಹಗರಣವನ್ನು ಬಯಲಿಗೆಳೆದ ದಲಿತ ಐಎಎಸ್ ಅಧಿಕಾರಿ ಅಶೋಕ್ ಪರ್ಮಾರ್ ಅವರಿಗೆ ಕಿರುಕುಳ ನೀಡಲಾಗುತ್ತಿದೆ ಎಂದು ಕಾಂಗ್ರೆಸ್ ಸೋಮವಾರ ಆರೋಪಿಸಿದೆ. ಅಧಿಕಾರಿ ನೀಡಿದ ದೂರಿನ ಬಗ್ಗೆ ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಪ್ರಶ್ನೆ ಮಾಡಿದೆ.

ಈ ಕುರಿತು ಸುದ್ದಿಗೋಷ್ಠಿ ನಡೆಸಿದ ಕಾಂಗ್ರೆಸ್ ವಕ್ತಾರ ಪವನ್ ಖೇರಾ, ‘ಜಮ್ಮು ಮತ್ತು ಕಾಶ್ಮೀರದ ಜಲ ಜೀವನ್ ಮಿಷನ್‌ನಲ್ಲಿ ₹13,000 ಕೋಟಿ ಭ್ರಷ್ಟಾಚಾರ ನಡೆದಿರುವುದನ್ನು ಪರ್ಮಾರ್ ಬಯಲಿಗೆಳೆದಿದ್ದರು. ಸದ್ಯ ಅವರನ್ನು ಗುರಿಯಾಗಿಸಲಾಗಿದ್ದು, ಕಿರುಕುಳ ನೀಡಲಾಗುತ್ತಿದೆ. ಇದು ಏಕೆ ಹೀಗೆ? ಹಣ ಲಪಟಾಯಿಸಿದ, ಸರ್ಕಾರದ ಖಜಾನೆ ಲೂಟಿ ಮಾಡಿದ ಇತರ ಅಧಿಕಾರಿಗಳಿಗೆ ಏಕೆ ಬಡ್ತಿ ನೀಡಲಾಗಿದೆ? ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸರ್ಕಾರ ಉತ್ತರಿಸುವುದೇ? ಎಂದು ಪ್ರಶ್ನಿಸಿದರು.

ಪವನ್ ಖೇರಾ

‘ಜಲಜೀವನ ಮಿಷನ್ ಅಕ್ರಮದ ಬಗ್ಗೆ ಗೃಹ ಸಚಿವಾಲಯಕ್ಕೆ ದೂರು ನೀಡಲಾಗಿದೆ. ಸಿಬಿಐ ತನಿಖೆಗೆ ಮನವಿ ಮಾಡಲಾಗಿದೆ. ಆದರೂ, ಜಮ್ಮು ಮತ್ತು ಕಾಶ್ಮೀರದ ಆಡಳಿತ, ನರೇಂದ್ರ ಮೋದಿ ಸರ್ಕಾರ ತನಿಖೆಗೆ ಏಕೆ ಆದೇಶಿಸಿಲ್ಲ’ ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

‘ತಾವು ಅನುಭವಿಸುತ್ತಿರುವ ಕಿರುಕುಳ, ಬೆದರಿಕೆ ಮತ್ತು ದೌರ್ಜನ್ಯಗಳ ಬಗ್ಗೆ ದಲಿತ ಐಎಎಸ್ ಅಧಿಕಾರಿ ಪರ್ಮಾರ್ ದೂರು ನೀಡಿದರೂ, ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗವು ಲೆಫ್ಟಿನೆಂಟ್ ಗವರ್ನರ್ ಕಚೇರಿಗೆ ಶೋಕಾಸ್ ನೋಟಿಸ್ ನೀಡಿಲ್ಲ. ಸಂಬಂಧಿಸಿದವರ ವಿರುದ್ಧ ಎಸ್‌ಸಿ-ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಕ್ರಮ ಕೈಗೊಳ್ಳಲು ಆಗದೇ’ ಎಂದು ಅವರು ಸವಾಲು ಹಾಕಿದರು.

‘ಸಿಬಿಐ, ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ, ವಿಚಕ್ಷಣ ದಳದ ಅಧಿಕಾರಿಗಳನ್ನು ಪ್ರತಿಪಕ್ಷದ ನಾಯಕರ ಮನೆಗಳಿಗೆ ಕಳುಹಿಸುವ ಮೋದಿ ಸರ್ಕಾರ, ಐಎಎಸ್ ಅಧಿಕಾರಿ ಪರ್ಮಾರ್ ಬಯಲಿಗೆಳೆದಿರುವ ಹಗರಣದ ಬಗ್ಗೆ ಆಂತರಿಕ ತನಿಖೆ ನಡೆಸಲೂ ಚಿಂತಿಸುತ್ತಿಲ್ಲ’ ಎಂದು ಖೇರಾ ಆರೋಪಿಸಿದರು.

‘ಭಾರತದ ಜನರಿಗೆ ಈಗ ಎಲ್ಲವೂ ಗೊತ್ತಾಗಿದೆ. 2024 ರಲ್ಲಿ ಬಿಜೆಪಿಗೆ ಸೂಕ್ತ ಉತ್ತರ ನೀಡಲಿದ್ದಾರೆ’ ಎಂದರು.

ಜಮ್ಮು ಮತ್ತು ಕಾಶ್ಮೀರ ಆಡಳಿತವು ತಮಗೆ ಕಿರುಕುಳ ನೀಡುತ್ತಿರುವುದಾಗಿ ಆರೋಪಿಸಿ ಐಎಎಸ್ ಅಧಿಕಾರಿ ಪರ್ಮಾರ್ ಅವರು ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಕ್ಕೆ ದೂರು ನೀಡಿದ್ದರು.

ದೇಶೀಯ ಸಮಸ್ಯೆಗಳತ್ತ ಮೋದಿ ಸರ್ಕಾರ ಚಿತ್ತ ಹರಿಸಲಿ: ಖರ್ಗೆ

ನವದೆಹಲಿ (ಪಿಟಿಐ): ‘ಜಿ20 ಶೃಂಗಸಭೆ ಈಗ ಮುಗಿದಿದ್ದು, ಮೋದಿ ನೇತೃತ್ವದ ಸರ್ಕಾರವು ಹಣದುಬ್ಬರ, ನಿರುದ್ಯೋಗ ಮತ್ತು ಮಣಿಪುರ ಗಲಭೆಯಂತಹ ದೇಶೀಯ ಸಮಸ್ಯೆಗಳತ್ತ ಗಮನ ಹರಿಸಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ಹೇಳಿದ್ದಾರೆ.

2024ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಸರ್ಕಾರದ ನಿರ್ಗಮನಕ್ಕೆ ಜನರು ದಾರಿ ಮಾಡಿಕೊಡಲು ಆರಂಭಿಸಿದ್ದಾರೆ ಎಂದು ಅವರು ‘ಎಕ್ಸ್’ನಲ್ಲಿ ಹೇಳಿದ್ದಾರೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಮತ್ತು ನಿರುದ್ಯೋಗ ಸಮಸ್ಯೆ ಹೆಚ್ಚಳ ಕುರಿತು ಅವರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರು ಸತ್ಯವನ್ನು ಮರೆ ಮಾಚಲು ಪ್ರಯತ್ನಿಸುತ್ತಿದ್ದಾರೆ, ಆದರೆ ಸಾರ್ವಜನಿಕರು ಸತ್ಯವನ್ನು ಮಾತ್ರ ನೋಡಲು ಮತ್ತು ಕೇಳಲು ಬಯಸುತ್ತಿದ್ದಾರೆ’ ಎಂದು ಅವರು ಹೇಳಿದ್ದಾರೆ.

2022ನೇ ಸಾಲಿನ ಶಾಂತಿಸ್ವರೂಪ್ ಭಟ್ನಾಗರ್ ಪ್ರಶಸ್ತಿ ಪ್ರಕಟ

ಬೆಂಗಳೂರಿನ ನಾಲ್ವರು ಪ್ರಶಸ್ತಿಗೆ ಭಾಜನ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತದ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿಯನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ನಿರ್ಲಕ್ಷ್ಯ ಮಾಡುತ್ತಿದೆ ಎಂಬ ಆರೋಪದ ಬೆನ್ನಲ್ಲೇ, ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಮಂಡಳಿಯು ಸೋಮವಾರ ಬೆಂಗಳೂರಿನ ನಾಲ್ವರನ್ನು ಸೇರಿದಂತೆ ಒಟ್ಟು 12 ಮಂದಿಗೆ 2022ನೇ ಸಾಲಿನ ಪ್ರತಿಷ್ಠಿತ ಶಾಂತಿಸ್ವರೂಪ್ ಭಟ್ನಾಗರ್ ಪ್ರಶಸ್ತಿಗಳನ್ನು ಘೋಷಿಸಿದೆ.

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಅಪೂರ್ವ ಖರೆ (ಗಣಿತ ವಿಜ್ಞಾನ), ಅನಿಂದ್ಯ ದಾಸ್ (ಭೌತ ವಿಜ್ಞಾನ), ಎ.ಟಿ. ಬಿಜು (ರಾಸಾಯನಿಕ ವಿಜ್ಞಾನ) ಹಾಗೂ ಮೈಕ್ರೋಸಾಫ್ಟ್ ರಿಸರ್ಚ್ ಲ್ಯಾಬ್‌ನ ನೀರಜ್ ಕಾವಲ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪ್ರಶಸ್ತಿಯು ಐದು ಲಕ್ಷ ರೂ. ನಗದು ಹಾಗೂ ಪ್ರಶಸ್ತಿ ಪತ್ರವನ್ನು ಹೊಂದಿದೆ.

ಸಿಎಸ್‌ಐಆರ್ ಸಂಸ್ಥಾಪನಾ ದಿನವಾದ ಸೆ. 26ರಂದು ಸಾಮಾನ್ಯವಾಗಿ ಭಟ್ನಾಗರ್ ಪ್ರಶಸ್ತಿಗಳನ್ನು ಘೋಷಿಸಲಾಗುತ್ತದೆ. ಆದರೆ, ಕಳೆದ ವರ್ಷ ಪ್ರಶಸ್ತಿಯನ್ನು ಘೋಷಿಸಿರಲಿಲ್ಲ. ಈ ವಿಷಯವು ತೀವ್ರ ಚರ್ಚೆಗೆ ಒಳಗಾಗಿತ್ತು.

ಇದೀಗ 2022ನೇ ಸಾಲಿನ ಪ್ರಶಸ್ತಿಗಳನ್ನು ಸಿಎಸ್‌ಐಆರ್‌ನ ಮಹಾ ನಿರ್ದೇಶಕ ಎನ್.ಕಲೈಸೆಲ್ವಿ ಘೋಷಿಸಿದ್ದಾರೆ. 12 ಮಂದಿ ಪ್ರಶಸ್ತಿ ಪುರಸ್ಕೃತರಲ್ಲಿ ಮೂವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ನಾಲ್ವರು ವಿವಿಧ ಐಐಟಿಗಳವರು ಮತ್ತು ಇಬ್ಬರು ಸಿಎಸ್‌ಐಆರ್ ಲ್ಯಾಬ-ರೋಟರಿಯವರು ಇದ್ದಾರೆ. ಉಳಿದ ಮೂವರು ಹೈದರಾಬಾದ್‌ನ ಡಿಎನ್‌ಎ, ಬೆರಳಚ್ಚು ಗುರುತು ಪತ್ತೆ-ಹಚ್ಚುವಿಕೆ ಕೇಂದ್ರ, ಮುಂಬೈನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಮತ್ತು ಬೆಂಗಳೂರಿನ ಮೈಕ್ರೊಸಾಫ್ಟ್ ರಿಸರ್ಚ್ ಲ್ಯಾಬ್‌ಗೆ ಸೇರಿದವರು.

ಪುರಸ್ಕೃತರ ವಿವರ

- ಕೋಲ್ಕತ್ತದ ರಾಸಾಯನಿಕ ಜೀವವಿಜ್ಞಾನ ಸಂಸ್ಥೆಯ ಪ್ರತಿರಕ್ಷಾ ಶಾಸ್ತ್ರಜ್ಞ ದೀಪ್ಯಮಾನ್ ಗಂಗೂಲಿ.
- ಪುಣೆ ಮೂಲದ ಅಂತರ ವಿಶ್ವವಿದ್ಯಾಲಯ ಖಭೌತ ವಿಜ್ಞಾನ ಕೇಂದ್ರದ ಕನಕ್ ಸಹಾ.
- ಬೆಂಗಳೂರು ಮೂಲದ ಜವಾಹರ್‌ಲಾಲ್ ನೆಹರೂ ಅಧುನಿಕ ವಿಜ್ಞಾನ ಸಂಶೋಧನಾ ಕೇಂದ್ರದ ಕನಿಷ್ಕ ಬಿಸ್ವಾಸ್.
- ಭಾರತೀಯ ವಿಜ್ಞಾನ ಸಂಸ್ಥೆಯ ಸೂಕ್ಷ್ಮಜೀವವಿಜ್ಞಾನ, ಕಣ ಜೀವವಿಜ್ಞಾನ ಇಲಾಖೆಯ ಅಮಿತ್ ಸಿಂಗ್.
- ಐಐಟಿ–ಕಾನ್ಪುರದ ಜೈವಿಕ ವಿಜ್ಞಾನ ಮತ್ತು ಜೈವಿಕ ಎಂಜಿನಿಯರಿಂಗ್ ವಿಭಾಗದ ಅರುಣ್ ಕುಮಾರ್ ಶುಕ್ಲಾ.
- ಜವಹರ್‌ಲಾಲ್ ನೆಹರು ಆಧುನಿಕ ವಿಜ್ಞಾನ ಸಂಶೋಧನಾ ಕೇಂದ್ರದ ಜೈವಿಕ ಸಾವಯವ ರಾಸಾಯನಿಕ ಪ್ರಯೋಗಾಲಯದ ಟಿ.ಗೋವಿಂದರಾಜ್.
- ಜೋರ್ಹಟ್‌ನ ಸಿಎಸ್‌ಐಆರ್ ಈಶಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ಕಲ್ಲಿದ್ದಲು ಮತ್ತು ಇಂಧನ ಸಂಶೋಧನಾ ಸಮೂಹದ ವಿನಯ್ ಕುಮಾರ್ ಸೈಕಿಯಾ.
- ಐಐಟಿ ಖರಗ್‌ಪುರ್‌ನ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ದೇವ್‌ದೀಪ್ ಮುಖ್ಯೋಪಾಧ್ಯಾಯ.
- ಮುಂಬೈ ಮೂಲದ ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆಯ ಅನಿಶ್ ಘೋಷ್.
- ಚೆನ್ನೈನ ಗಣಿತ ವಿಜ್ಞಾನ ಸಂಸ್ಥೆಯ ಸಾಕೇತ್ ಸೌರಭ್.
- ಐಐಟಿ ಬಾಂಬೆಯ ಅಚ್ಯುತ ಮೆನನ್ ಆರೋಗ್ಯ ವಿಜ್ಞಾನ ಅಧ್ಯಯನ ಸಂಸ್ಥೆಯ ಡಾ.ಜೀಮನ್ ಪನ್ನಿಯಮ್ಮಕಾಲ್.
- ಐಐಟಿ ಬಾಂಬೆಯ ಜೀವವಿಜ್ಞಾನ ಮತ್ತು ಜೀವ ಎಂಜಿನಿಯರಿಂಗ್ ವಿಭಾಗದ ರೋಹಿತ್ ಶ್ರೀವಾತ್ಸವ.

ಅಲ್ಪಸಂಖ್ಯಾತರ ಹಕ್ಕು ರಕ್ಷಣೆಯ ಪ್ರಯತ್ನ ಹೆಚ್ಚಬೇಕು: ಟರ್ಕ್

ವಿಶ್ವಸಂಸ್ಥೆ (ಜಿನೀವಾ) (ಪಿಟಿಐ): ಭಾರತದಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ಹಕ್ಕುಗಳನ್ನು ಎತ್ತಿಹಿಡಿಯುವ ಪ್ರಯತ್ನಗಳನ್ನು ದ್ವಿಗುಣಗೊಳಿಸುವ ಅಗತ್ಯ ಇದೆ ಎಂದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಹೈಕಮಿಷನರ್ ವೋಲ್ಕರ್ ಟರ್ಕ್ ಸೋಮವಾರ ಅಭಿಪ್ರಾಯಪಟ್ಟಿದ್ದಾರೆ.

ಜಿನೀವಾದಲ್ಲಿ ನಡೆದ ಮಾನವ ಹಕ್ಕುಗಳ ಮಂಡಳಿಯ 54ನೇ ಅಧಿವೇಶನದಲ್ಲಿ ಮಾತನಾಡಿದ ಟರ್ಕ್, ‘ಅಲ್ಪಸಂಖ್ಯಾತ ಸಮುದಾಯಗಳು ಹಿಂಸಾಚಾರ, ತಾರತಮ್ಯಕ್ಕೆ ಗುರಿಯಾಗುತ್ತಿರುವ ಬಗ್ಗೆ ಭಾರತದಲ್ಲಿರುವ ನಮ್ಮ ಕಚೇರಿಗೆ ಆಗಾಗ್ಗೆ ಮಾಹಿತಿ ಬರುತ್ತಲೇ ಇರುತ್ತದೆ’ ಎಂದು ಹೇಳಿದ್ದಾರೆ.

‘ಉತ್ತರ ಭಾರತದಲ್ಲಿ ಮುಸ್ಲಿಮರು ಆಗಾಗ್ಗೆ ದಾಳಿಗಳಿಗೆ ಗುರಿಯಾಗುತ್ತಿರುತ್ತಾರೆ. ಹರಿಯಾಣ, ಗುರುಗ್ರಾಮ್‌ದಲ್ಲಿ ಅಂತಹದ್ದೇ ದಾಳಿ ನಡೆದಿದೆ. ಮಣಿಪುರದಲ್ಲಿ ಇತರ ಸಮುದಾಯಗಳು ಅಭದ್ರತೆ ಎದುರಿಸುತ್ತಿವೆ’ ಎಂದರು.

‘ಅಸಹಿಷ್ಣುತೆ, ದ್ವೇಷ ಭಾಷಣ, ಧಾರ್ಮಿಕ ಮೂಲಭೂತವಾದ ಮತ್ತು ತಾರತಮ್ಯ ಹತ್ತಿಕ್ಕಬೇಕು. ಈ ಮೂಲಕ ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವ ಪ್ರಯತ್ನ ದ್ವಿಗುಣಗೊಳಿಸುವ ಅಗತ್ಯತೆ ಭಾರತದಲ್ಲಿ ಕಾಣಿಸುತ್ತಿದೆ’ ಎಂದರು.

ತಮಿಳುನಾಡು: ಗೃಹಿಣಿಯರಿಗೆ ತಿಂಗಳಿಗೆ ₹1 ಸಾವಿರ ನೆರವು

ಚೆನ್ನೈ (ಪಿಟಿಐ): ಪ್ರತಿ ಕುಟುಂಬದ ಅರ್ಹ ಯಜಮಾನಿಗೆ ತಲಾ ₹1 ಸಾವಿರದಂತೆ ರಾಜ್ಯದ 1.06 ಕೋಟಿ ಮಹಿಳೆಯರಿಗೆ ಆರ್ಥಿಕ ನೆರವು ನೀಡುವ ಬೃಹತ್ ಸಮಾಜ ಕಲ್ಯಾಣ ಯೋಜನೆಗೆ ಸೆ.15ರಿಂದ ಚಾಲನೆ ನೀಡಲು ತಮಿಳುನಾಡು ಸರ್ಕಾರ ಸಜ್ಜಾಗಿದೆ.

ಮಹಿಳೆಯರ ಜೀವನದ ಗುಣಮಟ್ಟ ಹೆಚ್ಚಿಸಲು ಆರಂಭಿಸಿರುವ ಈ ಯೋಜನೆಯ ಉಪಕ್ರಮ ‘ಮಗಲಿರ್ ಉರಿಮೈ ತೊಗೈ’ನಡಿ ಹಣವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು. ಇದನ್ನು ನಗದೀಕರಿಸಿಕೊಳ್ಳಲು ಅವರೆಲ್ಲರಿಗೂ ಎಟಿಎಂ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸೋಮವಾರ ತಿಳಿಸಿದ್ದಾರೆ.

ಹೈಕಮಾಂಡ್ ಅಂಗಳಕ್ಕೆ ಭಿನ್ನಾಭಿಪ್ರಾಯ

ಒಂದನೇ ಪುಟದಿಂದ...

ಇನ್ನೊಂದೆಡೆ, ಶನಿವಾರ ನಡೆದ ಹಿಂದುಳಿದ ವರ್ಗಗಳ ಸಮಾವೇಶ ಹಾಗೂ ಹರಿಪ್ರಸಾದ್ ಹೇಳಿಕೆಯ ವಿವರಗಳನ್ನು ಸುರ್ಜೇವಾಲಾ ಅವರು ರಾಜ್ಯ ಕಾಂಗ್ರೆಸ್ ನಾಯಕರಿಂದ ಪಡೆದಿದ್ದಾರೆ. ಯಾವುದೇ ಹೇಳಿಕೆ ನೀಡದಂತೆ ಹರಿಪ್ರಸಾದ್ ಅವರಿಗೆ ವರಿಷ್ಠರು ಮೌಖಿಕ ಸೂಚನೆ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ. ‘ಮುಖ್ಯ-ಮಂತ್ರಿಯವರು ಹೈಕಮಾಂಡ್‌ಗೆ ಯಾವುದೇ ಲಿಖಿತ ದೂರು ನೀಡಿಲ್ಲ’ ಎಂದು ಸಿದ್ದರಾಮಯ್ಯ ಅವರ ಆಪ್ತಮೂಲಗಳು ಸ್ಪಷ್ಟಪಡಿಸಿವೆ.

ಹರಿಪ್ರಸಾದ್ ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಕಾಯಂ ಆಹ್ವಾನಿತರಾಗಿ ಇತ್ತೀಚೆಗೆ ನಾಮ-ನಿರ್ದೇಶನಗೊಂಡಿದ್ದಾರೆ. ಜತೆಗೆ, ಹೈಕಮಾಂಡ್‌ನ ನಾಯಕರ ಜತೆಗೆ ಉತ್ತಮ ನಂಟು ಹೊಂದಿದ್ದಾರೆ. ಹೀಗಾಗಿ, ಅವರ ವಿರುದ್ಧ ಹೈಕಮಾಂಡ್ ಶಿಸ್ತುಕ್ರಮ ಕೈಗೊಳ್ಳುವ ಸಾಧ್ಯತೆ ಕಡಿಮೆ ಎಂದು ಮೂಲಗಳು ಹೇಳಿವೆ.

‘ಕೈ’ ಮಾತಿನ ಸಮರ ಬಿರುಸು

ಒಂದನೇ ಪುಟದಿಂದ...

ತಿಂಗಳ ಹಿಂದೆ ನಡೆದಿದ್ದ ಈಡಿಗ ಸಮುದಾಯದ ಮುಖಂಡರ ಸಭೆಯಲ್ಲಿ ಮಾತನಾಡಿದ್ದ ಹರಿಪ್ರಸಾದ್, ‘ನನಗೆ ಸಿ.ಎಂ ಮಾಡುವುದೂ ಗೊತ್ತು; ಅಧಿಕಾರದಿಂದ ಇಳಿಸುವುದೂ ಗೊತ್ತು’ ಎಂದಿದ್ದರು. ಶನಿವಾರ (ಸೆ. 9) ನಡೆದ ಈಡಿಗ ಮತ್ತು ಅತಿ ಹಿಂದುಳಿದ ವರ್ಗಗಳ ಸಮಾನ ಮನಸ್ಕರ ಪೂರ್ವಭಾವಿ ಸಭೆಯಲ್ಲಿ, ಸಿದ್ದರಾಮಯ್ಯ ಅವರ ಹೆಸರು ಹೇಳದೆಯೇ ಮಾತಿನುದ್ದಕ್ಕೂ ಟೀಕಾಪ್ರಹಾರ ನಡೆಸಿದ್ದ ಹರಿಪ್ರಸಾದ್, ‘ಹ್ಯೂಬ್ಲೋ ವಾಚ್ ಕಟ್ಟಿಕೊಂಡು, ಪಂಚೆ ಉಟ್ಟುಕೊಂಡು ಒಳಗೆ ಖಾಕಿ ಚಡ್ಡಿ ಧರಿಸುವುದು ಸಮಾಜವಾದವಲ್ಲ. ಅರಸು ಅವರ ಕಾರಿನಲ್ಲಿ ಕುಳಿತ ಮಾತ್ರಕ್ಕೆ ಅರಸು ಆಗಲು ಸಾಧ್ಯವಿಲ್ಲ’ ಎಂದು ಕಟುವಾಗಿಯೇ ಟೀಕಿಸಿದ್ದರು.

ಸಿದ್ದರಾಮಯ್ಯ ವಿರುದ್ಧ ಪರೋಕ್ಷ ವಾಗ್ದಾಳಿಗೆ ಸಂಬಂಧಿಸಿದಂತೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಹೊಸಪೇಟೆಯಲ್ಲಿ ಭಾನುವಾರ ಪ್ರತಿಕ್ರಿಯಿಸಿದ್ದ ಹರಿಪ್ರಸಾದ್, ‘ಏನೂ ಕೇಳಬೇಡಿ, ಏನೂ ಮಾತನಾಡಬಾರ-ದೆಂದು ಮೇಲಿನವರು ಹೇಳಿದ್ದಾರಪ್ಪ’ ಎಂದಿದ್ದರು. ಈ ಮೂಲಕ, ತಮ್ಮ ಹೇಳಿಕೆ ಹೈಕಮಾಂಡ್‌ಗೆ ತಲುಪಿದ್ದು, ಹೇಳಿಕೆ ನೀಡಬಾರದು ಎಂದು ಸೂಚಿದ್ದಾರೆ ಎನ್ನುವುದನ್ನು ಸೂಚ್ಯವಾಗಿ ಹೇಳಿದ್ದರು. ಆದರೆ, ಸೋಮವಾರ ಮತ್ತೆ ‘ಹಗರಣ’ಗಳನ್ನು ಪ್ರಸ್ತಾಪಿಸಿ, ತಾವಿನ್ನೂ ಸುಮ್ಮನಾಗಿಲ್ಲ ಎಂದು ತೋರಿಸಿದ್ದಾರೆ.

> ನಮ್ಮ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ಅದರಂತೆ ಮುಕ್ತವಾಗಿ ಮಾತನಾಡುತ್ತೇನೆ. ಬಿಜೆಪಿ ನಾಯಕರ ಹಾಗೆ ನಾಗ್ಪುರದ ನಿರ್ದೇಶನ ಮೇರೆಗೆ ಮಾತನಾಡುವುದಿಲ್ಲ
> **ಬಿ.ಕೆ. ಹರಿಪ್ರಸಾದ್,** ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ

> ಹರಿಪ್ರಸಾದ್ ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಹೇಳಿದ್ದಾರೆ. ಅವರ ಹೇಳಿಕೆಯನ್ನು ಹೈಕಮಾಂಡ್ ಕೂಡ ಗಮನಿಸಿದೆ
> **ಜಿ. ಪರಮೇಶ್ವರ** ಗೃಹ ಸಚಿವ

ಸಿದ್ದರಾಮಯ್ಯ ಬೆನ್ನಿಗೆ ಸಚಿವರು?: ಹರಿಪ್ರಸಾದ್ ಹೇಳಿಕೆಗೆ ಪ್ರತಿಕ್ರಿಯಿಸಿರುವ ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ‘ಹರಿಪ್ರಸಾದ್ ಪಕ್ಷದ ಹಿರಿಯ ನಾಯಕರಲ್ಲಿ ಒಬ್ಬರು. ಎಲ್ಲ ವಿಚಾರಗಳನ್ನೂ ಅವರು ಪಕ್ಷದ ಒಳಗೇ ಮಾತನಾಡಬೇಕಿತ್ತು. ಆದರೆ, ಅವರು ಬೀದಿಗೆ ಹೋಗಿದ್ದಾರೆ. ಇದು ಸರಿಯಲ್ಲ. ಅವರಿಂದ ಇಂತಹ ಮಾತು ಬರಬಾರದಿತ್ತು. ಅವರ ಮಾತುಗಳನ್ನು ಕೇಳಿಸಿಕೊಂಡು ಪಕ್ಷದ ರಾಷ್ಟ್ರೀಯ ನಾಯಕರು ಸುಮ್ಮನೆ ಕೂರುವುದಿಲ್ಲ. ಇದರ ಪರಿಣಾಮಗ-ಳನ್ನು ಅವರು ಎದುರಿಸಬೇಕಾಗುತ್ತದೆ’ ಎಂದು ಹೇಳಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ‘ಸಿದ್ದರಾಮಯ್ಯ-ನವರು ತಾವು ದೇವರಾಜ ಅರಸು ಎಂದು ಎಲ್ಲಿಯೂ ಯಾರ ಮುಂದೆಯೂ ಹೇಳಿಲ್ಲ. ಜನರು ಅವರನ್ನು ದೇವರಾಜ ಅರಸರಂತೆ ಕಾಣಲು ಯತ್ನಿಸುತ್ತಿದ್ದಾರೆ. ಅವರಿಗೆ ತಮ್ಮದೇ ಆದ ಗತ್ತು, ಆಡಳಿತದ ಗಾಂಭೀರ್ಯ ಇದೆ. ಅವರು ಎಲ್ಲ ಸಮಾ-ಜದವರನ್ನು ಜತೆಗೆ ಕರೆದುಕೊಂಡು ಹೋಗುತ್ತಿದ್ದಾರೆ. ಹರಿಪ್ರಸಾದ್, ಪ್ರಣವಾನಂದ ಸ್ವಾಮೀಜಿ ಈಡಿಗ ಸಮುದಾಯಕ್ಕೆ ಆದ್ಯತೆ ನೀಡುತ್ತಿಲ್ಲ ಎನ್ನುತ್ತಾರಲ್ಲ? ಈಗಾಗಲೇ ಈಡಿಗ ಸಮಾಜದಿಂದ ಮಧು ಬಂಗಾರಪ್ಪ ಸಚಿವರಾಗಿದ್ದಾರೆ. ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತಿದೆ’ ಎಂದಿದ್ದಾರೆ.

‘ಹರಿಪ್ರಸಾದ್ ಅವರು ಯಾವ ಉದ್ದೇಶದಿಂದ ಆ ರೀತಿ ಮಾತನಾಡಿದ್ದಾರೋ ಗೊತ್ತಿಲ್ಲ. ಆದರೆ, ಸಾರ್ವಜನಿಕ ಸಮಾರಂಭದಲ್ಲಿ ಆ ರೀತಿ ಮಾತನಾಡಬಾರದಿತ್ತು. ಪಕ್ಷಕ್ಕೆ ಮುಜುಗರ ತರುವ ರೀತಿ ನಡೆದುಕೊಳ್ಳಬಾರದಿತ್ತು. ಅವರ ಹೇಳಿಕೆಯಿಂದ ಬೇರೆ ಯಾರಿಗೂ ಹಾನಿ ಉಂಟಾಗುವುದಿಲ್ಲ. ಇದರಿಂದ ಅವರಿಗೇ ಹಾನಿ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಉತ್ತರಪ್ರದೇಶದ ಬಾರಾಬಂಕಿಯಲ್ಲಿ ಭಾರಿ ಮಳೆಗೆ ರೈಲು ಹಳಿಗಳು ಜಲಾವೃತವಾಗಿವೆ –ಪಿಟಿಐ ಚಿತ್ರ

ಉತ್ತರಪ್ರದೇಶ ಮಳೆ: 19 ಮಂದಿ ಸಾವು

ಲಖನೌ (ಪಿಟಿಐ): ಉತ್ತರಪ್ರದೇಶದ ವಿವಿಧ ಪ್ರದೇಶಗಳಲ್ಲಿ ಭಾರಿ ಮಳೆ ಸುರಿದಿದ್ದು, 24 ಗಂಟೆಗಳ ಅವಧಿಯಲ್ಲಿ ಮಳೆ ಸಂಬಂಧಿ ಅವಘಡಗಳಲ್ಲಿ 19 ಮಂದಿ ಮೃತಪಟ್ಟಿದ್ದಾರೆ.

ಧಾರಾಕಾರ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತವಾಗಿದ್ದು, ಕೆಲವು ಜಿಲ್ಲೆಗಳಲ್ಲಿ ಶಾಲೆಗಳಿಗೆ ರಜೆ ನೀಡಲಾಗಿತ್ತು ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಲಖನೌನ ತಗ್ಗು ಪ್ರದೇಶಗಳು ಜಲಾವೃತವಾಗಿದ್ದು, ಬಾರಾಬಂಕಿಯಲ್ಲಿ ರೈಲು ಹಳಿಗಳು ಮುಳುಗಡೆಯಾಗಿವೆ ಎಂದಿದ್ದಾರೆ.

ಹಾರ್ದೋಯಿಯಲ್ಲಿ ನಾಲ್ಕು ಮಂದಿ, ಬಾರಾಬಂಕಿಯಲ್ಲಿ ಮೂವರು, ಪ್ರತಾಪಗಢ ಮತ್ತು ಕನ್ನೌಜ್‌ನಲ್ಲಿ ತಲಾ ಇಬ್ಬರು, ಹಾಗೂ ಅಮೇಠಿ, ಡಿಯೋರಿಯಾ, ಜಲೌನ್, ಕಾನ್ಪುರ, ಉನ್ನಾವೋ, ಸಂಭಾಲ್, ರಾಂಪುರ ಮತ್ತು ಮುಜಾಫರ್‌ನಗರ ಜಿಲ್ಲೆಗಳಲ್ಲಿ ತಲಾ ಒಬ್ಬರು ಮಳೆ ಸಂಬಂಧಿ ಅವಘಡಗಳಲ್ಲಿ ಮೃತಪಟ್ಟಿರುವುದಾಗಿ ವಿವರಿಸಿದ್ದಾರೆ.

ಪ್ರಜ್ವಲ್ ಮಧ್ಯಂತರ ಅರ್ಜಿ ವಜಾ

ಒಂದನೇ ಪುಟದಿಂದ...

ಹಾಸನ ಕ್ಷೇತ್ರದಿಂದ ಸಂಸದರಾಗಿ ಪ್ರಜ್ವಲ್ ರೇವಣ್ಣ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಿ ನ್ಯಾಯಮೂರ್ತಿ ಕೆ. ನಟರಾಜನ್ ಅವರ ಪೀಠ ಸೆ.1ರಂದು ತೀರ್ಪು ನೀಡಿ, ಅದರ ಪ್ರತಿಯನ್ನು ಲೋಕಸಭೆ ಸ್ಪೀಕರ್‌ಗೆ ಕಳುಹಿಸಲು ರಿಜಿಸ್ಟ್ರಿಗೆ ನಿರ್ದೇಶಿಸಿತ್ತು. ಸೆ.4ರಂದು ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದ್ದ ಪ್ರಜ್ವಲ್, ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸು-ವವರೆಗೆ ಅಸಿಂಧು ಆದೇಶಕ್ಕೆ ತಡೆ ನೀಡುವಂತೆ ಕೋರಿದ್ದರು. ಸೆ.8ರಂದು ವಿಚಾರಣೆ ಪೂರ್ಣಗೊಳಿಸಿದ್ದ ಪೀಠ, ತೀರ್ಪು ಕಾಯ್ದಿರಿಸಿತ್ತು.

ವಿಚಾರಣೆ ವೇಳೆ ಪ್ರಜ್ವಲ್ ಪರ ಹಿರಿಯ ವಕೀಲರು, ‘ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು. ಅಲ್ಲಿಯವರೆಗೆ ಅಸಿಂಧು ಆದೇಶಕ್ಕೆ ತಡೆ ನೀಡಬೇಕು. ಮೇಲ್ಮನವಿ ಸಲ್ಲಿಸುವವರೆಗೆ ತಡೆಯಾಜ್ಞೆ ನೀಡಲು ಈ ನ್ಯಾಯಾಲಯಕ್ಕೆ ಅವಕಾಶವಿದೆ’ ಎಂದು ತಿಳಿಸಿ ಆ ಕುರಿತ ನಿಯಮಗಳನ್ನು ವಿವರಿಸಿದ್ದರು.

‘ಅಸಿಂಧು ಆದೇಶಕ್ಕೆ ತಡೆ ನೀಡಬಾರದು. ತಡೆ ನೀಡಲು ಈ ನ್ಯಾಯಾಲಯಕ್ಕೆ ಅವಕಾಶವಿಲ್ಲ. ಆದೇಶ ಹೊರಡಿಸಿದ ದಿನವೇ ತಡೆಗೆ ಕೋರಿ ಅರ್ಜಿ ಸಲ್ಲಿಸಬೇಕಿತ್ತು. ಆದರೆ, ಅರ್ಜಿ ಸಲ್ಲಿಸಲು ವಿಳಂಬ ಮಾಡಲಾಗಿದೆ’ ಎಂದು ದೇವರಾಜೇಗೌಡ ಪರ ವಕೀಲರು ಆಕ್ಷೇಪಿಸಿದ್ದರು.

ಮೋದಿಗೆ ಬೈಡನ್ ಕಿವಿಮಾತು

ಒಂದನೇ ಪುಟದಿಂದ...

ಶೃಂಗಸಭೆಯ ಮುನ್ನ ಮೋದಿ ಜೊತೆಗೆ ಮಾತುಕತೆ ನಡೆಸಿದ್ದ ಅವರು, ಖಾಸಗಿ ಔತಣ ಕೂಟದಲ್ಲಿ ಭಾಗವಹಿ-ಸಿದ್ದರು.

ಶೃಂಗಸಭೆಯ ಮೊದಲ ದಿನದ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಬೈಡನ್, ವಿಯೆಟ್ನಾಂ ಪ್ರವಾಸದ ಅಂಗವಾಗಿ ಎರಡನೇ ದಿನದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರಲಿಲ್ಲ.

ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಕುಸಿಯುತ್ತಿರುವ ಕುರಿತು ಬೈಡನ್ ಆಡಳಿತವು ತನ್ನ ಕಳವಳ ವ್ಯಕ್ತಪ-ಡಿಸುತ್ತಲೇ ಬಂದಿದೆ. ಭಾರತದಲ್ಲಿ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ದೌರ್ಜನ್ಯ ಹಾಗೂ ಹಿಂಸೆ ಹೆಚ್ಚುತ್ತಿರುವ ಬಗ್ಗೆ ಅಮೆರಿಕದ ವಿದೇಶಾಂಗ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಉಲ್ಲೇಖಿಸಲಾಗಿತ್ತು.

ಭಾರತದಲ್ಲಿ ಸರ್ಕಾರ, ಪೊಲೀಸ್ ಹಾಗೂ ಬಂದೀಖಾನೆ ಇಲಾಖೆಯ ಅಧಿಕಾರಿಗಳು ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿರುವ ವಿದ್ಯಮಾನವನ್ನು ಅಮೆರಿಕ ಸರ್ಕಾರವು ಗಮನಿಸುತ್ತಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟೋನಿ ಬ್ಲಿಂಕೆನ್ ಅವರು ಕಳೆದ ವರ್ಷ ಹೇಳಿಕೆ ನೀಡಿದ್ದರು.

ತೈಲ ಸಂಸ್ಕರಣೆ ಯೋಜನೆ ಶೀಘ್ರ ಅನುಷ್ಠಾನಕ್ಕೆ ಒಪ್ಪಿಗೆ

ಒಂದನೇ ಪುಟದಿಂದ...

ಕಾರ್ಯಾರಂಭಕ್ಕೆ ನಿರ್ಧಾರ: ಸಭೆಯ ಬಳಿಕ ಸುದ್ದಿಗಾರರಿಗೆ ಮಾಹಿತಿ ನೀಡಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ (ಸಾಗರೋತ್ತರ ಭಾರತೀಯ ವ್ಯವಹಾರ) ಔಸಾಫ್ ಸಯೀದ್ ಅವರು, ‘ಈಗಾಗಲೇ ಸಂಸ್ಕರಣಾ ಘಟಕ ಸ್ಥಾಪನೆ ಕುರಿತು ಘೋಷಿಸಲಾಗಿದೆ. ಸೌದಿ ಅರೇಬಿಯಾ ಸಾರ್ವಜನಿಕ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಕಂಪನಿ (ಎಆರ್‌ಎಎಂಸಿಒ), ಅಬುದಾಭಿ ರಾಷ್ಟ್ರೀಯ ತೈಲ ಕಂಪನಿ (ಎಡಿಎನ್‌ಒಸಿ) ಹಾಗೂ ಭಾರತದ ಕಂಪನಿಗಳ ಬೆಂಬಲದೊಂದಿಗೆ ಸಂಸ್ಕರಣಾ ಘಟಕದ ಕಾರ್ಯಾರಂಭಕ್ಕೆ ತೀರ್ಮಾನಿಸಲಾಗಿದೆ’ ಎಂದು ವಿವರಿಸಿದರು.

ಉಭಯ ದೇಶಗಳ ನಡುವೆ ರಕ್ಷಣೆ, ಶಿಕ್ಷಣ, ಡಿಜಿಟಲೀಕರಣ, ತಂತ್ರಜ್ಞಾನ, ಸಾರಿಗೆ, ಆರೋಗ್ಯ, ಪ್ರವಾಸ ಮತ್ತು ಸಂಸ್ಕೃತಿ ಕುರಿತು ಇಬ್ಬರು ನಾಯಕರು ಚರ್ಚಿಸಿದ್ದಾರೆ. ನೈಸರ್ಗಿಕ ಅನಿಲ, ಆಪ್ಟಿಕಲ್ ಹಾಗೂ ಫೈಬರ್ ಜಾಲ ಸ್ಥಾಪನೆ ಕುರಿತು ಪರಸ್ಪರ ಸಹಕರಿಸಲು ಒಪ್ಪಿಗೆ ಸೂಚಿಸಿದ್ದಾರೆ ಎಂದು ವಿವರಿಸಿದರು.

ಸೌದಿ ಸಹಭಾಗಿತ್ವಕ್ಕೆ ಮೋದಿ ಶ್ಲಾಘನೆ: ‘ಸೌದಿ ಅರೇಬಿಯಾವು ಭಾರತದ ಪ್ರಮುಖ ಕಾರ್ಯತಂತ್ರದ ವಿಶ್ವಾಸಾರ್ಹ ಪಾಲುದಾರಿಕೆಯ ರಾಷ್ಟ್ರವಾಗಿದೆ’ ಎಂದು ಪ್ರಧಾನಿ ಮೋದಿ ಶ್ಲಾಘಿಸಿದ್ದಾರೆ.

ಸೌದಿ ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್ ಬಿನ್ ಅಬ್ದುಲ್ ಅಜೀಜ್ ಅಲ್ ಸೌದ್ ಜೊತೆಗೆ ಸೋಮವಾರ ಅವರು ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಪ್ರಾದೇಶಿಕತೆ, ಜಾಗತಿಕ ಸ್ಥಿರತೆ ಹಾಗೂ ಕಲ್ಯಾಣಕ್ಕೆ ಭಾರತ ಮತ್ತು ಸೌದಿ ನಡುವಿನ ಪಾಲುದಾರಿಕೆಯು ನಿರ್ಣಾಯಕವಾಗಿದೆ. ಬದಲಾದ ಕಾಲಮಾನಕ್ಕೆ ತಕ್ಕಂತೆ ಹೊಸ ಆಯಾಮದಲ್ಲಿ ಉಭಯ ರಾಷ್ಟ್ರಗಳು ಒಪ್ಪಂದಕ್ಕೆ ಕಟಿಬದ್ಧವಾಗಿವೆ ಎಂದು ಮೋದಿ ಹೇಳಿದರು.

ಎರಡೂ ದೇಶಗಳ ನಿಕಟ ಪಾಲುದಾರಿಕೆಯ-ನ್ನು ಮತ್ತಷ್ಟು ವಿಸ್ತರಿಸುವುದು ಸೇರಿದಂತೆ ಹಲವು ಉಪಕ್ರಮಗಳ ಬಗ್ಗೆ ಚರ್ಚಿಸಲಾಯಿತು. ನಮ್ಮ ಸಂಬಂಧವು ಹೊಸ ಮಾರ್ಗ ಹಾಗೂ ಶಕ್ತಿ ಪಡೆದಿದೆ ಎಂದು ತಿಳಿಸಿದರು.

‘ಸೇನೆ ಮನವಿ ಮೇರೆಗೆ ಮಣಿಪುರಕ್ಕೆ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಇಜಿಐ ಹೇಳಿಕೆಗೆ ಆಶ್ಚರ್ಯ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್
- ಜುಲೈ 12ರಂದು ಸೇನೆಯಿಂದ ಇಜಿಐಗೆ ಪತ್ರ

ನವದೆಹಲಿ: ಭಾರತೀಯ ಸೇನೆಯ ಆಹ್ವಾನದ ಮೇರೆಗೆ ಸ್ಥಳೀಯ ಮಾಧ್ಯಮಗಳ ಪಕ್ಷಪಾತ ಮತ್ತು ಏಕಪಕ್ಷೀಯ ವರದಿಗಾರಿಕೆ ಪರಿಶೀಲಿಸಲು ಪತ್ರಕರ್ತರ ತಂಡವನ್ನು ಮಣಿಪುರಕ್ಕೆ ಕಳುಹಿಸಲಾಗಿದೆ ಎಂಬ ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯ (ಇಜಿಐ) ಹೇಳಿಕೆಗೆ ಸುಪ್ರೀಂ ಕೋರ್ಟ್ ಸೋಮವಾರ ಆಶ್ಚರ್ಯ ವ್ಯಕ್ತಪಡಿಸಿದೆ.

‘ನಾವು ಸ್ವಯಂಪ್ರೇರಿತರಾಗಿ ಅಲ್ಲಿಗೆ ಹೋಗಿಲ್ಲ. ಸೇನೆಯ ಮನವಿ ಮೇರೆಗೆ ಅಲ್ಲಿಗೆ ತೆರಳಬೇಕಾಯಿತು. ಇದು ಅತ್ಯಂತ ಗಂಭೀರ ವಿಷಯ’ ಎಂದು ಇಜಿಐ ಸದಸ್ಯರ ಪರ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಮನೋಜ್ ಮಿಶ್ರಾ ಅವರ ನ್ಯಾಯಪೀಠಕ್ಕೆ ತಿಳಿಸಿದರು.

ಭಾರತೀಯ ಸೇನೆಯು 2023ರ ಜುಲೈ 12 ರಂದು ಇಜಿಐ ಕಳುಹಿಸಿದ ಪತ್ರವನ್ನು ಸಿಬಲ್ ಉಲ್ಲೇಖಿಸಿದ್ದಾರೆ.

‘ಮಣಿಪುರದ ಘಟನೆಗಳನ್ನು ಸ್ಥಳೀಯ ಮಾಧ್ಯಮಗಳು ಏಕಪಕ್ಷೀಯ-ವಾಗಿ ವರದಿಗಾರಿಕೆ ಮಾಡುತ್ತಿವೆ ಎಂಬ ಕಾರಣಕ್ಕೆ ಸೇನೆಯ ಆಹ್ವಾನದ ಮೇರೆಗೆ ಪತ್ರಕರ್ತರ ತಂಡಗಳು ಮಣಿಪುರಕ್ಕೆ ಹೋಗಿವೆ’ ಎಂದು ಅವರು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಮಣಿಪುರಕ್ಕೆ ಬರುವಂತೆ ಇಜಿಐಗೆ ಸೇನೆ ಏಕೆ ಹೇಳುತ್ತದೆ?’ ಎಂದು ಪ್ರಶ್ನಿಸಿತು.

ಕಣಿವೆ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ವಸ್ತುಸ್ಥಿತಿ ತಿಳಿದುಕೊಳ್ಳುವ ಅಗತ್ಯವಿತ್ತು ಎಂದು ವಕೀಲರು ತಿಳಿಸಿದರು.

‘ಮಣಿಪುರದ ವಕೀಲರು ಹಿಂದೆ ಸರಿಯುತ್ತಿರುವುದರಿಂದ ಹಾಗೂ ಈ ಸಮಯದಲ್ಲಿ ನಾವು ಅಲ್ಲಿಗೆ ಹೋಗುವುದು ಅಪಾಯಕಾರಿ’ ಎಂದು ಅವರು ದೆಹಲಿ ಹೈಕೋರ್ಟ್‌ನಲ್ಲಿ ಈ ವಿಷಯ ಮುಂದುವರಿಸಲು ಅವಕಾಶ ನೀಡಲು ಪೀಠಕ್ಕೆ ಮನವಿ ಮಾಡಿದರು. ಮಣಿಪುರ ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಇಜಿಐ ಸದಸ್ಯರಿಗೆ ಇನ್ನೂ ಸ್ವಲ್ಪ ಸಮಯದವರೆಗೆ ಬಲವಂತದ ಕ್ರಮ ತೆಗೆದುಕೊಳ್ಳದಂತೆ ರಕ್ಷಣೆ ನೀಡಬಹುದು ಮತ್ತು ಇತರ ಪ್ರಕರಣ-ಗಳಂತೆ ಈ ವಿಷಯವನ್ನು ಮಣಿಪುರ ಹೈಕೋರ್ಟ್ ತೆಗೆದುಕೊಳ್ಳಬಹುದು ಎಂದು ಹೇಳಿದರು.

ಮುಂದಿನ ವಿಚಾರಣೆಯನ್ನು ಶುಕ್ರವಾರಕ್ಕೆ ನಿಗದಿಪಡಿಸಿದೆ.

ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಇಜಿಐ ಪ್ರಕಟಿಸಿರುವ ಸತ್ಯಶೋಧನಾ ವರದಿಯು ಪ್ರಚೋ-ದನಕಾರಿಯಾಗಿದೆ ಎಂಬ ಮಣಿಪುರ ಮುಖ್ಯಮಂತ್ರಿ ಬಿರೇನ್ ಸಿಂಗ್ ದೂರಿನ ಮೇರೆಗೆ ಒಕ್ಕೂಟದ ಅಧ್ಯಕ್ಷೆ ಸೀಮಾ ಮುಸ್ತಾಫ, ಸದಸ್ಯರಾದ ಸೀಮಾ ಗುಹಾ, ಭರತ್ ಭೂಷಣ್ ಹಾಗೂ ಸಂಜಯ್ ಕಪೂರ್ ವಿರುದ್ಧ ಸೆ.4ರಂದು ಪೊಲೀಸರು ಎಫ್‌ಐಆರ್ ದಾಖಲಿಸಿದರು.

ರಾಜಮಹೇಂದ್ರವರಂ ಜೈಲಿನಲ್ಲಿ ನಾಯ್ಡು

ರಾಜಮಹೇಂದ್ರವರಂ (ಆಂಧ್ರಪ್ರದೇಶ) (ಪಿಟಿಐ): ಹಣ ದುರುಪಯೋಗ ಪ್ರಕರಣದಲ್ಲಿ ಬಂಧಿತರಾಗಿರುವ ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ತೆಲುಗು ದೇಶಂ ಪಕ್ಷದ (ಟಿಡಿಪಿ) ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರನ್ನು ಇಲ್ಲಿನ ಕೇಂದ್ರ ಕಾರಾಗೃಹಕ್ಕೆ ಸೋಮವಾರ ನಸುಕಿನಲ್ಲಿ ಕರೆತರಲಾಗಿದೆ.

ವಿಜಯವಾಡ ನ್ಯಾಯಾಲಯವು ನಾಯ್ಡು ಅವರನ್ನು 14 ದಿನಗಳ ಕಾಲ ನ್ಯಾಯಾಂಗ ವಶಕ್ಕೆ ಒಪ್ಪಿಸಿ ಭಾನುವಾರ ಆದೇಶಿಸಿತ್ತು. ಸುಮಾರು 200 ಕಿ.ಮೀ. ದೂರದ ವಿಜಯವಾಡದಿಂದ ಪೂರ್ವ ಗೋಧಾವರಿ ಜಿಲ್ಲೆಯ ರಾಜ-ಮಹೇಂದ್ರವರಂ ಕೇಂದ್ರ ಕಾರಾಗೃಹಕ್ಕೆ ನಸುಕಿನಲ್ಲಿ 1.20ರ ಸಮಯಕ್ಕೆ ಅವರನ್ನು ಕರೆತರಲಾಯಿತು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪಿ. ಜಗದೀಶ್ ತಿಳಿಸಿದರು.

73 ವರ್ಷದ ನಾಯ್ಡು ಅವರಿಗೆ ನ್ಯಾಯಾಂಗ ಬಂಧನದ ವೇಳೆ ಮನೆಯ ಊಟ, ವೈದ್ಯಕೀಯ ಸೌಲಭ್ಯ ಮತ್ತು ವಿಶೇಷ ಕೊಠಡಿ ಪಡೆಯಲು ನ್ಯಾಯಾಲಯ ಅವಕಾಶ ಕಲ್ಪಿಸಿದೆ.

ನಾಯ್ಡು ಅವರ ಮಗ ಮತ್ತು ಟಿಡಿಪಿ ಪ್ರಧಾನ ಕಾರ್ಯದರ್ಶಿ ನಾರಾ ಲೋಕೇಶ್ ತಮ್ಮ ತಂದೆಯನ್ನು ಜೈಲಿನ ಗೇಟಿನವರೆಗೂ ಹಿಂಬಾಲಿಸಿಕೊಂಡು ಬಂದಿದ್ದರು. ಅವರು ಅಲ್ಲಿಂದ ಹೊರಡುವ ಮುನ್ನ ಸ್ವಲ್ಪ ಹೊತ್ತು ಹೊರಗೆ ಕಾದುಕುಳಿತ್ತಿದ್ದರು.

ರಾಜಮಹೇಂದ್ರವರಂ ಜೈಲಿನಲ್ಲಿ ಬಂಧಿತ ಚಂದ್ರಬಾಬು ನಾಯ್ಡು– ಪಿಟಿಐ ಚಿತ್ರ

ನಾಯ್ಡು ಅವರಿಗೆ ಜೀವ ಬೆದರಿಕೆ ಇರುವುದರಿಂದ ಜೈಲಿನ ಒಳಗೆ ಅವರಿಗೆ ಪ್ರತ್ಯೇಕ ಕೊಠಡಿ ಒದಗಿಸಲಾಗಿದೆ. ನಾಯ್ಡು ಅವರಿಗೆ ಝಡ್ ಪ್ಲಸ್ ಭದ್ರತೆ ಕಲ್ಪಿಸಲಾಗಿದೆ.

ಕೌಶಲ ಅಭಿವೃದ್ಧಿ ನಿಗಮದ ಹಣ ದುರುಪಯೋಗ ಆರೋಪದ ಮೇಲೆ ಚಂದ್ರಬಾಬು ನಾಯ್ಡು ಅವರನ್ನು ಸಿಐಡಿ ಪೊಲೀಸರು ಶನಿವಾರ ನಂದ್ಯಾಲದಲ್ಲಿ ಮದುವೆ ಕಾರ್ಯಕ್ರಮದ ಸ್ಥಳದಿಂದ ಬಂಧಿಸಿದ್ದರು.

ಕ್ರಿಕೆಟ್: ಕುಲದೀಪ್ ಯಾದವ್‌ಗೆ ಐದು ವಿಕೆಟ್ • ರೋಹಿತ್ ಶರ್ಮಾ ಬಳಗಕ್ಕೆ 228 ರನ್‌ಗಳ ಭರ್ಜರಿ ಗೆಲುವು

ಕೊಹ್ಲಿ, ರಾಹುಲ್ ಆಟಕ್ಕೆ ಪಾಕ್ ತತ್ತರ

ಪ್ರಜಾವಾಣಿ ವಾರ್ತೆ

ಕೊಲಂಬೊ: ವಿರಾಟ್ ಕೊಹ್ಲಿ ಮತ್ತು ಕೆ.ಎಲ್.ರಾಹುಲ್ ಅವರು ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಸೋಮವಾರ ಸುರಿಸಿದ ರನ್ ಮಳೆಯಲ್ಲಿ ಪಾಕಿಸ್ತಾನ ತಂಡ ತತ್ತರಿಸಿತು.

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಇವರಿಬ್ಬರು ಗಳಿಸಿದ ಭರ್ಜರಿ ಶತಕದ ನೆರವಿನಿಂದ ರೋಹಿತ್ ಶರ್ಮಾ ಬಳಗ, ಪಾಕ್ ವಿರುದ್ಧ 228 ರನ್‌ಗಳಿಂದ ಗೆದ್ದು ಬೀಗಿತು.

ಮೀಸಲು ದಿನವಾದ ಸೋಮವಾರ ಮುಂದುವರಿದ ಪಂದ್ಯದಲ್ಲಿ ಭಾರತ 50 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 356 ರನ್ ಕಲೆಹಾಕಿತು. ಕುಲದೀಪ್ ಯಾದವ್ (25ಕ್ಕೆ 5) ಅವರ ಕೈಚಳಕದ ಮುಂದೆ ನಲುಗಿದ ಬಾಬರ್ ಅಜಂ ಬಳಗ 32 ಓವರ್‌ಗಳಲ್ಲಿ 128 ರನ್‌ಗಳಿಗೆ ಆಲೌಟಾಯಿತು.

ಗಾಯಗೊಂಡ ಕಾರಣ ನಸೀಮ್ ಶಾ ಮತ್ತು ಹ್ಯಾರಿಸ್ ರವೂಫ್ ಅವರು ಬ್ಯಾಟಿಂಗ್‌ಗೆ ಬರಲಿಲ್ಲ. ಇದರಿಂದ ಪಾಕ್ ತಂಡದ ಎಂಟನೇ ವಿಕೆಟ್ ಬಿದ್ದೊಡನೆ ಪಂದ್ಯಕ್ಕೆ ತೆರೆಬಿತ್ತು. ಫಖರ್ ಜಮಾನ್ (27) ಗರಿಷ್ಠ ಸ್ಕೋರರ್ ಎನಿಸಿಕೊಂಡರು.

ಕೊಹ್ಲಿ, ರಾಹುಲ್ ಅಬ್ಬರ: ಭಾನುವಾರ ಮಳೆಯಿಂದ ಅರ್ಧದಲ್ಲೇ ನಿಂತಿದ್ದ ಪಂದ್ಯ ಮೀಸಲು ದಿನವಾದ ಸೋಮವಾರ ಮುಂದುವರಿಯಿತು. 24.1 ಓವರ್‌ಗಳಲ್ಲಿ 147 ರನ್‌ಗಳಿಂದ ಆಟ ಮುಂದುವರಿಸಿದ ಭಾರತ ತಂಡ ಬೃಹತ್ ಮೊತ್ತ ಪೇರಿಸಿತು.

ಕೊಹ್ಲಿ 94 ಎಸೆತಗಳಲ್ಲಿ 122 ರನ್ ಗಳಿಸಿದರೆ, ರಾಹುಲ್ 106 ಎಸೆತಗಳಲ್ಲಿ 111 ರನ್ ಕಲೆಹಾಕಿದರು. ಪಾಕ್ ತಂಡದ ವೇಗ ಹಾಗೂ ಸ್ಪಿನ್ ದಾಳಿಯನ್ನು ಪುಡಿಗಟ್ಟಿದ ಈ ಜೋಡಿ ಮುರಿಯದ ಮೂರನೇ ವಿಕೆಟ್‌ಗೆ 233 ರನ್ ಸೇರಿಸಿತು.

ಏಕದಿನ ಕ್ರಿಕೆಟ್‌ನಲ್ಲಿ 47ನೇ ಶತಕ ಸಾಧನೆ ಮಾಡಿದ ಕೊಹ್ಲಿ, ಬ್ಯಾಟಿಂಗ್ ದಿಗ್ಗಜ ಸಚಿನ್ ತೆಂಡೂಲ್ಕರ್ (49 ಶತಕ) ಅವರನ್ನು ಹಿಂದಿಕ್ಕುವ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟರು.

ಸುಮಾರು ನಾಲ್ಕು ತಿಂಗಳ ಬಳಿಕ ಕಣಕ್ಕಿಳಿದ ಕರ್ನಾಟಕದ ವಿಕೆಟ್ ಕೀಪರ್ ಬ್ಯಾಟರ್ ರಾಹುಲ್, ಏಕದಿನ ಕ್ರಿಕೆಟ್‌ನಲ್ಲಿ ಆರನೇ ಶತಕ ಪೂರೈಸಿದರು. ತಮ್ಮ ಫಿಟ್‌ನೆಸ್ ಬಗ್ಗೆ ಎದ್ದಿದ್ದ ಅನುಮಾನಗಳನ್ನು ಸೊಗಸಾದ ಬ್ಯಾಟಿಂಗ್ ಮೂಲಕ ದೂರ ಮಾಡಿದರು.

ರೋಹಿತ್ ಮತ್ತು ಶುಭಮನ್ ಗಿಲ್ ಭಾನುವಾರ ಮೊದಲ ವಿಕೆಟ್‌ಗೆ ಶತಕದ ಜತೆಯಾಟವಾಡಿ ಭಾರತಕ್ಕೆ ಉತ್ತಮ ಆರಂಭ ನೀಡಿದ್ದರು. ಕೊಹ್ಲಿ ಹಾಗೂ ರಾಹುಲ್ ಆರಂಭದ ಕೆಲವು ಓವರ್‌ಗಳನ್ನು ಎಚ್ಚರಿಕೆಯಿಂದ ಎದುರಿಸಿದರು. ಆದರೂ ರನ್ ರೇಟ್ 7ರ ಆಸುಪಾಸು ಇರುವಂತೆ ನೋಡಿಕೊಂಡರು.

ಪರಿಸ್ಥಿತಿಗೆ ಹೊಂದಿಕೊಂಡ ಬಳಿಕ ಕೊಹ್ಲಿ ಬಿರುಸಿನ ಆಟಕ್ಕಿಳಿದರು. ಬೌಂಡರಿ, ಸಿಕ್ಸರ್‌ಗಳ ಮೂಲಕ ಪಾಕ್ ಬೌಲಿಂಗ್ ವಿಭಾಗದ ದಿಕ್ಕು ತಪ್ಪಿಸಿದರು. ಪಾಕ್ ನಾಯಕ ಬಾಬರ್ ಅಜಂ ಅವರು ಬೌಲಿಂಗ್‌ನಲ್ಲಿ ಪದೇ ಪದೇ ಬದಲಾವಣೆ ಮಾಡಿದರೂ ಯಾವುದೇ ಫಲ ದೊರೆಯಲಿಲ್ಲ. ಭಾರತ ತಂಡ ಸೋಮವಾರ ಆಡಿದ 25.5 ಓವರ್‌ಗಳಲ್ಲಿ 209 ರನ್ ಕಲೆಹಾಕಿತು.

ಆಕರ್ಷಕ ಡ್ರೈವ್‌ಗಳು, ಅಪ್ಪರ್ ಕಟ್ ಹಾಗೂ ಪುಲ್ ಶಾಟ್‌ಗಳು ಕೊಹ್ಲಿ ಅವರ ಇನಿಂಗ್ಸ್‌ನ ಮೆರುಗು ಹೆಚ್ಚಿಸಿದವು. ರಾಹುಲ್ ಅವರು ಲೆಗ್ ಸ್ಪಿನ್ನರ್ ಶಾದಾಬ್ ಖಾನ್ ಅವರ ಬೌಲಿಂಗ್‌ನಲ್ಲಿ ಹೊಡೆದ ಸಿಕ್ಸರ್ ಸೊಗಸಾಗಿತ್ತು. ರಾಹುಲ್ ಭರ್ತಿ 100 ಎಸೆತಗಳಲ್ಲಿ ಶತಕ ಪೂರೈಸಿದರೆ, ಕೊಹ್ಲಿ 84 ಎಸೆತಗಳಲ್ಲಿ ಮೂರಂಕಿಯ ಗಡಿ ದಾಟಿದರು.

ಭಾರತಕ್ಕೆ ಪ್ರಮುಖ 'ಬೆದರಿಕೆ' ಎನಿಸಿಕೊಂಡಿದ್ದ ಪಾಕ್ ತಂಡದ ಎಡಗೈ ವೇಗಿ ಶಾಹೀನ್ ಶಾ ಅಫ್ರಿದಿ ಅವರನ್ನು ಅಗ್ರಕ್ರಮಾಂಕದ ನಾಲ್ವರು ಬ್ಯಾಟರ್‌ಗಳು ಸಮರ್ಥವಾಗಿ ಎದುರಿಸಿದರು. ಅವರು 10 ಓವರ್‌ಗಳಲ್ಲಿ 79 ರನ್‌ಗಳನ್ನು ಬಿಟ್ಟುಕೊಟ್ಟರು. ವೇಗದ ಬೌಲರ್ ಹ್ಯಾರಿಸ್ ರವೂಫ್ ಗಾಯದ ಕಾರಣ ಸೋಮವಾರ ಕಣಕ್ಕಿಳಿಯದೇ ಇದ್ದುದು ಪಾಕ್ ತಂಡದ ಬೌಲಿಂಗ್‌ನ ಶಕ್ತಿ ಅಲ್ಪ ಕುಂದುವಂತೆ ಮಾಡಿತು.

ದೊಡ್ಡ ಅಂತರದ ಗೆಲುವು: ಏಕದಿನ ಪಂದ್ಯಗಳಲ್ಲಿ ಭಾರತಕ್ಕೆ ಪಾಕಿಸ್ತಾನದ ವಿರುದ್ಧ ರನ್‌ಗಳ ಆಧಾರದಲ್ಲಿ ದೊಡ್ಡ ಅಂತರದ ಗೆಲುವು ಇದಾಗಿದೆ. ಈ ಹಿಂದೆ 2008ರಲ್ಲಿ 140 ರನ್‌ಗಳಿಂದ ಭಾರತ ಜಯ ಸಾಧಿಸಿತ್ತು.

ದಾಖಲೆ ಜತೆಯಾಟ: ವಿರಾಟ್ ಮತ್ತು ರಾಹುಲ್ ಅವರು ಮೂರನೇ ವಿಕೆಟ್‌ಗೆ ಸೇರಿಸಿದ 233 ರನ್‌ಗಳು ಏಕದಿನ ಕ್ರಿಕೆಟ್‌ನಲ್ಲಿ ಪಾಕಿಸ್ತಾನದ ವಿರುದ್ಧ ಯಾವುದೇ ವಿಕೆಟ್‌ಗೆ ದಾಖಲಾದ ಅತಿದೊಡ್ಡ ಜತೆಯಾಟ ಎನಿಸಿದೆ. ನವಜೋತ್ ಸಿಧು ಮತ್ತು ಸಚಿನ್ ತೆಂಡೂಲ್ಕರ್ 1996 ರಲ್ಲಿ ಶಾರ್ಜಾದಲ್ಲಿ ನಡೆದಿದ್ದ ಪಂದ್ಯದಲ್ಲಿ ಎರಡನೇ ವಿಕೆಟ್‌ಗೆ ಕಲೆಹಾಕಿದ್ದ 231 ರನ್‌ಗಳು ಇದುವರೆಗಿನ ದಾಖಲೆಯಾಗಿತ್ತು.

ಶತಕ ಗಳಿಸಿದ ಕೆ.ಎಲ್.ರಾಹುಲ್ ಅವರ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ವಿರಾಟ್ ಕೊಹ್ಲಿ ಚೆಂಡನ್ನು ಬಡಿದಟ್ಟಿದ ವೈಖರಿ –ಎಪಿ ಚಿತ್ರ

ಕುಲದೀಪ್ ಯಾದವ್

ಕೊಲಂಬೊದಲ್ಲಿ ಸತತ ನಾಲ್ಕನೇ ಶತಕ

ಕೊಲಂಬೊದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ಏಕದಿನ ಕ್ರಿಕೆಟ್‌ನಲ್ಲಿ ಸತತ ನಾಲ್ಕು ಶತಕ ಗಳಿಸಿದ ಸಾಧನೆಯನ್ನು ಕೊಹ್ಲಿ ಮಾಡಿದರು.

ಅವರು ಇಲ್ಲಿ ಆಡಿದ್ದ ಈ ಹಿಂದಿನ ಮೂರು ಪಂದ್ಯಗಳಲ್ಲಿ ಕ್ರಮವಾಗಿ 128 (119 ಎ.), 131 (96 ಎ.) ಮತ್ತು 110 ರನ್ (116 ಎ.) ಕಲೆಹಾಕಿದ್ದರು. ಏಕದಿನ ಕ್ರಿಕೆಟ್‌ನಲ್ಲಿ ಒಂದೇ ತಾಣದಲ್ಲಿ ಸತತ ನಾಲ್ಕು ಶತಕ ಗಳಿಸಿದ್ದ ದಕ್ಷಿಣ ಆಫ್ರಿಕಾದ ಹಾಶಿಮ್ ಆಮ್ಲಾ ಅವರ ದಾಖಲೆಯನ್ನು ಸರಿಗಟ್ಟಿದರು. ಆಮ್ಲಾ, ಸೆಂಚೂರಿಯನ್ ಕ್ರೀಡಾಂಗಣದಲ್ಲಿ ಇಂತಹ ಸಾಧನೆ ಮಾಡಿದ್ದರು.

ಏಷ್ಯಾ ಕಪ್ 2023

ವಿರಾಟ್ ಅತಿವೇಗದ 13 ಸಾವಿರ ರನ್

ವಿರಾಟ್ ಕೊಹ್ಲಿ ಅವರು ಏಕದಿನ ಕ್ರಿಕೆಟ್‌ನಲ್ಲಿ ಅತಿ ಕಡಿಮೆ ಪಂದ್ಯಗಳಲ್ಲಿ 13 ಸಾವಿರ ರನ್ ಪೂರೈಸಿದ ಸಾಧನೆ ಮಾಡಿದರು. ಸಚಿನ್ ತೆಂಡೂಲ್ಕರ್ ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು. ಕೊಹ್ಲಿ, 267ನೇ ಇನಿಂಗ್ಸ್‌ನಲ್ಲಿ (278ನೇ ಪಂದ್ಯ) ಈ ಮೈಲಿಗಲ್ಲು ದಾಟಿದರು. ಸಚಿನ್ ಅವರು 13 ಸಾವಿರ ರನ್ ಪೂರೈಸಲು 321 ಇನಿಂಗ್ಸ್‌ಗಳನ್ನು (330ನೇ ಪಂದ್ಯ) ತೆಗೆದುಕೊಂಡಿದ್ದರು.

ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ 13 ಸಾವಿರ ರನ್‌ಗಳ ಗಡಿ ದಾಟಿದ ಐದನೇ ಬ್ಯಾಟರ್ ಎನಿಸಿಕೊಂಡರು. ಸಚಿನ್ ಅಲ್ಲದೆ ರಿಕಿ ಪಾಂಟಿಂಗ್, ಕುಮಾರ ಸಂಗಕ್ಕಾರ ಹಾಗೂ ಸನತ್ ಜಯಸೂರ್ಯ ಈ ಸಾಧನೆ ಮಾಡಿದ್ದಾರೆ.

ಏಕದಿನ ಕ್ರಿಕೆಟ್‌ನಲ್ಲಿ 13 ಸಾವಿರ ರನ್ ಗಡಿ ದಾಟಿದವರು

ಆಟಗಾರ	ದೇಶ	ಪಂದ್ಯ	ಒಟ್ಟು ರನ್
ಸಚಿನ್ ತೆಂಡೂಲ್ಕರ್	ಭಾರತ	463	18,426
ಕುಮಾರ ಸಂಗಕ್ಕಾರ	ಶ್ರೀಲಂಕಾ	404	14,234
ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ	375	13,704
ಸನತ್ ಜಯಸೂರ್ಯ	ಶ್ರೀಲಂಕಾ	445	13,430
ವಿರಾಟ್ ಕೊಹ್ಲಿ	ಭಾರತ	278	13,024

ಭಾರತಕ್ಕೆ ಇಂದು ಲಂಕಾ ಸವಾಲು

ಮಂಗಳವಾರ ನಡೆಯಲಿರುವ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ರೋಹಿತ್ ಶರ್ಮಾ ಬಳಗ, ಆತಿಥೇಯ ಶ್ರೀಲಂಕಾ ತಂಡವನ್ನು ಎದುರಿಸಲಿದೆ.

ಇದರಿಂದ ಭಾರತ ತಂಡ ಸತತ ಮೂರನೇ ದಿನ ಕಣಕ್ಕಿಳಿದಂತಾಗುತ್ತದೆ. ಪಾಕ್ ವಿರುದ್ಧ ಭಾನುವಾರ ನಡೆಯಬೇಕಿದ್ದ ಪಂದ್ಯ ಮಳೆಯಿಂದ ಅರ್ಧದಲ್ಲೇ ನಿಂತಿತ್ತು. ಮೀಸಲು ದಿನವಾದ ಸೋಮವಾರ ಆಟವನ್ನು ಮುಂದುವರಿಸಲಾಗಿತ್ತು.

ಶ್ರೀಲಂಕಾ ತಂಡ ಸೂಪರ್ ಫೋರ್ ಹಂತದ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಮಣಿಸಿತ್ತು. ಲೀಗ್ ಹಂತದಲ್ಲಿ ಎರಡು ಪಂದ್ಯಗಳನ್ನು ಗೆದ್ದುಕೊಂಡಿದ್ದ ಆತಿಥೇಯ ತಂಡ ಟೂರ್ನಿಯಲ್ಲಿ ಅಜೇಯವಾಗಿ ಉಳಿದುಕೊಂಡಿದೆ.

ಪಂದ್ಯ ಆರಂಭ: ಮಧ್ಯಾಹ್ನ 3, **ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್

ಸ್ಕೋರ್ ಕಾರ್ಡ್

ಭಾರತ 2 ವಿಕೆಟ್‌ಗೆ 356 (50 ಓವರ್)
ರೋಹಿತ್ ಸಿ ಅಶ್ರಫ್ ಬಿ ಶಾದಾಬ್ 56 (49ಎ, 4X6, 6x4)
ಶುಭಮನ್ ಸಿ ಸಲ್ಮಾನ್ ಬಿ ಶಾಹೀನ್ 58 (52ಎ, 4X10)
ವಿರಾಟ್ ಔಟಾಗದೆ 122 (94ಎ, 4X9, 6x3)
ರಾಹುಲ್ ಔಟಾಗದೆ 111 (106ಎ, 4x12, 6x2)
ಇತರೆ: 9 (ವೈಡ್ 8, ನೋಬಾಲ್ 1)
ವಿಕೆಟ್ ಪತನ: 1–121 (ರೋಹಿತ್ ಶರ್ಮಾ; 16.4), 2–123 (ಶುಭಮನ್ ಗಿಲ್; 17.5),
ಬೌಲಿಂಗ್: ಶಾಹೀನ್ ಶಾ ಅಫ್ರಿದಿ 10–0–79–1, ನಸೀಮ್ ಶಾ, 9.2–1–53–0, ಫಹೀಂ ಅಶ್ರಫ್ 10–0–74–0, ಹ್ಯಾರಿಸ್ ರವೂಫ್ 5–0–27–0, ಶಾದಾಬ್ ಖಾನ್ 10–1–71–1, ಇಫ್ತಿಕರ್ ಅಹಮದ್ 5.4–0–52–0

ಪಾಕಿಸ್ತಾನ 128 (32 ಓವರ್‌ಗಳಲ್ಲಿ)
ಜಮಾನ್ ಬಿ ಯಾದವ್ 27 (50ಎ, 4x2)
ಇಮಾಮ್ ಸಿ ಶುಭಮನ್ ಬಿ ಬೂಮ್ರಾ 9 (18ಎ, 4X1)
ಬಾಬರ್ ಬಿ ಪಾಂಡ್ಯ 10 (24ಎ, 4x1)
ರಿಜ್ವಾನ್ ಸಿ ರಾಹುಲ್ ಬಿ ಠಾಕೂರ್ 2 (5ಎ)
ಸಲ್ಮಾನ್ ಎಲ್‌ಬಿಡಬ್ಲ್ಯು ಯಾದವ್ 23 (32ಎ, 4x2)
ಇಫ್ತಿಕರ್ ಸಿ ಮತ್ತು ಬಿ ಯಾದವ್ 23 (35ಎ, 4x1)
ಶಾದಾಬ್ ಸಿ ಠಾಕೂರ್ ಬಿ ಯಾದವ್ 6 (10ಎ)
ಫಹೀಂ 4 (12ಎ)
ಶಾಹೀನ್ ಔಟಾಗದೆ 7 (6ಎ, 6x1)
ನಸೀಮ್ ಶಾ ಮತ್ತು ಹ್ಯಾರಿಸ್ ರವೂಫ್ ಗಾಯದ ಕಾರಣ ಬ್ಯಾಟಿಂಗ್‌ಗೆ ಬರಲಿಲ್ಲ
ಇತರೆ: 17 (ಲೆಗ್‌ಬೈ 3, ವೈಡ್ 14)
ವಿಕೆಟ್ ಪತನ: 1–17 (ಇಮಾಮ್ ಉಲ್ ಹಕ್; 4.2), 2–43 (ಬಾಬರ್ ಅಜಂ; 10.4), 3–47 (ಮೊಹಮ್ಮದ್ ರಿಜ್ವಾನ್; 11.4), 4–77 (ಫಖರ್ ಜಮಾನ್; 19.2), 5–96 (ಆಘಾ ಸಲ್ಮಾನ್; 23.6), 6–110 (ಶಾದಾಬ್ ಖಾನ್; 27.4), 7–119 (ಇಫ್ತಿಕರ್ ಅಹಮದ್; 29.3), 8–128 ಫಹೀಂ ಅಶ್ರಫ್; 31.6)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 5–1–18–1, ಮೊಹಮ್ಮದ್ ಸಿರಾಜ್ 5–0–23–0, ಹಾರ್ದಿಕ್ ಪಾಂಡ್ಯ 5–0–17–1, ಶಾರ್ದೂಲ್ ಠಾಕೂರ್ 4–0–16–1, ಕುಲದೀಪ್ ಯಾದವ್ 8–0–25–5, ರವೀಂದ್ರ ಜಡೇಜ 5–0–26–0

ಫಲಿತಾಂಶ: ಭಾರತಕ್ಕೆ 228 ರನ್‌ಗಳ ಜಯ

'ಸಿಂಧು ಮೇಲೆ ಹೆಚ್ಚಿನ ನಿರೀಕ್ಷೆ ಬೇಡ'

ಭಾರತ ಬ್ಯಾಡ್ಮಿಂಟನ್ ತಂಡದ ಮಾಜಿ ಕೋಚ್ ವಿಮಲ್

ನವದೆಹಲಿ (ಪಿಟಿಐ): ಸತತ ವೈಫಲ್ಯದಿಂದ ಪಿ.ವಿ.ಸಿಂಧು ಅವರ ಆತ್ಮವಿಶ್ವಾಸ ಕುಗ್ಗಿದ್ದು, ಏಷ್ಯನ್ ಗೇಮ್ಸ್‌ನಲ್ಲಿ ಅವರಿಂದ ಹೆಚ್ಚಿನದ್ದನ್ನು ನಿರೀಕ್ಷಿಸುವಂತಿಲ್ಲ ಎಂದು ಭಾರತ ಬ್ಯಾಡ್ಮಿಂಟನ್ ತಂಡದ ಮಾಜಿ ಕೋಚ್ ವಿಮಲ್ ಕುಮಾರ್ ಹೇಳಿದ್ದಾರೆ.

ಹಳೆಯ ಲಯಕ್ಕೆ ಮರಳುವ ಪ್ರಯತ್ನದಲ್ಲಿರುವ 28 ವರ್ಷದ ಸಿಂಧು, ಬೆಂಗಳೂರಿನ ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ (ಪಿಪಿಬಿಎ) ದಿಗ್ಗಜ ಆಟಗಾರ ಪ್ರಕಾಶ್ ಪಡುಕೋಣೆ ಅವರಿಂದ ಕಳೆದ ವಾರ ತರಬೇತಿ ಪಡೆದಿದ್ದರು.

'ತರಬೇತಿ ಅವಧಿಯಲ್ಲಿ ಸಿಂಧು ಅವರ ಆಟವನ್ನು ಗಮನಿಸಿದ್ದೇವೆ. ಪ್ರಕಾಶ್, ಆತ್ಮವಿಶ್ವಾಸದ ಮಾತುಗಳ ಮೂಲಕ ಸಿಂಧು ಅವರಲ್ಲಿ ಪ್ರೇರಣೆ ತುಂಬಲು ಪ್ರಯತ್ನಿಸಿದ್ದಾರೆ. ಅವರ ಕೋಚ್ (ಮೊಹಮ್ಮದ್ ಹಫೀಜ್ ಹಾಶಿಂ) ಜತೆಯೂ ಮಾತನಾಡಿದ್ದೇವೆ' ಎಂದು ಪಿಪಿಬಿಎ ನಿರ್ದೇಶಕ ವಿಮಲ್ ತಿಳಿಸಿದ್ದಾರೆ.

'ಸದ್ಯಕ್ಕೆ ಅವರಲ್ಲಿ ಆತ್ಮವಿಶ್ವಾಸದ ಕೊರತೆಯಿದೆ. ಆದ್ದರಿಂದ ಏಷ್ಯನ್ ಗೇಮ್ಸ್‌ನಲ್ಲಿ ಅವರಿಂದ ಪದಕ ನಿರೀಕ್ಷಿಸುವಂತಿಲ್ಲ' ಎಂದಿದ್ದಾರೆ.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಹಾಗೂ 2019 ರ ವಿಶ್ವ ಚಾಂಪಿಯನ್ ಆಗಿರುವ ಸಿಂಧು, ಈ ಋತುವಿನ ಬಿಡಬ್ಲ್ಯುಎಫ್ ಟೂರ್‌ನ ಏಳು ಟೂರ್ನಿಗಳಲ್ಲಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು.

ಕೆನಡಾ ಓಪನ್‌ನಲ್ಲಿ ಸೆಮಿಫೈನಲ್‌ವರೆಗೆ ತಲುಪಿದ್ದು, ಅಮೆರಿಕ ಓಪನ್ ಸೂಪರ್ 300 ಮತ್ತು ಆಸ್ಟ್ರೇಲಿಯನ್ ಓಪನ್ ಸೂಪರ್ 500 ಟೂರ್ನಿಗಳಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದು ಈ ಋತುವಿನಲ್ಲಿ ಇದುವರೆಗಿನ ಅವರ ಅತ್ಯುತ್ತಮ ಸಾಧನೆಯಾಗಿದೆ.

'ಸಿಂಧು ಅವರಿಗೆ ಹಳೆಯ ಲಯ ಕಂಡುಕೊಳ್ಳಲು ಅಲ್ಪ ಸಮಯಾವಕಾಶ ನೀಡುವುದು ಮುಖ್ಯ. ಹಿಂದಿನ ಫಾರ್ಮ್‌ಗೆ ಮರಳಲು ಕೆಲವು ತಿಂಗಳು ಬೇಕಾಗಬಹುದು. ಅವರು ಆಟದಲ್ಲಿ ಒಂದಷ್ಟು ತಾಂತ್ರಿಕ ಬದಲಾವಣೆ ಮಾಡಿಕೊಳ್ಳಬೇಕಿದೆ' ಎಂದು ಅಭಿಪ್ರಾಯಪಟ್ಟರು.

ಏಷ್ಯನ್ ಕ್ರೀಡಾಕೂಟ ಚೀನಾದ ಹಾಂಗ್‌ಝೌನಲ್ಲಿ ಸೆ.23 ರಿಂದ ನಡೆಯಲಿದೆ. ಸಿಂಧು ಅವರು ಈ ಕ್ರೀಡಾಕೂಟಕ್ಕೆ ಸಜ್ಜಾಗಲು ಚೀನಾ ಓಪನ್ ಸೂಪರ್ 1000 ಮತ್ತು ಹಾಂಗ್‌ಕಾಂಗ್ ಓಪನ್ ಸೂಪರ್ 500 ಟೂರ್ನಿಯಿಂದ ಹಿಂದೆ ಸರಿದಿದ್ದರು.


ಪಿ.ವಿ.ಸಿಂಧು

ಐಒಎ, ಎಐಎಫ್‌ಎಫ್ ಕರಡು ನಿಯಮಾವಳಿ

ಅ. 20ರಂದು ಅರ್ಜಿಗಳ ವಿಚಾರಣೆ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಮತ್ತು ಅಖಿಲ ಭಾರತ ಫುಟ್‌ಬಾಲ್ ಸಂಸ್ಥೆ (ಎಐಎಫ್‌ಎಫ್)ಗಳ ನಿಯಮಾವಳಿಗಳನ್ನು ಅಂತಿಮಗೊಳಿಸುವುದಕ್ಕೆ ಸಂಬಂಧಿಸಿ ಸಲ್ಲಿಸಲಾಗಿರುವ ಅರ್ಜಿಗಳ ಅಂತಿಮ ವಿಚಾರಣೆಯನ್ನು ಅಕ್ಟೋಬರ್ 20ಕ್ಕೆ ನಿಗದಿಮಾಡಿರುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ಈ ಎರಡೂ ಸಂಸ್ಥೆಗಳ ನಿಯಮಾವಳಿಗಳನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ಅವರು ರೂಪಿಸಿದ್ದಾರೆ.

ಈ ಕರಡು ನಿಯಮಾವಳಿಗಳಿಗೆ ಸಂಬಂಧಪಟ್ಟಂತೆ ಎತ್ತಿರುವ ಆಕ್ಷೇಪಗಳಿಗೆ ಸಂಬಂಧಿಸಿ ಪ್ರತ್ಯೇಕ ಅರ್ಜಿಗಳ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾ. ಪಿ.ಎಸ್.ನರಸಿಂಹ ಅವರನ್ನೊಳಗೊಂಡ ಪೀಠವು ಅ. 20ರಂದು ಈ ಬಗ್ಗೆ ನಿರ್ಧರಿಸಲಾಗುವುದು ಎಂದು ತಿಳಿಸಿತು.

'ಐಒಎ ನಿಯಮಾವಳಿಗೆ (ಸಂವಿಧಾನಕ್ಕೆ) ಸಂಬಂಧಿಸಿ ಎತ್ತಿರುವ ಆಕ್ಷೇಪಣೆಗಳನ್ನು ಪಟ್ಟಿ ಮಾಡಲಾಗಿದ್ದು, ಸಂಬಂಧಿತ ಅರ್ಜಿದಾರರಿಗೆ ಕಳುಹಿಸಲಾಗುವುದು ಎಂದು ಅಡಿಷನಲ್ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್ ಅವರು ತಿಳಿಸಿದ್ದಾರೆ ಎಂದು ಪೀಠವು ಹೇಳಿತು.

ಎಐಎಫ್‌ಎಫ್ ನಿಯಮಾವಳಿಗೆ ಸಂಬಂಧಿಸಿ ನ್ಯಾ.ರಾವ್ ಅವರು ಸಲ್ಲಿಸಿರುವ ವರದಿಯ ಪ್ರತಿಯನ್ನು ಪಡೆಯಲು ಬಯಸುವ ಅರ್ಜಿದಾರರಿಗೆ ಅಮಿಕಸ್ ಕ್ಯೂರಿ ಆಗಿರುವ ಗೋಪಾಲ್ ಶಂಕರನಾರಾಯಣ ಅವರು ಪ್ರತಿಯನ್ನು ನೀಡುತ್ತಾರೆ ಎಂದು ಪೀಠವು ತಿಳಿಸಿತು.

ಎಐಎಫ್‌ಎಫ್ ನಿಯಮಾವಳಿಗಳಿಗೆ ಸಂಬಂಧಿಸಿದ ಆಕ್ಷೇಪಣೆಗಳನ್ನು ಮೂರು ವಾರಗಳ ಒಳಗೆ ಸಲ್ಲಿಸಬೇಕು ಎಂದು ಕೋರ್ಟ್ ನಿರ್ದೇಶನ ನೀಡಿತು.

ನಾಲ್ಕನೇ ಬಾರಿ ಅಮೆರಿಕ ಓಪನ್ ಗೆದ್ದ ಸರ್ಬಿಯಾ ಆಟಗಾರ • ಮೆಡ್ವೆಡೇವ್ ರನ್ನರ್ ಅಪ್

ಜೊಕೊವಿಚ್‌ಗೆ ದಾಖಲೆಯ 24ನೇ ಪ್ರಶಸ್ತಿ

ನ್ಯೂಯಾರ್ಕ್ (ಎಎಫ್‌ಪಿ): ಅನುಭವಿ ನೊವಾಕ್ ಜೊಕೊವಿಚ್ ನೇರ ಸೆಟ್‌ಗಳಿಂದ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರನ್ನು ಸೋಲಿಸಿ ನಾಲ್ಕನೇ ಬಾರಿಗೆ ಅಮೆರಿಕ ಓಪನ್ ಕಿರೀಟ ಮುಡಿಗೇರಿಸಿಕೊಂಡರು. ಇದು ಅವರಿಗೆ 24ನೇ ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿ. ಆ ಮೂಲಕ ಟೆನಿಸ್ ಲೋಕದ ಮಹಾನ್ ಆಟಗಾರನೆಂಬ ಅವರ ಸ್ಥಾನ ಮತ್ತಷ್ಟು ಗಟ್ಟಿಯಾಯಿತು.

ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಸರ್ಬಿಯಾದ 36 ವರ್ಷದ ಆಟಗಾರ 6–3, 7–6 (7–5), 6–3 ರಿಂದ ಮೂರನೇ ಶ್ರೇಯಾಂಕದ ಮೆಡ್ವೆಡೇವ್ ಅವರನ್ನು ಸೋಲಿಸಿದರು. ಟೆನಿಸ್‌ನ ಓಪನ್ ಯುಗದಲ್ಲಿ (1968ರ ನಂತರ) ಈ ಪ್ರಶಸ್ತಿ ಗೆದ್ದ ಅತಿ ಹಿರಿಯ ಆಟಗಾರ ಎನ್ನುವ ಹಿರಿಮೆಯೂ ಅವರದಾಯಿತು. ಈ ಹಿಂದೆ 1970ರಲ್ಲಿ ಆಸ್ಟ್ರೇಲಿಯಾದ ಕೆನ್ ರೋಸ್‌ವಾಲ್ 35 ವರ್ಷವಿದ್ದಾಗ ಚಾಂಪಿಯನ್ ಆಗಿದ್ದರು.

ಆಸ್ಟ್ರೇಲಿಯಾದ ಆಟಗಾರ್ತಿ ಮಾರ್ಗರೆಟ್ ಕೋರ್ಟ್ ಕೂಡ 24 ಸಿಂಗಲ್ಸ್ ಪ್ರಶಸ್ತಿಗಳನ್ನು ಜಯಿಸಿದ್ದರು. ಜೊಕೊವಿಚ್ ಅವರು ಒಂದೇ ವರ್ಷ ಮೂರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ನಾಲ್ಕು ಬಾರಿ ಗೆದ್ದ (ಈ ಹಿಂದೆ 2011, 2015 ಮತ್ತು 2021ರಲ್ಲಿ) ಮೊದಲ ಪುರುಷ ಆಟಗಾರ ಎನಿಸಿದರು. ಅಗ್ರಮಾನ್ಯ ಪಟ್ಟವನ್ನು ಮರಳಿ ಪಡೆದುಕೊಳ್ಳಲಿರುವ ಸಂದರ್ಭದಲ್ಲಿ ಈ ಪ್ರಶಸ್ತಿ ಜೊಕೊವಿಚ್ ಅವರ ಸಾಧನೆಗೆ ಹೆಚ್ಚಿನ ಮೌಲ್ಯ ತಂದಿದೆ.

ಈ ವರ್ಷ ನಾಲ್ಕು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಅವರ ಸಾಧನೆ (27–1) ಅಮೋಘ. ಅವರ ಏಕೈಕ ಸೋಲು ವಿಂಬಲ್ಡನ್ ಫೈನಲ್‌ನಲ್ಲಿ (ಕಾರ್ಲೋಸ್ ಅಲ್ಕರಾಜ್ ವಿರುದ್ಧ) ಆಗಿತ್ತು.

ಕೋರ್ಟ್ ತಮ್ಮ 24 ಪ್ರಶಸ್ತಿಗಳಲ್ಲಿ 13 ಅನ್ನು ಓಪನ್ ಯುಗಕ್ಕಿಂತ (1968ಕ್ಕಿಂತ) ಹಿಂದೆ ಪಡೆದರೆ, 11 ಪ್ರಶಸ್ತಿಗಳು ನಂತರ ಬಂದಿದ್ದವು.

'24ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಬಗ್ಗೆ ನಾನು ಈ ರೀತಿ ನಿಂತು ಮಾತನಾಡುವೆನೆಂದು ಯೋಚಿಸಿಯೇ ಇರಲಿಲ್ಲ. ಕೆಲವು ವರ್ಷಗಳಿಂದ ನನಗೊಂದು ಅವಕಾಶವಿದೆಯೆಂಬ ಭಾವನೆ ಮೂಡಿತು. ಅದನ್ನು ಏಕೆ ಬಾಚಿಕೊಳ್ಳಬಾರದು ಎನಿಸಿತು' ಎಂದು ಟ್ರೋಫಿ ಪ್ರದಾನ ಸಮಾರಂಭದಲ್ಲಿ ಬಿಳಿಯ ಜಾಕೆಟ್ ಧರಿಸಿದ್ದ ಜೊಕೊವಿಚ್ ಹೇಳಿದರು. ಜಾಕೆಟ್ ಮೇಲೆ ಎದೆಯ ಭಾಗದಲ್ಲಿ 24 ಎಂದು ಬರೆದಿದ್ದು ಗಮನಸೆಳೆಯಿತು.

'ಈ ಅನುಭವ ಪದಗಳಲ್ಲಿ ಹಿಡಿದಿಡುವುದು ಕಷ್ಟ. ಈ ಆಟವನ್ನು ಅತ್ಯುನ್ನತ ಸ್ತರದಲ್ಲಿ ಆಡಬೇಕೆಂಬ ನನ್ನ ಬಾಲ್ಯದ ನನ್ನ ಕನಸು ಈಡೇರಿದೆ' ಎಂದು 3 ಗಂಟೆ 17 ನಿಮಿಷಗಳ ಫೈನಲ್ ನಂತರ ಎರಡನೇ ಶ್ರೇಯಾಂಕದ ಆಟಗಾರ ಪ್ರತಿಕ್ರಿಯಿಸಿದರು.

ಈ ವರ್ಷ ಆಸ್ಟ್ರೇಲಿಯನ್ ಮತ್ತು ಫ್ರೆಂಚ್ ಓಪನ್ ಸಿಂಗಲ್ಸ್ ಕಿರೀಟ ಕೂಡ ಗೆದ್ದುಕೊಂಡಿದ್ದ ಜೊಕೊ ಅವರಿಗೆ ಕೈತಪ್ಪಿದ್ದು ವಿಂಬಲ್ಡನ್ ಪ್ರಶಸ್ತಿ ಮಾತ್ರ. ಅಲ್ಲೂ ಫೈನಲ್ ತಲುಪಿದರೂ ಕಾರ್ಲೋಸ್ ಅಲ್ಕರಾಜ್ ಎದುರು ಐದು ಸೆಟ್‌ಗಳ ಹೋರಾಟದಲ್ಲಿ ಸೋಲನುಭವಿಸಿದ್ದರು.

ಮೆಡ್ವೆಡೇವ್ ಅವರಿಗೆ ಇದು ಐದು ಗ್ರ್ಯಾನ್‌ಸ್ಲಾಮ್ ಫೈನಲ್‌ಗಳಲ್ಲಿ ನಾಲ್ಕನೇ ಸೋಲು. ಅವು ಜೊಕೊವಿಚ್ ಮತ್ತು ನಡಾಲ್ ವಿರುದ್ಧ ಬಂದಿವೆ. ಮೆಡ್ವೆಡೇವ್ ಅವರು 2021ರ ಅಮೆರಿಕ ಓಪನ್ ಫೈನಲ್‌ನಲ್ಲಿ ಜೊಕೊವಿಚ್ ಅವರನ್ನು ನೇರ ಸೆಟ್‌ಗಳಿಂದ ಸೋಲಿಸಿ ತಮ್ಮ ಏಕೈಕ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯಿಸಿದ್ದರು.

ಗೇಬ್ರಿಯೆಲಾ– ಎರಿನ್ ಜೋಡಿಗೆ ಪ್ರಶಸ್ತಿ

ಕೆನಡಾದ ಗೇಬ್ರಿಯೆಲಾ ದಬ್ರೋವ್‌ಸ್ಕಿ ಮತ್ತು ನ್ಯೂಜಿಲೆಂಡ್‌ನ ಎರಿನ್ ರೌಟ್ಲಿಫ್ ಜೋಡಿಯು ಅಮೆರಿಕ ಓಪನ್ ಟೂರ್ನಿಯ ಮಹಿಳೆಯರ ಡಬಲ್ಸ್‌ನಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಫೈನಲ್‌ನಲ್ಲಿ ಈ ಜೋಡಿಯು 2020ರ ಚಾಂಪಿಯನ್, ಜರ್ಮನಿಯ ಲಾರಾ ಸೀಗೆಮಂಡ್ ಮತ್ತು ವೆರಾ ಜ್ವೊನಾರೆವಾ ಅವರನ್ನು ಮಣಿಸಿತು. 16ನೇ ಶ್ರೇಯಾಂಕದ ಗೇಬ್ರಿಯೆಲಾ– ಎರಿನ್ ಜೋಡಿಯು ಮೊದಲ ಬಾರಿ ಗ್ರ್ಯಾಂಡ್ ಸ್ಲಾಮ್ ಡಬಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ.

ಅತಿ ಹೆಚ್ಚು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದವರು

ಆಟಗಾರ	ಪ್ರಶಸ್ತಿ
ನೊವಾಕ್ ಜೊಕೊವಿಚ್	24
ಮಾರ್ಗರೇಟ್ ಕೋರ್ಟ್	24
ಸೆರೇನಾ ವಿಲಿಯಮ್ಸ್	23
ಸ್ಟೆಫಿ ಗ್ರಾಫ್	22
ರಫೆಲ್ ನಡಾಲ್	22
ರೋಜರ್ ಫೆಡರರ್	20

₹24.88 ಕೋಟಿ
ಟ್ರೋಫಿ ಜೊತೆ ಜೊಕೊವಿಚ್ ಗೆದ್ದ ಬಹುಮಾನ ಮೊತ್ತ

₹12.44 ಕೋಟಿ
ಡೇನಿಯಲ್ ಮೆಡ್ವೆಡೇವ್ ಗೆದ್ದ ಬಹುಮಾನ ಮೊತ್ತ

ಅಮೆರಿಕ ಓಪನ್ ಟ್ರೋಫಿಯೊಂದಿಗೆ ಸಂಭ್ರಮಿಸಿದ ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ಉಷಾ ದಾಖಲೆ ಮುರಿಯುವ ಅವಕಾಶ ಅಲ್ಪದರಲ್ಲೇ ಕಳೆದುಕೊಂಡ ಆರ್. ವಿದ್ಯಾ

ಚಂಡೀಗಡ (ಪಿಟಿಐ): ತಮಿಳುನಾಡಿನ ಆರ್.ವಿದ್ಯಾ ರಾಮರಾಜ್ ಅವರು ದಿಗ್ಗಜ ಅಥ್ಲೀಟ್ ಪಿ.ಟಿ.ಉಷಾ ಅವರ 39 ವರ್ಷಗಳ ಹಳೆಯ ದಾಖಲೆಯನ್ನು ಮುರಿಯುವ ಅವಕಾಶವನ್ನು ಅಲ್ಪದರಲ್ಲೇ ಕಳೆದುಕೊಂಡರು.

ಇಲ್ಲಿ ನಡೆಯುತ್ತಿರುವ ಇಂಡಿಯನ್ ಗ್ರ್ಯಾನ್‌ಪ್ರಿ ಅಥ್ಲೆಟಿಕ್ ಕೂಟದಲ್ಲಿ ಸೋಮವಾರ ಮಹಿಳೆಯರ 400 ಮೀ. ಹರ್ಡಲ್ಸ್ ಸ್ಪರ್ಧೆಯನ್ನು ವಿದ್ಯಾ 55.43 ಸೆ.ಗಳಲ್ಲಿ ಪೂರೈಸಿದರು.

ಉಷಾ ಅವರು 1984ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ 55.42 ಸೆ.ಗಳೊಂದಿಗೆ ನಾಲ್ಕನೇ ಸ್ಥಾನ ಪಡೆದಿದ್ದರು. ಅವರ ಹೆಸರಿನಲ್ಲಿರುವ ರಾಷ್ಟ್ರೀಯ ದಾಖಲೆಯನ್ನು ಮುರಿಯಲು ಯಾರಿಗೂ ಸಾಧ್ಯವಾಗಿಲ್ಲ. 24 ವರ್ಷದ ವಿದ್ಯಾ ಅವರಿಗೆ ಸೆಕೆಂಡಿನ ನೂರನೇ ಒಂದು ಭಾಗದಿಂದ ದಾಖಲೆ ಸರಿಗಟ್ಟುವ ಅವಕಾಶ ತಪ್ಪಿಹೋಯಿತು.

ಉಷಾ ಹೆಸರಿನಲ್ಲಿರುವ ದಾಖಲೆ ಭಾರತದ ಅಥ್ಲೆಟಿಕ್ಸ್‌ನಲ್ಲಿ ಎರಡನೇ ಅತ್ಯಂತ ಹಳೆಯ ರಾಷ್ಟ್ರೀಯ ದಾಖಲೆ ಎನಿಸಿದೆ. ಮ್ಯಾರಥಾನ್‌ನಲ್ಲಿ ಶಿವನಾಥ್ ಸಿಂಗ್ ಅವರ ಹೆಸರಿನಲ್ಲಿರುವ ದಾಖಲೆ (1978) ಅತ್ಯಂತ ಹಳೆಯ ದಾಖಲೆ.

'ಉಷಾ ಮೇಡಂ ಶ್ರೇಷ್ಠ ಅಥ್ಲೀಟ್ ಆಗಿರುವ ಕಾರಣ ಅವರ ದಾಖಲೆಯನ್ನು ಇಷ್ಟು ಸುದೀರ್ಘ ಅವಧಿಯವರೆಗೆ ಯಾರಿಗೂ ಮುರಿಯಲು ಆಗಿಲ್ಲ. ಅವರ ದಾಖಲೆ ಮುರಿಯಬೇಕೆಂಬ ಗುರಿ ಇಟ್ಟುಕೊಂಡು ಕಣಕ್ಕಿಳಿದಿದ್ದೆ' ಎಂದು ವಿದ್ಯಾ ಹೇಳಿದರು.

'ಮೊದಲ 200 ಮೀ. ಓಟವನ್ನು ಸ್ವಲ್ಪ ನಿಧಾನವಾಗಿ ಪೂರೈಸಿದ ನಾನು ಬಳಿಕ ವೇಗ ಹೆಚ್ಚಿಸಿದೆ. ಮೊದಲ 200 ಮೀ. ದೂರವನ್ನು ವೇಗವಾಗಿ ಓಡಿದ್ದಲ್ಲಿ, ರಾಷ್ಟ್ರೀಯ ದಾಖಲೆ ಮುರಿಯುವ ಅವಕಾಶವಿತ್ತು. ಆದರೆ ಮುಂಬರುವ ಏಷ್ಯನ್ ಗೇಮ್ಸ್‌ನಲ್ಲಿ ದಾಖಲೆ ಸ್ಥಾಪಿಸಲು ಪ್ರಯತ್ನಿಸುವೆ' ಎಂದರು.

ವಿದ್ಯಾ ರಾಮರಾಜ್

ಸ್ಯಾಫ್ ಟೂರ್ನಿ: ಭಾರತಕ್ಕೆ ಪ್ರಶಸ್ತಿ

ತಿಂಪು, ಭೂತಾನ್ (ಪಿಟಿಐ): ಬಾಂಗ್ಲಾದೇಶ ತಂಡವನ್ನು 2–0 ಗೋಲುಗಳಿಂದ ಮಣಿಸಿದ ಭಾರತ, ಸ್ಯಾಫ್ 16 ವರ್ಷದೊಳಗಿನವರ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು

ಚಾಂಗ್ಲಿಮಿತಂಗ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಭರತ್ ಲಾಯ್‌ರೆಂಜಮ್ (8ನೇ ನಿ.) ಮತ್ತು ಲೆವಿಸ್ ಝಂಗ್‌ಮಿನ್ಲುನ್ (74ನೇ ನಿ.) ಭಾರತ ತಂಡದ ಪರ ಗೋಲು ಗಳಿಸಿದರು.

ಟೂರ್ನಿಯುದ್ದಕ್ಕೂ ಆಕ್ರಮಣಕಾರಿ ಆಟವಾಡಿದ್ದ ಭಾರತ ತಂಡದವರು ಸೆಮಿಫೈನಲ್‌ನಲ್ಲಿ 8–0 ಗೋಲುಗಳಿಂದ ಮಾಲ್ಡೀವ್ಸ್ ತಂಡವನ್ನು ಸೋಲಿಸಿದ್ದರು.

ಏಷ್ಯನ್ ಗೇಮ್ಸ್: 4x400 ಮೀ. ರಿಲೇ ತಂಡ ಸ್ಪರ್ಧೆಯಿಲ್ಲ

ಮತ್ತೆ ಮೂವರು ಅಥ್ಲೀಟ್‌ಗಳ ಸೇರ್ಪಡೆ

ಚಂಡೀಗಢ (ಪಿಟಿಐ): ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸುವ ಅಥ್ಲೆಟಿಕ್ಸ್ ತಂಡಕ್ಕೆ 3000 ಮೀ. ಸ್ಟೀಪಲ್‌ಚೇಸ್ ಸ್ಪರ್ಧಿ, ಹರಿಯಾಣದ ಪ್ರೀತಿ ಲಾಂಬಾ ಅವರನ್ನು ಭಾರತ ಅಥ್ಲೆಟಿಕ್ ಫೆಡರೇಷನ್ ಸೋಮವಾರ ಸೇರ್ಪಡೆಗೊಳಿಸಿದೆ. ಇವರ ಜೊತೆಗೆ ಸ್ಪ್ರಿಂಟ್ ಓಟಗಾರ ಅಮ್ಲನ್ ಬೊರ್ಗೊಹೈನ್ ಮತ್ತು 400 ಮೀ. ಓಟಗಾರ್ತಿ ಪ್ರಾಚಿ ಅವರನ್ನೂ ಸೇರ್ಪಡೆ ಮಾಡಲಾಗಿದೆ.

ಸೋಮವಾರ ಇಲ್ಲಿ ಇಂಡಿಯನ್ ಗ್ರ್ಯಾನ್‌ಪ್ರಿ ಅಥ್ಲೆಟಿಕ್ ಕೂಟ5 ಮುಕ್ತಾಯಗೊಂಡ ನಂತರ, ಈ ಸೇರ್ಪಡೆ ಮಾಡಲಾಗಿದೆ. ಕೂಟದ ಅಂತಿಮ ದಿನವಾದ ಸೋಮವಾರ ಇಬ್ಬರು ಸ್ಪರ್ಧಿಗಳಿದ್ದ ಮಹಿಳೆಯರ 3000 ಮೀ. ಓಟವನ್ನು ಲಾಂಬಾ 9ನಿ.45.13 ಸೆ.ಗಳಲ್ಲಿ ಓಡಿ ಎಎಫ್‌ಐ ನಿಗದಿಪಡಿಸಿದ ಅರ್ಹತಾ ಮಾನದಂಡವನ್ನು (9ನಿ.47 ಸೆ.) ಮೀರಿದ್ದರು.

27 ವರ್ಷದ ಲಾಂಬಾ ರಾಷ್ಟ್ರೀಯ ಅಂತರರಾಜ್ಯ ಚಾಂಪಿಯನ್‌ಷಿಪ್‌ನಲ್ಲಿ ಪಾರುಲ್ ಚೌಧರಿ ನಂತರ ಎರಡನೇ ಸ್ಥಾನ (9:52.89) ಪಡೆದಿದ್ದರು. ಜುಲೈನಲ್ಲಿ ನಡೆದ ನಾಲ್ಕನೇ ಏಷ್ಯನ್ ಚಾಂಪಿಯನ್‌ಷಿಪ್ ನಲ್ಲಿ ಅವರು ಮತ್ತಷ್ಟು ಪ್ರಗತಿ ಸಾಧಿಸಿದ್ದು 9ನಿ.48.50 ಸೆ.ಗಳಲ್ಲಿ ಓಟ ಮುಗಿಸಿ ನಾಲ್ಕನೇ ಸ್ಥಾನ ಪಡೆದಿದ್ದರು.

ಉತ್ತರ ಪ್ರದೇಶದ ಪ್ರಾಚಿ ಅವರಿಗೆ ಮಹಿಳೆಯರ 4x400 ಮೀ. ಓಟದಲ್ಲಿ ಸ್ಪರ್ಧಿಸಲು ಎಎಫ್‌ಐ ಆಯ್ಕೆ ಸಮಿತಿ ಸಮ್ಮತಿ ನೀಡಿದೆ. ಬೊರ್ಗೊಹೈನ್ ಅವರು ಪುರುಷರ 200 ಮೀ. ಓಟದಲ್ಲಿ ಸ್ಪರ್ಧಿಸಲಿದ್ದಾರೆ.

ಕ್ರೀಡಾ ಸಚಿವಾಲಯವು ಕಳೆದ ತಿಂಗಳ ಕೊನೆಯಲ್ಲಿ 65 ಸದಸ್ಯರ ತಂಡವನ್ನು ಪ್ರಕಟಿಸಿದ್ದು, ಈಗ ಮತ್ತೆ ಮೂವರ ಸೇರ್ಪಡೆಯಿಂದ ಈ ಸಂಖ್ಯೆ 68 ಆಗಲಿದೆ.

25 ವರ್ಷದ ಓಟಗಾರ ಬೊರ್ಗೊಹೈನ್ ಅವರು ತಂಡದಲ್ಲಿ ಇರಲಿದ್ದಾರೆ ಎಂದು ಎಎಫ್‌ಐ ಅಧ್ಯಕ್ಷ ಅದಿಲ್ ಸುಮರಿವಾಲಾ ಇದಕ್ಕೆ ಮೊದಲು ಹೇಳಿದ್ದರು.

ಸೋಮವಾರ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಅಸ್ಸಾಂ ಓಟಗಾರನ ಸೇರ್ಪಡೆಯನ್ನು ದೃಢಪಡಿಸಲಾಯಿತು. ಅವರು ಅರ್ಹತಾ ಮಾನದಂಡ (20.61 ಸೆ.) ತಲುಪಲು ವಿಫಲರಾಗಿದ್ದರು. ಆದರೆ ಕಳೆದ ತಿಂಗಳು ನಡೆದ ವಿಶ್ವ ಯುನಿವರ್ಸಿಟಿ ಗೇಮ್ಸ್‌ನಲ್ಲಿ 20.5 ಸೆ.ಗಳಲ್ಲಿ ಓಡಿ ಕಂಚಿನ ಪದಕ ಪಡೆದಿದ್ದರು. ಪುರುಷರ 20 ಕಿ.ಮೀ. ರೇಸ್ ವಾಕ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊದಿರುವ ಅಕ್ಷದೀಪ್ ಸಿಂಗ್ ಅವರನ್ನು ಕೈಬಿಟ್ಟು ವಿಕಾಶ್ ಸಿಂಗ್ ಅವರನ್ನು ಸೇರ್ಪಡಿ ಮಾಡಲಾಗಿದೆ.

ಅರ್ಹತಾ ಮಟ್ಟ ತಲುಪಲು ವಿಫಲವಾದ ಕಾರಣಕ್ಕೆ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ 4x100 ಮೀ. ರಿಲೇ ತಂಡವನ್ನು ಕಳುಹಿಸದಿರಲು ನಿರ್ಧರಿಸಲಾಯಿತು.

ಫುಟ್‌ಬಾಲ್: ಅಗ್ನಿಪುತ್ರಗೆ ಜಯ

ಬೆಂಗಳೂರು: ಎಫ್‌ಸಿ ಅಗ್ನಿಪುತ್ರ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–1ರಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ನಿಖಿಲ್‌ರಾಜ್ (15, 28ನೇ) ಎರಡು ಗೋಲು ಗಳಿಸಿ ಮಿಂಚಿದರು. ರೂಟ್ಸ್ ಪರ ಅನಿರುದ್ಧ್ ಮುಕುಂದನ್ (88ನೇ) ಏಕೈಕ ಗೋಲು ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ಸೌತ್ ಯುನೈಟೆಡ್ ಎಫ್‌ಸಿ ತಂಡವು ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದೊಂದಿಗೆ ಗೋಲಿಲ್ಲದೇ ಡ್ರಾ ಸಾಧಿಸಿತು.

ಇಂದಿನ ಪಂದ್ಯಗಳು

ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ–ಬಿಯುಎಫ್‌ಸಿ (ಮಧ್ಯಾಹ್ನ 1.30)

ಎಫ್‌ಸಿ ಬೆಂಗಳೂರು ಯುನೈಟೆಡ್–ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ (ಮಧ್ಯಾಹ್ನ 3.30)